ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ

ವಿವೇಕಪ್ರಭ

ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ

₹ 14

ನವೆಂಬರ್ -2016

PACKAGE TOURS 2016-17

Hotel Room Accom. & South Indian Veg. Food

Mini Andhra : 05 Days

Nov 23



Mantralaya, Srishailam, Mahanandi, Ahobila, Nava Narasimha Temples (Jwala, Pavana, Malola, Kroda, Karanja, Bhargava, Yogananda, Chatravata & Pavana)

South India : 10 Days

Jan 28

Guruvayur, Kaladi, Trivandram, Suchindram, Kovalam, Kanyakumari, Rameshwaram, Madurai, Srirangam, Tanjore, Kumbakonam, Chidambaram, Thiruvannamalai, Navagraha Temples

Dwarka & Jyothirlinga : 24 Days

Jan 28, Feb 25

Jaipur, Pushkar, Ajmer, Nathadwar, Kankroli, Eklingji, Udaipur, Mt. Abu, Mathrugaya, Dwarka, Bet Dwarka, Nagesham, Mul Dwarka, Porbandar, Veraval, Somnath, Dakor, Ahmedabad, Ujjain, Omkareshwar, Parli, Aurangabad, Ellora, Grishneshwar, Triyambak, Nasik, Shani Singanapur, Shirdi, Bhimashankar.

Shaktipeetha Manali Special : 18 Days

Mar 14

Wagah Border [Indo-Pak Border], Amritsar, Vaishnavi Devi, Chamunda, Kangra, Chintapurni, Jwalamukhi, Baijnath, Kullu-Manali, Vasista, Rohtang Pass [Optional], Naina Devi, Kufri, Shimla, Chandigarh, Kurukshetra, New Delhi

INTERNATIONAL TOURS

Dubai, Singapore, Malaysia, Thailand, Sri Lanka

Shri Hansaa Travels

Recognised by Department of Tourism, Govt. of Karnataka

: 640, 40th Cross, 8th Block, Jayanagar, Bangalore - 70

: hansaatravels@gmail.com : hansaatravels.com

080-26643276 / 26543891 / 9341215612 / 9341415612

ವ್ಯವಸ್ಥಾಪಕ ಸಂಪಾದಕರು
ಸ್ವಾಮಿ ಆತ್ಮಜ್ಞಾನಂದ

ಸಂಪಾದಕರು
ಸ್ವಾಮಿ ಜ್ಞಾನಯೋಗಾನಂದ

ನೆರವು:
ಆರ್. ಎಸ್. ಪೂರ್ಣಾನಂದ
ಡಾ. ಕೆ. ಎಲ್. ಪ್ರಸನ್ನಾಕ್ಷೀ
ಡಾ. ಎಚ್. ಪಾಂಡುರಂಗ ವಿಠಲ

ಅಕ್ಷರ ಜೋಡಣೆ
ಶ್ರೀರಾಮಕೃಷ್ಣ ಆಶ್ರಮ, ಮೈಸೂರು
ಮುದ್ರಣ
ಮಯೂರ್ ಗ್ರಾಫಿಕ್ಸ್, ಬೆಂಗಳೂರು

E-mail:
mysuru.vivekaprabha@rkmm.org
Website: www.vivekaprabha.net
ಫೋನ್ : 9481533505

ಮುಖಪುಟ:
ಬಾಳಬೇಕಾಗಿದೆ ನಾವು-ನೀವು

ಈ ಪತ್ರಿಕೆಯ ಧ್ಯೇಯ

'ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.'

– ಸ್ವಾಮಿ ವಿವೇಕಾನಂದ

ಚಂದಾ ವಿವರ

ಬಿಡಿ ಪ್ರತಿ : ₹ 14
ವಾರ್ಷಿಕ : ₹ 140
ಮೂರು ವರ್ಷ : ₹ 375
ಆಜೀವ (25 ವರ್ಷ) : ₹ 3,000
ಪೋಷಕರು : ₹ 5,000 ಅಥವಾ ಹೆಚ್ಚು.
ವಿದೇಶಗಳಿಗೆ : (ಏರ್‌ಮೇಲ್)
ವಾರ್ಷಿಕ : $ 20; ಮೂರು ವರ್ಷ : $ 60
ಆಜೀವ (25ವರ್ಷ) : $ 300
ಪೋಷಕರು : $ 600 ಅಥವಾ ಹೆಚ್ಚು.

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20 ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ನವೆಂಬರ್-2016 ಸಂಪುಟ 17 ಸಂಚಿಕೆ 11

ವಿವೇಕ ಪ್ರಭ

ಪರಿವಿಡಿ



4 ಪ್ರಾರ್ಥನೆ : ಶ್ರೀರಾಮಕೃಷ್ಣ ಸುಪ್ರಭಾತಮ್ - ೧ ಸೂಕ್ತಿಪ್ರಭ
7 ಸಂಪಾದಕೀಯ: ಬುದ್ಧಿ, ಹೃದಯಗಳು ಒಂದಾದಾಗ..
10 ಶ್ರೀರಾಮಕೃಷ್ಣ ವಚನವೇದದಿಂದ: ರಾಗಾಭಕ್ತಿ
30 ಪುಸ್ತಕ ಪರಿಚಯ
36 ಜಪಾನಿನ ಕಥೆಗಳು: ಚಂದ್ರಕುಮಾರಿ *ರಾಜಕೃಷ್ಣ ಭಟ್ಟಾಚಾರ್ಯ*
42 ಸುದ್ದಿಸಂಚಯ

ಧಾರಾವಾಹಿ

11 ಕಳೆದ ದಿನಗಳ ನೆನಪುಗಳು
ಸ್ವಾಮಿ ಶ್ರದ್ಧಾನಂದ

ವಿಶೇಷ ಲೇಖನ

15 ಏಕಾಗ್ರತೆ ಮತ್ತು ಅದನ್ನು ಸಾಧಿಸುವ ಮಾರ್ಗ
ಸ್ವಾಮಿ ಮುಕ್ತಿರೂಪಾನಂದ

19 ಬದುಕಿ ಬಾಳಬೇಕಾಗಿದೆ ನಾವು - ನೀವು
ಜಿ.ಎಸ್. ಜಯದೇವ

23 ಚಿತ್
ಸ್ವಾಮಿ ಶಿವಾಕಾಂತಾನಂದ

28 ಪವಿತ್ರತೆ ಮತ್ತು ಸಂಸ್ಕಾರ
ಪುಷ್ಪಾ ಶೇಷಾದ್ರಿ



32 ಸಂತರ ಜೀವನ ಕಥೆ
ದೀನ ಸಂತನ ಪವಿತ್ರ ಕಥೆ
ಸ್ವಾಮಿ ವೀರೇಶಾನಂದ

38 ಚಿತ್ರಕಥೆ
ಸೋದರಿ ನಿವೇದಿತಾ
ಭಾಗ-3

ಈ ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನಗಳಲ್ಲಿನ ಅಭಿಪ್ರಾಯಗಳು ಲೇಖಕರವು. ಈ ಪತ್ರಿಕೆಯಲ್ಲಿ ಪ್ರಕಟವಾಗಿರುವ ಜಾಹೀರಾತುಗಳಲ್ಲಿನ ಮಾಹಿತಿಗಳ ನಿಖರತೆಗೆ ಈ ಪತ್ರಿಕೆ ಜವಾಬ್ದಾರಿಯಲ್ಲ. ಈ ಪತ್ರಿಕೆಯಲ್ಲಿನ ಯಾವ ಭಾಗವನ್ನೂ ಪ್ರಕಾಶಕರ ಲಿಖಿತ ಅನುಮತಿ ಇಲ್ಲದೆ ಬೇರೆಡೆ ಪ್ರಕಟಿಸುವಂತಿಲ್ಲ.

ಪ್ರಾರ್ಥನೆ

ಶ್ರೀರಾಮಕೃಷ್ಣ ಸುಪ್ರಭಾತಮ್ - ೧

ಶ್ರೀರಾಜಮಾನ ಮುಖನಿರ್ಗತದಿವ್ಯಭಾನೋ
ಘೋರಾಜ್ಞತಾಂಧತಮಸೋತ್ಕರಚಂಡಭಾನೋ ।
ಸ್ವಾರಾಜ್ಯಸೌಖ್ಯದನಿಜಾಂಘ್ರಿಜುಷಾಮಜಸ್ರಂ
ಶ್ರೀರಾಮಕೃಷ್ಣ ಭಗವನ್ ತವ ಸುಪ್ರಭಾತಮ್ ॥ ೧ ॥

ಶ್ರೀಲಕ್ಷ್ಮೀದೇವಿಯೊಂದಿಗೆ ಬೆಳಗುತ್ತಿರುವ ಶ್ರೀವಿಷ್ಣುವು ನೀಡಿದ ಭರವಸೆಯಂತೆ ಅವತಾರವಾಗಿ ಉದಯಿಸಿದ ದಿವ್ಯಸೂರ್ಯನೆ, ಘೋರ ಅಜ್ಞಾನಾಂಧಕಾರವನ್ನು ನಿರ್ಮೂಲ ಮಾಡುವ ಪ್ರಚಂಡಸೂರ್ಯನೆ, ನಿನ್ನ ಪಾದಗಳನ್ನಾಶ್ರಯಿಸಿ ಆನಂದಿಸುವವರಿಗೆ ಸ್ವಾರಾಜ್ಯಸುಖವನ್ನು ಸದಾ ಕರುಣಿಸುವವನೆ, ಹೇ ಶ್ರೀರಾಮಕೃಷ್ಣ ಭಗವಂತ, ನಿನಗೆ ಸುಪ್ರಭಾತ.

ಸಂಸಾರತಾಪವಿವಶಾಖಿಲಮಾನವಾನಾಂ
ಕಂಸಾರಿನಾಮಜಪಭೇಷಜರತ್ನದಾಯಿನ್ ।
ಹಿಂಸಾ ಮನೋವಚನಕಾಯಗತಾಂ ವಿಧುನ್ವನ್
ಶ್ರೀರಾಮಕೃಷ್ಣ ಭಗವನ್ ತವ ಸುಪ್ರಭಾತಮ್ ॥ ೨ ॥

ಸಂಸಾರದ ತಾಪಕ್ಕೆ ಸಿಲುಕಿ, ಅವುಗಳಿಗೆ ಅಧೀನರಾಗಿ ತಮ್ಮತನವನ್ನೇ ಕಳೆದುಕೊಂಡಿರುವ ಸಕಲ ಮಾನವರಿಗೆ ಯಾವುದೇ ಭೇದಭಾವವಿಲ್ಲದೆ ಕೃಷ್ಣನಾಮಜಪವೆಂಬ ಶ್ರೇಷ್ಠ ಔಷಧವನ್ನು ಕರುಣಿಸಿದ, ಶರೀರ-ಮನಸ್ಸು-ಮಾತುಗಳಲ್ಲಿ ಅವರು ಅನುಭವಿಸುತ್ತಿರುವ ಹಿಂಸೆಯನ್ನು ಹೋಗಲಾಡಿಸಿದ ಶ್ರೀರಾಮಕೃಷ್ಣ ಪ್ರಭುವೆ, ನಿನಗೆ ಸುಪ್ರಭಾತ.

ಕಾಲೀನಿಷೇವಣಪರಾಯಣ ನೈಕಶೋಕ
ಪಾಲೀವಶಾವಶಜನಾವನಬದ್ಧಬುದ್ಧೇ
ನಾಲೀಕನೇತ್ರ ಕರುಣಾಮೃತಪೂರಿತಾತ್ಮನ್
ಶ್ರೀರಾಮಕೃಷ್ಣ ಭಗವನ್ ತವ ಸುಪ್ರಭಾತಮ್ ॥ ೩ ॥

ಕಾಳೀದೇವಿಯ ಸೇವೆಯಲ್ಲಿ ಸಂಪೂರ್ಣ ನಿರತನಾಗಿರುವ, ಅನೇಕ ಶೋಕಪರಂಪರೆಗೆ ಅಧೀನರಾಗಿರುವ ಜನರನ್ನು ಕಾಪಾಡಲೇಬೇಕೆಂಬ ಸಂಕಲ್ಪವುಳ್ಳ, ಕಮಲದಂತಹ ಸುಂದರ ಕಣ್ಣುಗಳನ್ನು ಹೊಂದಿರುವ, ಕರುಣೆಯೆಂಬ ಅಮೃತವನ್ನು ಪೂರ್ಣವಾಗಿ ತುಂಬಿಕೊಂಡಿರುವ ಶ್ರೀರಾಮಕೃಷ್ಣದೇವ, ನಿನಗೆ ಸುಪ್ರಭಾತ.

– ಸ್ವಾಮಿ ಜ್ಞಾನಾನಂದ ಸರಸ್ವತೀ

ಸೂಕ್ತಿಪ್ರಭ

ಉಪನಿಷತ್ ಸೂಕ್ತಿಗಳು

ಈ ಪ್ರಪಂಚದಲ್ಲಿ ಕರ್ಮಗಳನ್ನು ಮಾಡುತ್ತ ನೂರು ವರ್ಷಗಳವರೆಗೆ ಬದುಕುವುದನ್ನು ಮನುಷ್ಯನು ಬಯಸಬೇಕು. ಹೀಗೆ ಮಾಡುವುದರಿಂದ ಅವನಿಗೆ ಕರ್ಮಲೇಪವುಂಟಾಗುವುದಿಲ್ಲ.

– ಈಶಾವಾಸ್ಯೋಪನಿಷತ್ತು, ೨

ಯಾವಾಗ ಒಬ್ಬಾತನು ತನ್ನ ಪ್ರತಿಯೊಂದು ಆಲೋಚನೆಯಲ್ಲೂ ಬ್ರಹ್ಮವನ್ನೇ ಕಾಣುತ್ತಾನೋ ಆಗ ಅವನು ಅಮೃತತ್ವವನ್ನು ಹೊಂದುತ್ತಾನೆ. ಇಂಥ ಆತ್ಮನನ್ನು ತಿಳಿಯುವುದರಿಂದ ಅವನು ಶಕ್ತಿಸಂಪನ್ನನಾಗುತ್ತಾನೆ.

–ಕೇನೋಪನಿಷತ್ತು , ೨.೪

ಸತ್ಯವೇ ಜಯಿಸುತ್ತದೆ, ಅಸತ್ಯವಲ್ಲ. ಆ ಪರಮ ಸತ್ಯದ ನೆಲೆಯನ್ನು ಹೊಂದಲು ಋಷಿಗಳು ಹೋಗುವ ಪಥವು ಸತ್ಯದಿಂದ ಹರಡಿರುತ್ತದೆ.

–ಮುಂಡಕೋಪನಿಷತ್ತು , ೩.೧.೬

ಶ್ರೇಯಸ್ಸಿನ ಮಾರ್ಗ ಹಾಗೂ ಪ್ರೇಯಸ್ಸಿನ (ಪ್ರಿಯವಾದ ವಸ್ತುಗಳ) ಮಾರ್ಗ ಇವೆರಡೂ ಬೇರೆ ಬೇರೆ. ಶ್ರೇಯಸ್ಸನ್ನು ಆರಿಸಿಕೊಂಡವನಿಗೆ ಒಳ್ಳೆಯದಾಗುತ್ತದೆ, ಪ್ರೇಯಸ್ಸನ್ನು ಆರಿಸಿಕೊಳ್ಳುವವನು ಪುರುಷಾರ್ಥದಿಂದ ಚ್ಯುತಿ ಹೊಂದಿ ಪತಿತನಾಗುತ್ತಾನೆ.

–ಕಠೋಪನಿಷತ್ತು , ೨.೧

ಸತ್ಯವನ್ನೇ ಆಡು, ಧರ್ಮವನ್ನೇ ಆಚರಿಸು. ಸ್ವಾಧ್ಯಾಯ (ಅಧ್ಯಯನ)ವನ್ನು ಮರೆಯಬೇಡ. ಯಾವ ಕರ್ಮಗಳು ನಿಂದಿತವಲ್ಲವೋ ಅವುಗಳನ್ನು ಮಾಡಬೇಕು. ಉಳಿದವನ್ನು ಮಾಡಬಾರದು.

–ತೈತ್ತಿರೀಯೋಪನಿಷತ್ತು , ೧.೧೧

ಇದೆಲ್ಲವೂ ಬ್ರಹ್ಮವೇ.

–ಛಾಂದೋಗ್ಯೋಪನಿಷತ್ತು , ೩.೧೪.೧

ಎಳ್ಳಿನಲ್ಲಿರುವ ಎಣ್ಣೆಯಂತೆ, ಮೊಸರಿನಲ್ಲಿರುವ ತುಪ್ಪದಂತೆ, ಒಣಗಿದ ನದೀತಳದಲ್ಲಿರುವ ನೀರಿನಂತೆ, ಅರಣೆಯಲ್ಲಿರುವ ಅಗ್ನಿಯಂತೆ ಯಾವನು ಆತ್ಮನನ್ನು ಸತ್ಯದಿಂದಲೂ ತಪಸ್ಸಿನಿಂದಲೂ ಸಾಕ್ಷಾತ್ಕರಿಸಿಕೊಳ್ಳುತ್ತಾನೋ ಅವನಿಂದ ಈ ಆತ್ಮನು ತನ್ನಲ್ಲಿಯೇ ಗ್ರಹಿಸಲ್ಪಡುತ್ತಾನೆ.

–ಶ್ವೇತಾಶ್ವತರೋಪನಿಷತ್ತು , ೧.೧೫

ರಾಮಕೃಷ್ಣ ಮಠ

ಮಂಗಳಾದೇವಿ, ಮಂಗಳೂರು
0824-2414412, 9449288200
mangaloremath@gmail.com

ಭಾವಸಂಗಮ

ಭಕ್ತ ಸಮಾಗಮ

4, 5, 6 ನವೆಂಬರ್ 2016

ಕಡಲ ಕಿನಾರೆ ಮಂಗಳೂರಿಗೆ ಹೃತ್ಪೂರ್ವಕ ಸ್ವಾಗತ

ಬನ್ನಿರಿ! ಆಲಿಸಿ, ಆನಂದಿಸಿ.

ದಿವ್ಯತ್ರಯರ ಧಾರೆ

ರಾಮಕೃಷ್ಣ ಸಂಘ: ಬೆಳೆದು ಬಂದ ಬಗೆ
ರಾಮಕೃಷ್ಣ ಸಂಘದ ಧ್ಯೇಯೋದ್ದೇಶಗಳು ಮತ್ತು ವೈಶಿಷ್ಟ್ಯ
'ಶ್ರೀರಾಮಕೃಷ್ಣ ಲೀಲಾಪ್ರಸಂಗ' –
ಯುಗಾವತಾರನ ಜೀವನದರ್ಶನ
'ಶ್ರೀರಾಮಕೃಷ್ಣ ವಚನವೇದ': ಉಪದೇಶಕಥನದ ಅನನ್ಯತೆ
ಇಂದಿಗೆ ಬೇಕಾದ ಶ್ರೀರಾಮಕೃಷ್ಣ
ಶ್ರೀಮಾತೆಯ ಜೀವನಕಥನ : ಸರಳತೆಯಲ್ಲಿ ಭವ್ಯತೆ
ಶ್ರೀಮಾತೆಯ ಸಂದೇಶ: ಅನುದಿನದ ಅಧ್ಯಾತ್ಮ
ಆಧುನಿಕ ಮಹಿಳೆಗೆ ಶ್ರೀಮಾತೆಯವರ ಪ್ರಸ್ತುತತೆ
ಸ್ವಾಮಿ ವಿವೇಕಾನಂದರ ಜೀವನ: ಸಾಧನೆ–ಸಿದ್ಧಿಗಳ ಸ್ವರೂಪ
ಸ್ವಾಮಿ ವಿವೇಕಾನಂದರು ನಿರೂಪಿಸಿದಂತೆ ಯೋಗಮಾರ್ಗಗಳ ವಿನ್ಯಾಸ
ಸಮಕಾಲೀನ ಜಗತ್ತಿಗೆ ಸ್ವಾಮಿ ವಿವೇಕಾನಂದರ ಬೆಳಕು

ಅಧ್ಯಾತ್ಮಧಾರೆ

ಅಧ್ಯಾತ್ಮ ಮತ್ತು ತ್ಯಾಗಜೀವನ
ಅಧ್ಯಾತ್ಮ ಮತ್ತು ಕುಟುಂಬ ಜೀವನ
ಅಧ್ಯಾತ್ಮ ಮತ್ತು ಸಮಾಜ ಜೀವನ
ಜಪ
ಧ್ಯಾನ
ಸ್ವಾಧ್ಯಾಯ
ಸಾಹಿತ್ಯ ಮತ್ತು ಅಧ್ಯಾತ್ಮ
ಶಿಕ್ಷಣ ಮತ್ತು ಅಧ್ಯಾತ್ಮ
ಕ್ರೀಡೆ ಮತ್ತು ಅಧ್ಯಾತ್ಮ

ಶಾಸ್ತ್ರ–ಕಾವ್ಯಧಾರೆ

ವೇದವಾಙ್ಮಯ: ಒಂದು ಅವಲೋಕನ
ಉಪನಿಷತ್ತುಗಳ ತಾತ್ವಿಕತೆ
ಭಗವದ್ಗೀತೆಯ ಸಂದೇಶ
ರಾಮಾಯಣದ ಲೋಕದರ್ಶನ
ಮಹಾಭಾರತ ಮತ್ತು ಜೀವನಮೌಲ್ಯಗಳು
ಭಾಗವತದರ್ಶನ

ಭಾವಸಂಗಮ – ಮೂರು ದಿನಗಳ ಕಾಲ ನಡೆಯಲಿರುವ ವಿಶೇಷ ಭಕ್ತ ಸಮಾಗಮ. ಪ್ರಧಾನವಾಗಿ ಒಂಬತ್ತು ಗೋಷ್ಠಿಗಳ ಮೂರು ಧಾರೆಗಳಲ್ಲಿ ಈ ಸಮ್ಮೇಳನವನ್ನು ಕಲ್ಪಿಸಿದೆ – ದಿವ್ಯತ್ರಯರ ಧಾರೆ, ಅಧ್ಯಾತ್ಮ ಧಾರೆ, ಶಾಸ್ತ್ರ–ಕಾವ್ಯ ಧಾರೆ.

ದಿವ್ಯತ್ರಯರ ಜೀವನ–ಸಂದೇಶ, ಸಮಕಾಲೀನ ಬದುಕಿಗೆ ಅವುಗಳ ಅನ್ವಯ ಇವನ್ನು 'ದಿವ್ಯತ್ರಯರ ಧಾರೆ' ಒಳಗೊಳ್ಳುತ್ತದೆ. ಅಧ್ಯಾತ್ಮದ ಸ್ವರೂಪ, ಬದುಕಿನ ಸಂದರ್ಭದಲ್ಲಿ ಅದರ ಅನುಷ್ಠಾನ, ಸಾಧನೆಯ ಮುಖಗಳು, ಬದುಕಿನ ವಿವಿಧ ಕ್ಷೇತ್ರಗಳೊಂದಿಗೆ ಅಧ್ಯಾತ್ಮವು ಹೊಂದಿರುವ ಸಂಬಂಧ ಇವನ್ನು 'ಅಧ್ಯಾತ್ಮ ಧಾರೆ'ಯ ಗೋಷ್ಠಿಗಳು ಚರ್ಚಿಸುತ್ತವೆ. ವೇದ, ಉಪನಿಷತ್ತುಗಳು, ಭಗವದ್ಗೀತೆ, ರಾಮಾಯಣ, ಮಹಾಭಾರತ, ಭಾಗವತ ಇವುಗಳ ತಾತ್ವಿಕತೆ ಹಾಗೂ ಅನ್ವಯಗಳ ಹಲವು ನೆಲೆಗಳ ಚಿಂತನೆ 'ಶಾಸ್ತ್ರ–ಕಾವ್ಯಧಾರೆ'ಯ ಗೋಷ್ಠಿಗಳಲ್ಲಿರುತ್ತವೆ. ವಿಶೇಷವಾಗಿ ರಾಮಕೃಷ್ಣ ಪರಂಪರೆ ಹಾಗೂ ಸಾಧಾರಣ ನೆಲೆಯಲ್ಲಿ ಭಾರತೀಯ ತತ್ತ್ವ–ಅಧ್ಯಾತ್ಮಗಳ ಪರಂಪರೆಗಳನ್ನು ಈ ಸಮ್ಮೇಳನ ಅನಾವರಣಗೊಳಿಸಲಿದೆ. ಇದರೊಂದಿಗೆ ಪ್ರಶ್ನೋತ್ತರ, ಭಜನೆ, ನಿರ್ದೇಶಿತ ಧ್ಯಾನ, ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಸಮ್ಮೇಳನದ ಭಾಗವಾಗಿರುತ್ತವೆ. ಇಂತಹ ಅಪೂರ್ವ ಭಕ್ತಸಮಾಗಮದಲ್ಲಿ ಭಾಗವಹಿಸುವ, ಕಾರ್ಯಕ್ರಮಗಳನ್ನು ಆನಂದಿಸಿ ಆಸ್ವಾದಿಸುವ ಸದವಕಾಶ ನಿಮ್ಮದಾಗಲಿ.

ನೀವು ಬನ್ನಿ , ನಿಮ್ಮ ಮಿತ್ರರನ್ನೂ ಕರೆತನ್ನಿ.

ಪ್ರವೇಶ ಶುಲ್ಕ
ವಸತಿ ಸಹಿತ – ರೂ. 500/–
ವಸತಿ ರಹಿತ – ರೂ. 300/–

ಸಂಪರ್ಕಿಸಿ
9449288200

ಆರ್ಕಿಡ್ ಟ್ರಾವಲ್ & ಟೂರ್ಸ್

Orchid Travel & Tours

ಅವಿಸ್ಮರಣೀಯ ವಿಶೇಷ ಪ್ರವಾಸಗಳು

ದುಬೈ

5 ದಿನಗಳ ದುಬೈ, ಅಬುಧಾಬಿ, ಶಾರ್ಜ ಪ್ರವಾಸ

ಜನವರಿ
ಶಾಪಿಂಗ್ ಫೆಸ್ಟಿವಲ್

ದುಬೈ ಸಿಟಿ ಟೂರ್, ಬುರ್ಜ್ ಖಲೀಫಾ, ಡೌ ಕ್ರೂಸ್, ಡೆಸರ್ಟ್ ಸಫಾರಿ
ಅಬುಧಾಬಿ ಸಿಟಿ ಟೂರ್, ಶಾರ್ಜ ಸಿಟಿ ಟೂರ್

ಸಿಂಗಾಪುರ್

7 ದಿನಗಳ ಸಿಂಗಾಪುರ-ಮಲೇಶಿಯ ಪ್ರವಾಸ

ಡಿಸೆಂಬರ್, ಜನವರಿ
ಫೆಬ್ರವರಿ

ಸಿಂಗಾಪುರ : ಸಿಟಿ ಟೂರ್, ಸೆಂಟೋಸ ಐಲ್ಯಾಂಡ್ ಜೊತೆಗೆ ಸಿ ಅಕ್ವೇರಿಯಂ,
ವಿಂಗ್ಸ್ ಆಫ್ ಟೈಮ್, ಜುರೋಂಗ್ ಬರ್ಡ್‌ಪಾರ್ಕ್,
ಯುನಿವರ್ಸಲ್ ಸ್ಟುಡಿಯೋ
ಮಲೇಶಿಯ : ಕೌಲಾಲಂಪುರ್ ಸಿಟಿ ಟೂರ್, ಬಾಟು ಗುಹೆ, ಪುತ್ರಜಯ,
ಜಂಟಿಂಗ್ ಹೈಲ್ಯಾಂಡ್

ಆಸ್ಟ್ರೇಲಿಯಾ

18 ದಿನಗಳ ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ಪ್ರವಾಸ

ಫೆಬ್ರವರಿ

ಸಿಡ್ನಿ, ಗೋಲ್ಡ್ ಕೋಸ್ಟ್, ಕೈರ್ನ್ಸ್, ಮೆಲ್ಬೋರ್ನ್ (ಆಸ್ಟ್ರೇಲಿಯಾ)
ಆಕ್ಲೆಂಡ್, ರೊಟೂರಾ, ಕ್ವೀನ್ಸ್‌ಟೌನ್, ಕ್ರೈಸ್ಟ್‌ಚರ್ಚ್ (ನ್ಯೂಜಿಲ್ಯಾಂಡ್)

ಜಪಾನ್

7 ದಿನಗಳ ಜಪಾನ್ ಪ್ರವಾಸ

ನವೆಂಬರ್ 28

ಹೈ ಸ್ಪೀಡ್ ಬುಲೆಟ್ ರೈಲಿನಲ್ಲಿ ಪ್ರಯಾಣದ ಅನುಭವ ಹಾಗೂ
ಜಪಾನ್ ರಾಜಧಾನಿ ಟೋಕಿಯೋ
ಪ್ರವಾಸ ಸ್ಥಳ : ಒಸಾಕಾ, ಹಿರೋಷಿಮಾ, ಕ್ಯೋಟೋ, ಮೌಂಟ್‌ಫುಜಿ
ನಾರ ನಗರ ವೀಕ್ಷಣೆ ಹಾಗೂ ಇತರೆ

ಕಾಂಬೋಡಿಯಾ

8 ದಿನಗಳ ಥೈಲ್ಯಾಂಡ್ - ಕಾಂಬೋಡಿಯ ಪ್ರವಾಸ

ನವೆಂಬರ್ 25

ಕಾಂಬೋಡಿಯ - ಸಿಯಾಮ್‌ರಿಪ್, ಅಂಕೊರ್‌ವಾಟ್,
ತೋಂನ್ಲೇ ಸ್ಯಾಪ್ ಸರೋವರ, ತಾಪ್ರಾಮ್, ಬಯಾನ್, ಬಪೂನ್ ದೇವಾಲಯಗಳು,
ಥೈಲ್ಯಾಂಡ್ - ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಹಾಗೂ
ಬ್ಯಾಂಕಾಕ್ ಸಿಟಿ ಟೂರ್, ಮರೀನಾ ಪಾರ್ಕ್, ವಾಕರ್ ಸ್ಟ್ರೀಟ್

ಅಹೋಬಿಲಂ

3 ದಿನಗಳ ಅಹೋಬಿಲಂ ನವನಾರಸಿಂಹ ಪ್ರವಾಸ

ನವೆಂಬರ್
ಡಿಸೆಂಬರ್, ಜನವರಿ

ಪ್ರವಾಸ ಸ್ಥಳಗಳು: ಜ್ವಾಲಾನರಸಿಂಹ, ಪಾವನನರಸಿಂಹ, ವರಹಾನರಸಿಂಹ
ಕಾರಂಜಿನರಸಿಂಹ, ಮಾಲೋಲನರಸಿಂಹ, ಯೋಗನರಸಿಂಹ, ಭಾರ್ಗವನರಸಿಂಹ
ಉಗ್ರನರಸಿಂಹ, ಛತ್ರವಟನರಸಿಂಹ ಹಾಗೂ ಲಕ್ಷ್ಮೀನರಸಿಂಹ

ಪ್ರಧಾನ ಕಛೇರಿ : ಬಸವನಗುಡಿ
ನಂ. 98, 1ನೇ ಮಹಡಿ, ಡಿವಿಜಿ ರಸ್ತೆ
ಬಸವನಗುಡಿ, ಬೆಂಗಳೂರು - 560004.
ಫೋನ್: 080-26670646, 26621983
ಮೊಬೈಲ್ : 9900080799
9900080795

ಶಾಖಾ ಕಛೇರಿ : ಮಲ್ಲೇಶ್ವರಂ
ನಂ.198, 1ನೇ ಮಹಡಿ, 11ನೇ ಕ್ರಾಸ್, ಯತಿರಾಜಮಠ
ಬಿಲ್ಡಿಂಗ್, ಮಲ್ಲೇಶ್ವರಂ, ಬೆಂಗಳೂರು - 560003.
ಫೋನ್: 080-41204155, 23445559
ಮೊಬೈಲ್ : 9900080793
9900080791

ಶಾಖಾ ಕಛೇರಿ : ಶಾಂತಿನಗರ
ನಂ.4, 1ನೇ ಮಹಡಿ, ದಿವ್ಯಶ್ರೀ ಚೇಂಬರ್ಸ್ ಎದುರು
ಲ್ಯಾಂಗ್‌ಫೋರ್ಡ್ ಟೌನ್, ಶಾಂತಿನಗರ,
ಬೆಂಗಳೂರು - 560025. ಫೋನ್: 080-22221645
ಮೊಬೈಲ್ : 9900080794
9900080796

www.orchidtours.net

ಸಂಪಾದಕೀಯ

ಬುದ್ಧಿ, ಹೃದಯಗಳು ಒಂದಾದಾಗ ..

ಮಾನವನ ಗತಿಯನ್ನು ನಿರ್ಧರಿಸುವಲ್ಲಿ, ಅವನ ಸಾಧನೆ-ಸಿದ್ಧಿ-ಸಾರ್ಥಕ್ಯಗಳನ್ನು ನಿರ್ಣಯಿಸುವಲ್ಲಿ ಅವನ ಬುದ್ಧಿ ಅತ್ಯಗತ್ಯವಾದ ಅಂಶವೋ, ಅವನ ಹೃದಯವೇ ನಿರ್ಣಾಯಕ ಅಂಶವೋ— ಈ ಪ್ರಶ್ನೆ ತುಂಬ ಹಳೆಯದು. ಪ್ರಮುಖ ಚಿಂತಕರೆಲ್ಲ ಮಾನವನ ಈ ಎರಡು ಪ್ರಮುಖ ಗುಣ, ಸ್ವಭಾವಗಳನ್ನು ಕುರಿತು ಚಿಂತಿಸಿದ್ದಾರೆ. ಬಂಗಾಳದ ಪ್ರಸಿದ್ಧ ಅನುಭಾವಿ ಕವಿ ರಾಮಪ್ರಸಾದ ಜಗನ್ಮಾತೆಯ ಇರವನ್ನು ಕುರಿತು ಹೀಗೆ ಹಾಡುತ್ತಾನೆ:

ಕುಬ್ಜನಾದವ ಮುಗಿಲ ಚಂದ್ರನ
ಹಿಡಿವ ಯತ್ನದ ತೆರದಲಿ
ಬುದ್ಧಿಯರಿತರು ಹೃದಯವರಿಯದು
ತಾಯಿ ದುರ್ಗೆಯ ನಿಜವನು ॥

ತಾಯಿ ದುರ್ಗೆಯ ನಿಜವನರಿಯುವ
ಧೀರರಾರೋ ಜಗದೊಳು ॥

ಲೌಕಿಕ ಜೀವನದಲ್ಲೂ, ಪಾರಮಾರ್ಥಿಕ ಬದುಕಿನಲ್ಲೂ ಹೃದಯದ ಪಾರಮ್ಯವನ್ನು ಹೊಗಳುವ ಹಲವು ಮಾತುಗಳನ್ನು ನಾವು ಕೇಳುತ್ತೇವೆ. ಆದರೂ ಹಲವು ದರ್ಶನಗಳು ಮತ್ತು ಸಿದ್ಧಾಂತಗಳು ಜ್ಞಾನದ, ವಿವೇಕದ ಹಾಗೂ ಬುದ್ಧಿಯ ಮಹತ್ವವನ್ನು ಎತ್ತಿ ಹಿಡಿಯುತ್ತವೆ. ಈ ಎರಡೂ ವಾದಗಳು ಕೆಲವೊಮ್ಮೆ ತಮ್ಮ ಮಹತ್ವವನ್ನು ಹೇಳುವ ಭರದಲ್ಲಿ ಇನ್ನೊಂದನ್ನು ತೆಗಳಿದ್ದೂ ಇದೆ. ನಿಜವಾಗಿಯೂ ಈ ಎರಡು ಗುಣಗಳ ಸ್ವಭಾವವೇನು? ಇವುಗಳಲ್ಲಿ ಅತ್ಯಾವಶ್ಯಕ ಸಂಗತಿ ಯಾವುದು? ಇವು ಮಾನವನ ಏಳಿಗೆಗೆ ಯಾವ ರೀತಿಯಲ್ಲಿ ಸಹಾಯಕವಾಗುವುವು? ಇವೆರಡರ ಸಮನ್ವಯ, ಸಾಮರಸ್ಯ ಸಾಧ್ಯವೆ? ಇಂಥ ಸಂಗತಿಗಳನ್ನೀಗ ಚರ್ಚಿಸೋಣ.

ಹೃದಯ : ಭಗವಂತನ ಸ್ಥಾನ

ಬುದ್ಧಿಗಿಂತ ಹೃದಯವೇ ಮುಖ್ಯವೆನ್ನಲು ಒಂದು ಮುಖ್ಯವಾದ ಕಾರಣವಿದೆ. ಭಗವಂತನು ಎಲ್ಲ ಜೀವಿಗಳ ಅಂತರಂಗದಲ್ಲಿ ಚೈತನ್ಯರೂಪದಲ್ಲಿ ನೆಲೆಸಿದ್ದಾನೆ ಎಂದು ಉಪನಿಷತ್ತು, ಗೀತೆ ಹಾಗೂ ಇತರ ವೇದಾಂತದ ಗ್ರಂಥಗಳು ಹೇಳುತ್ತವೆ. 'ಅಂತರಂಗದಲ್ಲಿ' ಎಂದರೆ ಹೃದಯದಲ್ಲಿ ಎಂದೂ ಕೆಲವೆಡೆ ವರ್ಣಿಸಲಾಗಿದೆ. ಭಕ್ತಿಯೇ ಪ್ರಧಾನವಾಗಿರುವ ಗ್ರಂಥಗಳಂತೂ ಭಗವಂತನು ಎಲ್ಲರ ಹೃದಯದಲ್ಲೇ ವಾಸಿಸುತ್ತಾನೆಂದೂ, ಭಕ್ತನ ಉಪಾಸನೆಗೆ ಒಲಿದು ಅವನು ವ್ಯಕ್ತವಾಗುವುದು ಹೃದಯದಲ್ಲೇ ಎಂದೂ ವಿವರಿಸುತ್ತವೆ. ಆದರೆ ಭಕ್ತಿಪರಂಪರೆ ಹೃದಯಕ್ಕೆ ಮಹತ್ವ ನೀಡಿರುವುದು ಈ ಶಾರೀರಿಕ ಅಂಶದಿಂದಾಗಿ ಅಲ್ಲ ; ಮಾನಸಿಕ ಅಂಶದಿಂದಾಗಿ. ಭಗವಂತನನ್ನು ಸಮೀಪಿಸಲು ಅತ್ಯಗತ್ಯವಾದ ಭಕ್ತಿ ಉತ್ಪನ್ನವಾಗುವುದು ಹೃದಯದಲ್ಲಿ ; ಹೀಗಾಗುವುದು ಭಾವಪೂರ್ಣವಾದ, ಪ್ರೇಮ ಹಾಗೂ ವ್ಯಾಕುಲತೆಗಳಿಂದ ಕೂಡಿದ ಕ್ರಿಯೆಗಳಿಂದ. ಆದ್ದರಿಂದ ಹೃದಯವಂತಿಕೆ, ಭಾವ ಅತ್ಯಂತ ಮುಖ್ಯವೆನ್ನಲಾಗಿದೆ.

ಯೋಗಸಾಧನೆಯಲ್ಲಿ ಸಾಧಕನು ಹೃದಯವನ್ನು ಒಂದು ಕಮಲದಂತೆ ಚಿಂತಿಸುವುದು, ಅದರಲ್ಲಿ ಪರಮಾತ್ಮನು ಕುಳಿತಿರುವಂತೆ ಕಲ್ಪಿಸಿಕೊಳ್ಳುವುದು ಕಂಡುಬರುತ್ತದೆ. ವಿವಿಧ ಪ್ರಜ್ಞಾಕೇಂದ್ರಗಳನ್ನು 'ಚಕ್ರ'ಗಳೆಂದು ಗುರುತಿಸುವ ತಂತ್ರಶಾಸ್ತ್ರದಲ್ಲೂ ಹೃದಯ ಪ್ರದೇಶ ಅತ್ಯಂತ ಮುಖ್ಯವಾದುದು. ಈ ಕಾರಣಗಳಿಂದಲೂ ಹೃದಯಕ್ಕೆ ಹೆಚ್ಚಿನ ಮಹತ್ವ ನೀಡಿರಬಹುದು.

ಆದರೆ ನಾವು ಚರ್ಚಿಸಬೇಕಾಗಿರುವ ವಿಷಯ ಕೇವಲ ಆಧ್ಯಾತ್ಮಿಕ ಕ್ಷೇತ್ರವನ್ನು ಮಾತ್ರ ಕುರಿತಾಗಿಲ್ಲ ; ಲೌಕಿಕ ಜೀವನದಲ್ಲೂ, ಮಾನವನ ಸ್ವರೂಪ-ಸ್ವಭಾವಗಳಿಗೆ ಸಂಬಂಧಿಸಿದಂತೆಯೂ ಈ ಮಾನಸಿಕ ಗುಣಗಳ ವಿಚಾರವಾಗಿ ಜಿಜ್ಞಾಸೆ ನಡೆಯಬೇಕು. ಒಟ್ಟು ಮಾನವನ ವಿಕಾಸದಲ್ಲಿ ಬುದ್ಧಿ-ಹೃದಯಗಳು ಅಸಾಧಾರಣ ರೀತಿಯಲ್ಲಿ, ನಾನಾ ಹಂತಗಳಲ್ಲಿ ಅವನನ್ನು ಮುನ್ನಡೆಸಿದೆ. ಆದ್ದರಿಂದ ಬುದ್ಧಿ, ಹೃದಯ ಎಂದರೆ 'ತಲೆ ಮತ್ತು ಎದೆ' ಎಂದು ತೀರ ಸರಳೀಕರಣಗೊಳಿಸದೆ, ಇವೆರಡೂ ಮಾನವ ಸ್ವಭಾವದ ಎರಡು ಮಾನಸಿಕ ಕ್ರಿಯೆಗಳು ಎಂದು ತಿಳಿದುಕೊಳ್ಳಬೇಕು.

ಮನಸ್ಸು : ಬುದ್ಧಿ, ಹೃದಯಗಳ ನೆಲೆ

ವೇದಾಂತದ ಪ್ರಕಾರ ಮನಸ್ಸು, ಬುದ್ಧಿ ಇವು ಬೇರೆ ಬೇರೆಯಲ್ಲ. ಮನಸ್ಸು ದೇಹದ ಭಾಗವಲ್ಲ ; ಅದನ್ನು ಸೂಕ್ಷ್ಮ ಇಂದ್ರಿಯ ಅಥವಾ 'ಅಂತಃಕರಣ' ಎನ್ನಲಾಗಿದೆ. ಅದೇ ಅಂತಃಕರಣ ಆಲೋಚನೆಗಳಿಂದ ಕೂಡಿದಾಗ 'ಮನಸ್ಸು' ಎನ್ನಿಸಿಕೊಳ್ಳುತ್ತದೆ. 'ಇದು ಹೀಗೆ' ಎಂದು ನಿಶ್ಚಯಿಸುವಾಗಲೂ, ಎರಡರ ನಡುವೆ ಯಾವುದು ಸರಿ ಯಾವುದು

ತಪ್ಪು, ಯಾವುದು ಸತ್ಯ ಯಾವುದು ಸುಳ್ಳು, ಯಾವುದು ಯೋಗ್ಯ ಯಾವುದು ಅಯೋಗ್ಯ ಎಂದು ನಿರ್ಣಯಿಸುವಾಗಲೂ 'ಬುದ್ಧಿ' ಕೆಲಸ ಮಾಡುತ್ತದೆ. ಒಂದು ವಸ್ತುವಿನ, ವಿಷಯದ ಜ್ಞಾನವನ್ನು ಪ್ರಕಾಶಗೊಳಿಸುವುದು ಬುದ್ಧಿಯ ಕೆಲಸ. ಸದಾ ಮನಸ್ಸಿನ ಹಿನ್ನೆಲೆಯಲ್ಲಿ 'ನಾನು' ಎಂಬ ಭಾವವನ್ನು ಸ್ಫುರಿಸುವುದೇ 'ಅಹಂಕಾರ.' ಎಲ್ಲ ಆಲೋಚನೆಗಳು ಹೊರಡುವ, ಎಲ್ಲ ನೆನಪುಗಳು ಹಾಗೂ ಸಂಸ್ಕಾರಗಳಿಗೆ ಮೂಲವಾದ, ಮನಸ್ಸಿನ ಆಳದಲ್ಲಿರುವ ಅನುಭವಗಳ ಸಂಗ್ರಹಾಲಯವೇ 'ಚಿತ್ತ'. ಹೀಗೆ ಮನಸ್ಸು , ಬುದ್ಧಿ, ಅಹಂಕಾರ, ಚಿತ್ತ—ಇವು ನಾಲ್ಕೂ ವಿಭಿನ್ನ ಕೆಲಸಗಳ ಕಾರಣದಿಂದ ನಾಲ್ಕು ಬಗೆಯಲ್ಲಿ ಕಂಡುಬಂದರೂ, ನಿಜವಾಗಿ ಇವೆಲ್ಲ ಒಂದೇ.

ಬುದ್ಧಿಯ ನೆಲೆ ಮನಸ್ಸು ಎಂದು ತಿಳಿದಂತಾಯಿತು. ಹೃದಯದ ನೆಲೆ ಯಾವುದು? ಹಿಂದೆ ನೋಡಿರುವಂತೆ, 'ಹೃದಯ'ವೆಂದು ಇಲ್ಲಿ ಹೇಳಿರುವುದು ಎಲಬುಗೂಡು, ರಕ್ತ ಮಾಂಸಗಳಿಂದ ಕೂಡಿರುವ ದೈಹಿಕ ಹೃದಯವಲ್ಲ ; ಇದು ಭಾವನೆಗಳಿಂದ ಕೂಡಿರುವ ಮಾನಸಿಕ ವ್ಯಾಪಾರ. ಅದೂ ನೆಲೆಸಿರುವುದು ಮನಸ್ಸಿನಲ್ಲಿಯೇ; ತನ್ನ ಕ್ರಿಯೆಗಾಗಿ ಅದು ಆಲೋಚನೆ, ಬುದ್ಧಿ, ಚಿತ್ತ, ಅಹಂಕಾರ ಇವೆಲ್ಲವನ್ನೂ ಒಳಗೊಳ್ಳಬಹುದು. ಒಂದರ್ಥದಲ್ಲಿ ಇದು 'ಅಂತಃಕರಣ' ವೆನಿಸುವ ಮನಸ್ಸಿನ ಎಲ್ಲ ಕ್ರಿಯೆಗಳನ್ನೂ ವ್ಯಾಪಿಸುತ್ತದೆ. ಈ ಕಾರಣದಿಂದಲೂ ಹೃದಯವೇ ಎಲ್ಲಕ್ಕಿಂತ ಮುಖ್ಯವೆಂದು ಪರಿಗಣಿಸಿರುವ ಸಾಧ್ಯತೆಯಿದೆ.

ಬುದ್ಧಿ, ಹೃದಯಗಳ ಕಾರ್ಯ ವಿಭಿನ್ನ

ಭಗವಂತನ ನಿಜವಾದ ಸ್ವರೂಪವೇನೆಂದು ವಿವರಿಸುವಾಗ 'ಅವನು ಜ್ಞಾನಮಯನು' ಎನ್ನಲಾಗಿದೆ. ಇದರಿಂದಾಗಿಯೇ ಅವನನ್ನು 'ಚಿನ್ಮಯ' (ಚಿತ್+ಮಯ, 'ಚಿತ್' ಎಂದರೆ ಚೈತನ್ಯ ಅಥವಾ ಜ್ಞಾನ; ಇದರಿಂದ ತುಂಬಿಕೊಂಡಿರುವವನೇ 'ಚಿನ್ಮಯ') ಎಂದೂ ಬುದ್ಧಿಯ ಆಳದಲ್ಲಿ ನೆಲೆಸಿರುವನು ಎಂದೂ ವರ್ಣಿಸಲಾಗಿದೆ. ಪ್ರತಿಯೊಂದು ವಸ್ತುವಿನ, ಪ್ರತಿಯೊಂದು ಜೀವಿಯ ಹಾಗೂ ಪ್ರತಿಯೊಬ್ಬ ವ್ಯಕ್ತಿಯ ಅಂತರಂಗದಲ್ಲಿರುವ ಚೈತನ್ಯದಲ್ಲಿ ಎಲ್ಲ ಜ್ಞಾನವೂ ಅಡಗಿದೆ; ಏಕೆಂದರೆ ಇವೆಲ್ಲವೂ ಅಖಂಡ-ಚೈತನ್ಯ-ರೂಪನಾದ ಭಗವಂತನ ಅಂಶಗಳು. ಹೀಗೆ ಅಂತರಂಗದಲ್ಲಿ ಅಡಗಿದ ಅಖಂಡ ಜ್ಞಾನವನ್ನು ಮಾನವನು ವಿವಿಧ ಪ್ರಯತ್ನಗಳಿಂದ ವಿಕಸನಗೊಳಿಸಬಹುದು. ವಿದ್ಯಾಭ್ಯಾಸ, ಬೌದ್ಧಿಕ ಚಟುವಟಿಕೆಗಳು, ಏಕಾಗ್ರತೆ-ಧ್ಯಾನವೇ ಮೊದಲಾದ ಸಾಧನೆಗಳಿಂದ ಈ ಅಖಂಡ ಜ್ಞಾನವು ವಿಕಾಸ ಹೊಂದಿದರೆ, ಮಾನವನಿಗೆ ತನ್ನ ಅಗಾಧ ಶಕ್ತಿಯ ಅರಿವಾಗುವುದು. ತನ್ನ ಶಕ್ತಿಗೆ, ಅರಿವಿಗೆ ಹಾಗೂ ಸಾಧನೆಗೆ ಯಾವ ಮಿತಿಯೂ ಇಲ್ಲ ಹಾಗೂ ತನಗೆ ಸಾಧಿಸಲಾಗದ ಕಾರ್ಯ ಯಾವುದೂ ಇಲ್ಲವೆಂಬ ಸತ್ಯ ಅವನಿಗೆ ಗೋಚರವಾಗುವುದು. ಅರಿತೋ, ಅರಿಯದೆಯೋ ಮಾನವನು ಸಾಧಿಸಿದ ಎಲ್ಲ ಪ್ರಗತಿಗೆ ಈ ಸುಪ್ತ ಅಖಂಡ ಜ್ಞಾನವೇ ಕಾರಣ. ಬುದ್ಧಿ ವ್ಯಕ್ತಗೊಳ್ಳುವುದು ಈ ರೀತಿ. ಯಾವುದೇ ವಸ್ತುವಿನ ಅಂತರಂಗವನ್ನು ಅರಿಯುವಂತೆ ಮಾಡುವುದು, ಜಗತ್ತಿನ ವಿವಿಧ ಕ್ರಿಯೆಗಳ ಹಿಂದಿರುವ ನಿಯಮಗಳನ್ನು ತಿಳಿಸಿಕೊಡುವುದು ಬುದ್ಧಿಯ ಕಾರ್ಯ.

ಮಾನವ ಎಲ್ಲ ಕ್ರಿಯೆಗಳ ಹಿಂದೆ ಇನ್ನೊಂದು ಸಂಗತಿ ಕೆಲಸ ಮಾಡುತ್ತದೆ. ಅದೇ ಭಾವ ಅಥವಾ ಭಾವನೆ. ಹಲವು ಬಗೆಯ ಸಂವೇದನೆ, ಸ್ಪಂದನ ಹಾಗೂ ತುಡಿತಗಳಿಂದ ಕೂಡಿದ ಹೃದಯದ ಕ್ರಿಯೆಯೇ ಈ ಭಾವನೆ. ಆಕರ್ಷಣೆ-ವಿಕರ್ಷಣೆ, ಪ್ರೀತಿ-ದ್ವೇಷ, ಮೋಹ-ತಿರಸ್ಕಾರ ಮೊದಲಾದ ವಿರುದ್ಧ ಭಾವನಗಳಿಂದಲೂ, ಕಾಮ, ಕ್ರೋಧಗಳೇ ಮೊದಲಾದ ಷಡ್ವಿಕಾರಗಳಿಂದಲೂ, 'ನಾನು', 'ನನ್ನದು' ಎಂಬ ಅಹಂಕೇಂದ್ರಿತ ಪ್ರಜ್ಞೆಯಿಂದಲೂ ಕೂಡಿ ಈ ಭಾವಗಳು ವರ್ತಿಸುತ್ತವೆ. ಎಲ್ಲ ಜ್ಞಾನ, ವಿದ್ಯಾಭ್ಯಾಸ, ಕಾರ್ಯಚಟುವಟಿಕೆ, ಸಾಮರ್ಥ್ಯ, ಹಲವು ಬಗೆಯ ಕೌಶಲ್ಯಗಳು – ಎಲ್ಲವೂ ಈ ಭಾವಗಳಿಂದ ನಿಯಂತ್ರಿತವಾಗುತ್ತವೆ. ಲೌಕಿಕಜೀವನ, ಸಮಾಜ, ವ್ಯಕ್ತಿಗತ ಆದರ್ಶ ಹಾಗೂ ಮಹತ್ವಾಕಾಂಕ್ಷೆಗಳು ಕೂಡ ಇಂತಹ ಭಾವ ವ್ಯಾಪಾರಗಳೊಂದಿಗೆ ಸೇರಿಕೊಂಡೇ ನಡೆಯುತ್ತವೆ. ವ್ಯಕ್ತಿಯೊಬ್ಬನ ಹೃದಯವೆಂತಹುದು ಎಂಬುದನ್ನು ಈ ಎಲ್ಲ ಅಂಶಗಳು ನಿರ್ಣಯಿಸುತ್ತವೆ. 'ಆಹಾ! ಅವನದು ಎಂಥ ಹೃದಯವಂತಿಕೆ!' 'ಇವನು ಹೃದಯಶೂನ್ಯ ವ್ಯಕ್ತಿ', 'ಕಲ್ಲು ಹೃದಯ ನಿನ್ನದು!' – ಎಂಬೀ ಮಾತುಗಳನ್ನು ಕೇಳುವಾಗಲೆಲ್ಲ ಇತರಿಗಾಗಿ ಮಿಡಿಯುವ, ಕಾಳಜಿ ವಹಿಸುವ, ಸ್ವಾರ್ಥವನ್ನು ಮೀರಿ ನಿಲ್ಲಬಲ್ಲ ವಿಶಾಲ ಹೃದಯದ ಗುಣ ನಮ್ಮಲ್ಲೆಲ್ಲ ಇರಬೇಕು ಎಂಬ ಆಶಯ ವ್ಯಕ್ತವಾಗುತ್ತದೆ. ವ್ಯಕ್ತಿಯ ಸ್ವಭಾವವನ್ನು ಇದು ನಿರ್ಣಯಿಸುವುದರಿಂದ, ಇದನ್ನು 'ಮಾನವೀಯತೆ', 'ಮಾನವತ್ವ' ಎಂದೂ ಕರೆಯುತ್ತೇವೆ. ಬುದ್ಧಿ ಮೆದುಳಿನ ಕ್ರಿಯೆಯೆಂದೂ, ಭಾವನೆ ಹೃದಯದ ಕ್ರಿಯೆಯೆಂದೂ ಸರಳವಾಗಿ ಹೇಳುವುದುಂಟು. ಆದರೆ, ಇವುಗಳ ಕಾರ್ಯ ಬೇರೆ ಬೇರೆಯಾದ್ದರಿಂದ, 'ಬುದ್ಧಿ ಜ್ಞಾನವನ್ನು ನೀಡುವುದು, ಹೃದಯ ವ್ಯಕ್ತಿತ್ವವನ್ನು ನೀಡುವುದು' ಎನ್ನಬೇಕು.

ಜೀವನದ ವಿವಿಧ ಸ್ತರಗಳಲ್ಲಿ

ಮಾನವ ಜೀವನದ ವಿವಿಧ ಹಂತಗಳಲ್ಲಿ, ವಿಕಾಸದ ವಿವಿಧ ಸನ್ನಿವೇಶಗಳಲ್ಲಿ ಹಾಗೂ ಸಮಾಜಗಳ ವಿವಿಧ ಮಜಲುಗಳಲ್ಲಿ ಬುದ್ಧಿ, ಹೃದಯಗಳು ಹಲವು ಬಾರಿ ಒಂದಾಗಿ ಕೆಲಸ ಮಾಡಿವೆ; ಹಲವು ವೇಳೆ ಮುಖಾಮುಖಿಯಾಗಿ ಸಂಘರ್ಷಗಳಲ್ಲಿ ತೊಡಗಿವೆ. ಪಾಶ್ಚಾತ್ಯ ಪ್ರಪಂಚದಲ್ಲಿ ಧಾರ್ಮಿಕ ನಂಬಿಕೆಗಳು ಹಲವರ ಹೃದಯವನ್ನು ಆವರಿಸಿದ್ದ ಸಂದರ್ಭದಲ್ಲೇ ವಿಜ್ಞಾನದ ಬಿರುಗಾಳಿ ಬೀಸಿತು; ಧಾರ್ಮಿಕ ನಂಬಿಕೆಗಳನ್ನೆಲ್ಲ ಧೂಳೀಪಟ ಮಾಡಿತು. ಬೌದ್ಧಿಕ ಪ್ರಾಬಲ್ಯ ಎಲ್ಲವನ್ನೂ ಪ್ರಭಾವಿಸಿದ ಸಮಯದಲ್ಲೇ, ಹೃದಯಶೂನ್ಯವಾದ ವೈಜ್ಞಾನಿಕ ಕ್ರಾಂತಿ ಎಂಥ ಅನರ್ಥಗಳನ್ನು ಸೃಷ್ಟಿಸಬಹುದು ಎಂಬುದನ್ನು ಜಗತ್ತು ಕಂಡಿತು. ಎರಡು ಮಹಾಯುದ್ಧಗಳು, ಕೈಗಾರಿಕಾ ಕ್ರಾಂತಿ, ಅಣುಬಾಂಬುಗಳ ನಿರ್ಮಾಣ ಹಾಗೂ ಅದರ ಪರೀಕ್ಷೆಯ ಪೈಪೋಟಿ – ಇವುಗಳನ್ನು ಬೌದ್ಧಿಕ ಪ್ರಗತಿಯ ಪರಿಣಾಮವೆಂಬುದಾಗಿ ಕಂಡ ಚಿಂತಕರು, 'ಮಾನವನ ಬುದ್ಧಿಯ ಮುಂದೆ ಹೃದಯ ಸೋತಿತೆ?' ಎಂದು ಪ್ರಶ್ನಿಸಿದ್ದಿದೆ. ''ವಿವೇಕದೊಂದಿಗೆ ಸೇರಿಕೊಂಡಿಲ್ಲದ ಜ್ಞಾನ ವಿನಾಶಕಾರಿಯಾಗಬಲ್ಲುದು; ಜ್ಞಾನದ ಅನ್ವೇಷಣೆ ಮಾಡುವ ಬುದ್ಧಿವಂತರಲ್ಲಿ ವಿಶಾಲ ದೃಷ್ಟಿ

ಕೋನದ ವಿವೇಕ ಇರಬೇಕೆಂದೇನೂ ಇಲ್ಲ'' ('*Knowledge and Wisdom*' ಲೇಖನ) ಎಂಬ ಬರ್ಟ್ರಂಡ್ ರಸೆಲ್‌ನ ಮಾತು ಇಲ್ಲಿ ಮುಖ್ಯವೆನಿಸುತ್ತದೆ. ಇದೇ ರೀತಿ ಆರ್ಥಿಕ ಅಸಮಾನತೆ, ಸಾಮಾಜಿಕ ಶ್ರೇಣೀಕರಣ, ಜಾತಿಭೇದ ಹಾಗೂ ಗುಲಾಮಗಿರಿ ಮುಂತಾದ ಪಿಡುಗುಗಳು ಅನೇಕ ಚಿಂತಕರ ಟೀಕೆಗೆ ಗುರಿಯಾಗಿವೆ. ಅನೇಕ ದೇಶಗಳ, ಅದರಲ್ಲೂ ಪ್ರಜಾಪ್ರಭುತ್ವವಿರುವ ದೇಶಗಳ ಸಂವಿಧಾನದಲ್ಲಿ ಇಂತಹ ಚಿಂತನೆಗಳ ಪ್ರಭಾವ ದಟ್ಟವಾಗಿರುವುದು ಕಂಡುಬರುತ್ತದೆ. ಇತ್ತೀಚೆಗೆ ಜಾಗತಿಕ ಮಟ್ಟದಲ್ಲಿ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ವಿಶ್ವಸಂಸ್ಥೆಯ ವಿವಿಧ ಚಟುವಟಿಕೆಗಳು ಹಾಗೂ ಸುದ್ದಿಮಾಧ್ಯಮಗಳು ಪ್ರಬಲವಾದ ರೀತಿಯಲ್ಲಿ ಇಂಥ ಅನಾಚಾರಗಳನ್ನು ತಡೆಯುವಲ್ಲಿ ಕಾರ್ಯಪ್ರವೃತ್ತವಾಗಿವೆ.

ಇಷ್ಟೆಲ್ಲ ಗೊಂದಲಗಳ ನಡುವೆ ಕೂಡ ಮಾನವನು ಜ್ಞಾನದ ಮಹತ್ವವನ್ನು ಅರಿತಿದ್ದಾನೆ. ಬುದ್ಧಿಯ ಅಗಾಧ ಸಾಮರ್ಥ್ಯ, ಅದರ ಅಗೋಚರ ಆಯಾಮ, ಅಸಾಧಾರಣ ಸಂಪನ್ನತೆಯನ್ನು ಅವನು ಸದಾ ಪುರಸ್ಕರಿಸುತ್ತ ಬಂದಿದ್ದಾನೆ. ಆದರೆ ದಾರಿತಪ್ಪಿದ ಪ್ರಗತಿ ಹೇಗೆ ಸಮಾಜವನ್ನು ಕ್ರೂರವಾಗಿ ಹಿಂಸಿಸುತ್ತದೆ ಎಂಬುದನ್ನು ನಾವು ನಿತ್ಯ ಕಾಣುತ್ತಿದ್ದೇವೆ. ನಮ್ಮ ವಿದ್ಯಾಭ್ಯಾಸ, ನಾಗರಿಕ ಜನಜೀವನ, ಸರಕಾರ ಹಾಗೂ ಸಾಮಾಜಿಕ ಸಂಘಟನೆಗಳು ಬೆಳೆಯುತ್ತಿರುವ ಎಳೆಯ ಮನಸ್ಸುಗಳನ್ನು ಹಾನಿಕಾರಕ ಬೌದ್ಧಿಕತೆಯತ್ತ ಹೊರಳದಂತೆ ರಕ್ಷಿಸಬೇಕು. ವಿಶ್ವದೆಲ್ಲೆಡೆ ಇಂಥ ಪ್ರಯತ್ನಗಳು ನಡೆಯುತ್ತಿವೆ. ಹೃದಯ ತನ್ನ ನೆಲೆಯನ್ನು ಎಲ್ಲೆಡೆ ವ್ಯಾಪಿಸುವುದು ಹೀಗೆ. ಆದರೆ ಮಾನವನ ಬುದ್ಧಿ ಈ ಎಲ್ಲ ಪ್ರಯತ್ನಗಳನ್ನೂ ಮೀರಿ ವಿನಾಶದತ್ತ ಸಾಗುತ್ತಿದೆ ಎಂಬ ಆತಂಕದ ಧ್ವನಿ ಎಲ್ಲೆಡೆ ಕೇಳಿಬರುತ್ತಿದೆ. ಬುದ್ಧಿ, ಹೃದಯಗಳು ನಿರಂತರ ಸಂಘರ್ಷದಲ್ಲಿ ತೊಡಗಿರುವಂತೆ ಕಾಣಿಸುತ್ತಿದೆ.

ಇಲ್ಲಿ ನಾವು ಗಮನಿಸಬೇಕಾದ ಸಂಗತಿಯೇನೆಂದರೆ, ಬೌದ್ಧಿಕ ಬೆಳವಣಿಗೆಯಲ್ಲೇ ಹೃದಯದ ವಿಕಾಸವೂ ನಡೆಯುತ್ತದೆ ಎಂಬುದನ್ನು. ವಿನಾಶಕಾರಿ ಅಣ್ವಸ್ತ್ರಗಳನ್ನು ಕಂಡು ಹಿಡಿದ ವಿಜ್ಞಾನಿಯೇ, ''ಅಯ್ಯೋ! ಎಂಥ ಅನಾಹುತ ಮಾಡಿಬಿಟ್ಟೆ, ಈ ಸಂಶೋಧನೆಯ ಮೂಲಕ!'' ಎಂದು ಪರಿತಪಿಸಿದನಂತೆ. ಮಹಾಯುದ್ಧಗಳ ಭೀಕರ ಪರಿಣಾಮಗಳನ್ನು ಜಗತ್ತು ಕಂಡಿದೆ. ಅದಾದ ಮೇಲೆ ಇಲ್ಲಿಯತನಕ ಎಷ್ಟು ಯುದ್ಧಗಳಾದವೋ, ಆಗ ಪ್ರತಿಬಾರಿಯೂ ಯುದ್ಧವನ್ನು ನಿಲ್ಲಿಸುವ ಪ್ರಯತ್ನಗಳು ನಡೆದಿವೆ. ಈಚೆಗೆ ವಿಶ್ವಶಾಂತಿ, ದೇಶಗಳೊಳಗಿನ ಸ್ನೇಹ ಸಂಬಂಧಗಳ ಪ್ರಯತ್ನಗಳಿಗೆ ಹೆಚ್ಚಿನ ಮಹತ್ವವಿದೆ. ಇಷ್ಟಾದರೂ, ಮನುಷ್ಯನ ಸಂಘರ್ಷಗಳಿಗೆ ಶಾಶ್ವತ ಪರಿಹಾರ ಅವನ ಆಂತರಿಕ ಪರಿವರ್ತನೆಯಿಂದ ಮಾತ್ರ; ಅದು ಸಾರ್ವತ್ರಿಕ ಹಾಗೂ ಸರ್ವಸಮ್ಮತ ರೀತಿಯಲ್ಲಿ ಪ್ರಚಾರಗೊಂಡಾಗ ಮಾತ್ರ ಬುದ್ಧಿ, ಹೃದಯಗಳು ಸಾಮರಸ್ಯದಿಂದ ಕಾರ್ಯ ನಿರ್ವಹಣೆ ಮಾಡಬಲ್ಲವು ಎಂಬುದನ್ನು ನಾವು ಮರೆಯುವಂತಿಲ್ಲ.

ಆಧ್ಯಾತ್ಮಿಕ ಜಗತ್ತಿನಲ್ಲಿ

ಆಧ್ಯಾತ್ಮಿಕತೆಯೆಂಬುದು ಮಾನವ ವಿಕಾಸದ ಅತ್ಯುನ್ನತ ಹಂತ. ವಿವಿಧ ಧರ್ಮಗಳ ಮೂಲಕ ಸಮಾಜದಲ್ಲಿ ವ್ಯಾಪಿಸಿಕೊಳ್ಳುವ ಆಧ್ಯಾತ್ಮಿಕ ಆದರ್ಶಗಳು ತತ್ತ್ವಗಳ ರೂಪದಿಂದಲೂ, ಅಸಾಧಾರಣ ವ್ಯಕ್ತಿತ್ವ ಹೊಂದಿರುವ ಮಹಾಪುರುಷರ ರೂಪದಿಂದಲೂ ಜೀವಂತವಾಗಿದ್ದಾಗಲೇ ಅದು ಕ್ರಿಯಾಶೀಲ ಆಧ್ಯಾತ್ಮಿಕತೆಯೆನಿಸಿಕೊಳ್ಳುವುದು. ಧರ್ಮಗಳ ವಿವಿಧ ಆಯಾಮಗಳಲ್ಲಿ ಕೆಲವೊಮ್ಮೆ ಭಾವ ಅಥವಾ ಹೃದಯವೇ ಪ್ರಧಾನವಾಗಿ ಕಂಡುಬರುತ್ತದೆ; ಕೆಲವೊಮ್ಮೆ ಬುದ್ಧಿಯೇ ಪ್ರಧಾನವಾಗಿರುವುದು ಕಂಡುಬರುತ್ತದೆ. ಉದಾಹರಣೆಗೆ, ಭಾರತೀಯ ಧರ್ಮಗಳಲ್ಲಿ ಷಡ್ದರ್ಶನವೇ ಮೊದಲಾದ ತಾತ್ತ್ವಿಕ ಪ್ರಸ್ಥಾನಗಳಲ್ಲಿ ಬೌದ್ಧಿಕ ಚಟುವಟಿಕೆ ಪ್ರಧಾನವಾಗಿ ಕಂಡುಬರುತ್ತದೆ. ಅದೇರೀತಿ ಭಕ್ತಿಪ್ರಧಾನವಾದ ಪಂಥಗಳಲ್ಲಿ ಹೃದಯಕ್ಕೆ ಪ್ರಾಧಾನ್ಯ ಕಂಡುಬರುತ್ತದೆ. ಇದರರ್ಥ ಒಂದೆಡೆ ಇನ್ನೊಂದಂಶ ಇಲ್ಲವೆಂದಲ್ಲ; ಬುದ್ಧಿ ಪ್ರಧಾನವಾಗಿ ಇರುವಲ್ಲಿ ಭಾವದ ಅಂಶಗಳು ಇದ್ದೇ ಇರುತ್ತದೆ, ಆದರೆ ಅವು ಅಪ್ರಧಾನ. ಅದೇ ರೀತಿ ಭಾವ ಪ್ರಧಾನವಾಗಿರುವಲ್ಲಿ ಬೌದ್ಧಿಕ ಅಂಶಗಳೂ ಗೌಣವಾಗಿಯಾದರೂ ಇರುತ್ತವೆ.

ಹೀಗಿದ್ದರೂ, ಸಾಧನೆಯ ಮಾರ್ಗದ ಪ್ರಶ್ನೆ ಬಂದಾಗ ಬುದ್ಧಿ–ಭಾವಗಳ ಬಿಕ್ಕಟ್ಟು ತಪ್ಪಿದ್ದಲ್ಲ. 'ವಿಚಾರ ಗ್ರಂಥಗಳನ್ನು ಓದಿದರೆ ಭಕ್ತಿ ನಷ್ಟವಾಗಬಹುದು' ಎಂಬ ಮಾತಿನಲ್ಲಿ ಈ ಸಂಘರ್ಷದ ಸೂಚನೆಯಿದೆ. ಭಕ್ತಿಪಂಥದವರು ವಿಚಾರಮಾರ್ಗವನ್ನು ಅಲ್ಲಗಳೆಯುತ್ತಾರೆ; ಜ್ಞಾನಮಾರ್ಗದವರು ಭಕ್ತಿ–ಭಾವಗಳ ಭಾವಾತಿರೇಕವನ್ನು ಹಾಸ್ಯ ಮಾಡುತ್ತಾರೆ. ಆಯಾ ಪಂಥದವರಿಗೆ ತಮ್ಮ ತಮ್ಮ ಆದರ್ಶ, ತತ್ತ್ವಗಳಿಗನುಗುಣವಾಗಿ ಸಾಧನೆ ಮಾಡುವ ಸ್ವಾತಂತ್ರ್ಯ ಆಧ್ಯಾತ್ಮಿಕ ಜಗತ್ತಿನಲ್ಲಿದೆ ನಿಜ; ಆದರೆ ಒಂದು ಪಂಥ ಇನ್ನೊಂದು ಪಂಥವನ್ನು ಪೂರ್ಣ ನಿಷೇಧಿಸುವುದು ಒಳಿತಲ್ಲ. ಭಕ್ತಿಪಂಥಗಳಿಗೆ ಜ್ಞಾನದ ಬೌದ್ಧಿಕ ಬಲ ಅತ್ಯಗತ್ಯ; ಅಂತೆಯೇ ಜ್ಞಾನಮಾರ್ಗವನ್ನು ಅನುಸರಿಸುವವರಿಗೆ ಭಕ್ತಿಯ ಭಾವ ಸೌಂದರ್ಯ ಅತ್ಯಗತ್ಯ. ಮಾನವನಲ್ಲಿ ಈ ಎರಡೂ ಗುಣಗಳು ಸಮರಸಗೊಂಡಾಗಲೇ ಅವನ ಆಧ್ಯಾತ್ಮಿಕತೆ ಪರಿಪೂರ್ಣವಾಗುವುದು. ಸ್ವಾಮಿ ವಿವೇಕಾನಂದರು ಬುದ್ಧಿ, ಹೃದಯ ಇವರೆಡರ ಸಾಮರಸ್ಯವನ್ನು ಸಾಧಿಸಬೇಕು ಎನ್ನುತ್ತಿದ್ದರು. ಹೀಗಿದ್ದರೂ ಅವರು ಒಂದೆಡೆ, ''ಬುದ್ಧಿ ಹಾಗೂ ಹೃದಯಗಳ ನಡುವೆ ಸಂಘರ್ಷ ಬಂದಾಗ ಯಾವಾಗಲೂ ಹೃದಯವನ್ನೇ ಅನುಸರಿಸಿ'' ಎಂದಿದ್ದಾರೆ. ಬಹುಶಃ ಬುದ್ಧಿಗಿಂತ ಹೃದಯವೇ ಹೆಚ್ಚು ದೂರದರ್ಶಿಯೂ, ವಿಶಾಲವೂ ಆದದ್ದರಿಂದ ಅವರು ಹೀಗೆ ಹೇಳಿದ್ದಿರಬೇಕು.

ಆಧ್ಯಾತ್ಮಿಕ ಮಹಾಪುರುಷರಲ್ಲೆಲ್ಲ ಬುದ್ಧಿ, ಹೃದಯಗಳ ಅದ್ಭುತ ಸಮನ್ವಯ ಕಂಡುಬರುತ್ತದೆ. ಶ್ರೀಕೃಷ್ಣ, ಬುದ್ಧ, ಶಂಕರ, ಚೈತನ್ಯ, ಶ್ರೀರಾಮಕೃಷ್ಣರು, ಸ್ವಾಮಿ ವಿವೇಕಾನಂದರು – ಇವರಲ್ಲೆಲ್ಲ ಬುದ್ಧಿ, ಹೃದಯಗಳು ಸಮಾನವಾಗಿ ಪ್ರವೃತ್ತವಾಗಿದ್ದುದನ್ನು ನಾವು ಕಾಣುತ್ತೇವೆ. ವ್ಯಕ್ತಿಯ ವಿಕಾಸ ಹಾಗೂ ಮಾನವ ಜನಾಂಗದ ವಿಕಾಸ ಎರಡೂ ಸಾಧ್ಯವಾಗುವುದು ಇಂಥ ಮಹಾವ್ಯಕ್ತಿಗಳ ಹೆಜ್ಜೆಗುರುತನ್ನು ಅನುಸರಿಸಿ ನಡೆಯುವುದರಿಂದ. ಬುದ್ಧಿಗೆ ಹೃದಯದ ಕಡಿವಾಣ, ಅಂತೆಯೇ ಹೃದಯಕ್ಕೇ ಜ್ಞಾನದ ಬೆನ್ನೆಲುಬು—ಇದೇ ಅಗತ್ಯವಾಗಿ ನಾವೆಲ್ಲ ಕಂಡುಕೊಳ್ಳಬೇಕಾದ ಆದರ್ಶ.

ರಾಗಾಭಕ್ತಿ

❀ ರಾಗಾಭಕ್ತಿ ಉಂಟಾದರೆ, ಅಂದರೆ ಭಗವಂತನಲ್ಲಿ ಪ್ರೀತಿ ಉಂಟಾದರೆ ಆಗ ಆತನನ್ನು ಪಡೆಯಬಹುದು. ವೈಧೀಭಕ್ತಿ ಎಷ್ಟು ಬೇಗ ಉತ್ಪನ್ನವಾಗುತ್ತದೆಯೋ ಅಷ್ಟೇ ಬೇಗ ಹೊರಟು ಹೋಗುತ್ತದೆ. ಇಷ್ಟೊಂದು ಜಪ ಮಾಡಬೇಕು, ಇಷ್ಟೊಂದು ಧ್ಯಾನ ಮಾಡಬೇಕು, ಇಂಥಿಂಥ ಉಪಚಾರಗಳಿಂದ ಪೂಜೆ ಮಾಡಬೇಕು, ಇವು ಗಳಿಗೆಲ್ಲ 'ವೈಧೀಭಕ್ತಿ' ಅಂತ ಹೆಸರು. ಇದು ಬರುವುದಕ್ಕೂ ತಡವಿಲ್ಲ ; ಹೋಗುವುದಕ್ಕೂ ತಡವಿಲ್ಲ.

❀ ಅನೇಕರು ಹೇಳುತ್ತಾರೆ, 'ಅಣ್ಣಂದಿರಾ, ನಾವು ಎಷ್ಟು ಸಲ ಹವಿಷ್ಯಾನ್ನ ತಿಂದೆವು ಏನು ಕತೆ! ಎಷ್ಟೊಂದು ಸಲ ಮನೆಯಲ್ಲಿ ಪೂಜೆ ನಡೆಸಿದೆವು ಏನು ಕತೆ! ಆದರೆ ಕೊನೆಗೆ ನಮಗೆ ಏನು ತಾನೆ ದೊರಕಿತು?' ಅಂತ. ಆದರೆ ರಾಗಾಭಕ್ತಿಯಿಂದ ವಿಮುಖವಾಗು ವಂತೇ ಇಲ್ಲ.

❀ ಯಾರಿಗೆ ರಾಗಾಭಕ್ತಿ ಉಂಟಾಗುತ್ತದೆ ಎಂಬುದು ಗೊತ್ತೇನು? ಯಾರು ಪೂರ್ವಜನ್ಮಗಳಲ್ಲಿ ಬಹಳವಾಗಿ ಸಾಧನೆ ಮಾಡಿದ್ದಾರೊ ಅಥವಾ ಯಾರು ನಿತ್ಯಸಿದ್ಧರೋ ಅವರಿಗೆ. ಉದಾ ಹರಣೆಗಾಗಿ ಪಾಳುಬಿದ್ದಿರುವ ಮನೆಯನ್ನು ತೆಗೆದುಕೊಳ್ಳಿ. ಅದರಲ್ಲಿ ಬೆಳೆದಿರುವ ಗಿಡಗಂಟೆಗಳನ್ನು ಮತ್ತು ಕಸಕಡ್ಡಿಗಳನ್ನು ತೆಗೆಯು ವಾಗ ಪೈಪು ಹಾಕಿರುವ ಒಂದು ಚಿಲುಮೆಯನ್ನು ಕಂಡಂತೆ. ಅದು ಮಣ್ಣು ಮತ್ತು ಇಟ್ಟಿಗೆಳ ಚೂರುಗಳಿಂದ ಮುಚ್ಚಿಹೋಗಿದ್ದಿತು. ಅವುಗಳನ್ನು ತೆಗೆದ ಒಡನೆಯೆ ನೀರು 'ಜಳ ಜಳ' ಅಂತ ಉಕ್ಕಿ ಬರಲಾರಂಭಿಸುತ್ತದೆ.

❀ ಯಾರಿಗೆ ರಾಗಾಭಕ್ತಿ ಉಂಟಾಗಿದೆಯೊ ಅವರು ಎಂದಿಗೂ ಹೇಳರು, 'ಅಣ್ಣಂದಿರಾ, ಎಷ್ಟೊಂದು ಹವಿಷ್ಯಾನ್ನ ತಿಂದೆವು ಏನು ಕತೆ! ಆದರೆ ದೊರೆತುದೇನು?' ಅಂತ. ಯಾರು ಹೊಸದಾಗಿ ವ್ಯವ ಸಾಯ ಮಾಡುತ್ತಾರೋ ಅವರು ಬೆಳೆ ನಷ್ಟವಾದರೆ ವ್ಯವಸಾಯ ವನ್ನೇ ಬಿಟ್ಟುಬಿಡುತ್ತಾರೆ. ಆದರೆ ಯಾರು ವಂಶಪಾರಂಪರ್ಯದಿಂದ ವ್ಯವಸಾಯ ಮಾಡಿ ಬಂದಿದ್ದಾರೋ, ಅವರು ಬೆಳೆ ಆದರೂ ಸರಿಯೆ ಹೋದರೂ ಸರಿಯೆ ವ್ಯವಸಾಯವನ್ನು ಮಾತ್ರ ಎಂದಿಗೂ ಬಿಡರು. ಅವರ ತಂದೆ, ತಾತ ಎಲ್ಲಾ ವ್ಯವಸಾಯ ಮಾಡಿಕೊಂಡು ಬಂದಿದ್ದಾರೆ; ಅವರಿಗೆ ಗೊತ್ತಿದೆ ವ್ಯವಸಾಯ ಮಾಡೇ ತಿನ್ನಬೇಕು ಅಂತ.

❀ ಯಾರಿಗೆ ರಾಗಾಭಕ್ತಿ ಉಂಟಾಗಿರುತ್ತದೆಯೊ ಅವರೇ ಆತನ ನಿಜವಾದ ಭಕ್ತರು. ಭಗವಂತ ಅವರ ಭಾರವನ್ನು ಹೊತ್ತು ಕೊಳ್ಳುತ್ತಾನೆ. ಆಸ್ಪತ್ರೆಗೆ ಹೋಗಿ ದಾಖಲಾದರೆ – ಗುಣವಾಗುವ ವರೆಗೂ ಡಾಕ್ಟರ್ ಬಿಟ್ಟುಕೊಡುವುದಿಲ್ಲ. ಭಗವಂತ ಯಾರ ಕೈಯನ್ನು ಹಿಡಿದಿರುವನೋ ಅವರು ಯಾವುದಕ್ಕೂ ಭಯ ಪಡಬೇಕಾಗಿಲ್ಲ. ಯಾವ ಮಗು ಗದ್ದೆ ತೆವರಿಯ ಮೇಲೆ ನಡೆಯುವಾಗ ತಂದೆಯ ಕೈಯನ್ನು ಹಿಡಿದು ನಡೆಯುತ್ತಿರುವುದೋ ಅದು – ಬೇರೆ ಕಡೆ ಮನಸ್ಸಿಟ್ಟು ತಂದೆಯ ಕೈ ಬಿಟ್ಟರೆ – ಬಿದ್ದರೂ ಬೀಳಬಹುದು. ಆದರೆ ತಂದೆ ಮಗುವಿನ ಕೈಯ ಹಿಡಿದಿದ್ದರೆ ಅದು ಬೀಳುವ ಸಂಭವವೇ ಇಲ್ಲ.

❀ ಭಗವಂತನ ಮೇಲೆ ಪ್ರೀತಿ ಉಂಟಾದರೆ, ಕೇವಲ ಆತನ ಸಂಬಂಧವಾಗಿಯೇ ಮಾತುಕತೆ ಯಾಡಲು ಇಚ್ಛೆಯಾಗುತ್ತದೆ. ಯಾರು ಯಾರನ್ನು ಪ್ರೀತಿಸುತ್ತಾರೊ ಅವರು ಅವರ ವಿಷಯವಾಗಿ ಕೇಳಲು ಮತ್ತು ಮಾತನಾಡಲು ಇಚ್ಛಿಸುತ್ತಾರೆ. ಯಾರಿಗೆ ಪಾರಿವಾಳವನ್ನು ಕಂಡರೆ ಪ್ರೀತಿಯೋ ಅವರ ಮುಂದೆ ಅದನ್ನು ಹೊಗಳಿದರೆ ಅವರಿಗೆ ಅತ್ಯಂತ ಆನಂದ.

❀ ಭಗವಂತನಲ್ಲಿ ಅನುರಾಗ ಉಂಟಾದರೆ ಸಾಮಾನ್ಯ ಘಟನೆ ಯಿಂದಲೇ ಭಕ್ತಿ ಉದ್ದೀಪನೆಯಾಗಿಬಿಡುತ್ತದೆ. ಆಗ ಒಂದು ಸಲ ರಾಮನಾಮ ಜಪಿಸಿದರೆ ಅದಕ್ಕೆ ಒಂದು ಕೋಟಿ ಸಂಧ್ಯಾವಂದನೆಗಳ ಫಲ ದೊರೆತುಬಿಡುತ್ತದೆ. ಮೇಘವನ್ನು ನೋಡಿದೊಡನೆಯೇ ನವಿಲಿಗೆ ರಾಗದ ಉದ್ದೀಪನೆಯಾಗಿಬಿಡುತ್ತದೆ. ಆನಂದದಿಂದ ಪುಕ್ಕ ವನ್ನು ಕೆದರಿ ನಲಿಯುತ್ತದೆ. ಶ್ರೀಮತಿಗೂ (ರಾಧೆ) ಹಾಗೆ ಆಗು ತ್ತಿತ್ತು. ಮೇಘವನ್ನು ನೋಡಿದೊಡನೆಯೆ ಆಕೆಗೆ ಕೃಷ್ಣನ ನೆನಪು ಬಂದುಬಿಡುತ್ತಿತ್ತು.

❀ ಯಾರಿಗೆ ಭಗವದ್ಭಾವನೆಯ ಉದ್ದೀಪನೆಯಾಗುತ್ತದೆ? ವಿಷಯಾತ್ಮಿಕ ಬುದ್ಧಿಯನ್ನು ತ್ಯಜಿಸಿರತಕ್ಕವರಿಗೆ. ಯಾರ ವಿಷಯರಸ ಬತ್ತಿಹೋಗಿರುವುದೋ ಅವರಿಗೆ ಒಂದು ಸ್ವಲ್ಪದರಿಂದಲೇ ಭಗವ ದ್ಭಾವನೆಯ ಉದ್ದೀಪನೆಯಾಗಿ ಬಿಡುತ್ತದೆ. ಬೆಂಕಿಕಡ್ಡಿ ಒದ್ದೆಯಾಗಿ ದ್ದರೆ ಒಂದು ಸಾವಿರ ಸಲ ಗೀಚಿದರೂ ಅದು ಹತ್ತದು. ಆದರೆ ಒಣಗಿದರೆ ಒಂದು ಸ್ವಲ್ಪ ಗೀಚಿದರೇ ಸಾಕು, 'ಧಗ್' ಎಂದು ಹತ್ತಿಕೊಂಡು ಬಿಡುತ್ತದೆ.

❀ ದೇಹದ ಸುಖವಂತು ಇದ್ದೇ ಇದೆ. ಯಾರಿಗೆ ಭಗವಂತನ ಸಾಕ್ಷಾತ್ಕಾರ ಆಗಿದೆಯೋ ಅವರ ಮನಸ್ಸು ಪ್ರಾಣ ದೇಹ ಆತ್ಮ ಎಲ್ಲವನ್ನೂ ಆತನಿಗೆ ಅರ್ಪಿಸಿಬಿಟ್ಟಿರುತ್ತಾರೆ.

❀ ಪ್ರೇಮ ಅಂದರೆ ಭಗವಂತನಲ್ಲಿ ಅಂಥ ಅಗಾಧವಾದ ಅನುರಾಗ. ಅದರ ದೆಸೆಯಿಂದ ಜಗತ್ತೂ ಮರೆತುಹೋಗಿಬಿಡುತ್ತದೆ. ಜೊತೆಗೆ ಅಷ್ಟೊಂದು ಪ್ರಿಯವಾಗಿರುವ ಸ್ವಂತ ದೇಹ ಕೂಡ ಮರೆತು ಹೋಗಿಬಿಡುತ್ತದೆ. ಅದಕ್ಕೆ 'ಪ್ರೇಮ' ಅಂತ ಹೆಸರು.

ಶ್ರೀರಾಮಕೃಷ್ಣ ವಚನವೇದದಿಂದ



ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

ಭಾಗ ೧

ಶ್ರೀರಾಮಕೃಷ್ಣ ಮಹಾಸಂಘದ ಆರನೇ ಪರಮಾಧ್ಯಕ್ಷರಾಗಿದ್ದ ಸ್ವಾಮಿ ವಿರಜಾನಂದರು (ಕ್ರಿ.ಶ. ೧೮೭೩-೧೯೫೧) ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆ ಶಾರದಾದೇವಿಯವರ ಆಧ್ಯಾತ್ಮಿಕ ಶಕ್ತಿ ಹಾಗೂ ದಿವ್ಯಲೀಲೆಯ ಪ್ರಭಾವ ಸ್ವಾಮಿ ವಿವೇಕಾನಂದರ ಹಾಗೂ ಇನ್ನಿತರ ನೇರ ಶಿಷ್ಯರ ಮೂಲಕ ಎಲ್ಲೆಡೆ ಪಸರಿಸುತ್ತಿದ್ದುದನ್ನು ಹತ್ತಿರದಿಂದ ಕಂಡರು. ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದು, ಅವರ ಕೃಪೆಗೆ ಪಾತ್ರರಾದ ವಿರಜಾನಂದರು ಮುಂದೆ ಸ್ವಾಮಿ ವಿವೇಕಾನಂದರಿಂದ ಸಂನ್ಯಾಸ ದೀಕ್ಷೆ ಸ್ವೀಕರಿಸಿದರು. ೧೮೯೧ರಷ್ಟು ಆರಂಭದ ಹಂತದಲ್ಲೇ ರಾಮಕೃಷ್ಣ ಸಂನ್ಯಾಸೀ ಸಂಘವನ್ನು ಸೇರಿಕೊಂಡ ಅವರು, ಶ್ರೀರಾಮಕೃಷ್ಣರ ಬಹುಮಂದಿ ನೇರ ಶಿಷ್ಯರೊಡನೆ ಒಡನಾಡಿದರು. ಶ್ರೀರಾಮಕೃಷ್ಣ ಮಹಾಸಂಘದ ಸ್ಥಾಪನೆ, ಬೆಳವಣಿಗೆ, ಹಲವಾರು ಪ್ರಮುಖ ಘಟನೆಗಳಿಗೆ ಸಾಕ್ಷಿಯಾಗಿದ್ದ ವಿರಜಾನಂದರ ಜೀವನದ ಘಟನೆಗಳೆಲ್ಲವೂ ರಾಮಕೃಷ್ಣ ಮಹಾಸಂಘದ ಬೆಳವಣಿಗೆಯ ಕಥೆಯನ್ನು ಸುಂದರವಾಗಿ ಚಿತ್ರಿಸುತ್ತವೆ.

ಬಂಗಾಳಿಯಲ್ಲಿ ಸ್ವಾಮಿ ಶ್ರದ್ಧಾನಂದರು ರಚಿಸಿದ **'ಅತೀತೇರ್ ಸ್ಮೃತಿ'** ಎಂಬ ಗ್ರಂಥ ಚಾರಿತ್ರಿಕವಾಗಿಯೂ, ಆಧ್ಯಾತ್ಮಿಕ ಮಹತ್ವದಿಂದಲೂ ಅತ್ಯಂತ ಮುಖ್ಯವಾದ ಒಂದು ಗ್ರಂಥವಾಗಿದೆ. ಇಂಗ್ಲಿಷ್‌ನಲ್ಲಿ ಇದು ' The Story of an Epoch' ಎಂದು ಈಗಾಗಲೇ ಪ್ರಕಟವಾಗಿದೆ. ಈ ಕೃತಿಯನ್ನು ಈ ಸಂಚಿಕೆಯಿಂದ ಧಾರಾವಾಹಿಯಾಗಿ ನೀಡುತ್ತಿದ್ದೇವೆ. ಮೂಲ ಬಂಗಾಳಿಯಿಂದ ಇದನ್ನು ಸಮರ್ಪಕವಾಗಿ ಕನ್ನಡಕ್ಕೆ ಅನುವಾದಿಸಿರುವ ಲೇಖಕಿ, ಶ್ರೀಶಾರದಾ ಮಠದ ಶೈಕ್ಷಣಿಕ ಸೇವಾಕೇಂದ್ರವಾದ ತುಮಕೂರಿನ ಜುಂಜರಾಮನ ಹಳ್ಳಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಪ್ರಸ್ತಾವನೆ

ಶ್ರೀರಾಮಕೃಷ್ಣ ಮಹಾಸಂಘದ ಆರನೇ ಅಧ್ಯಕ್ಷರಾಗಿದ್ದ ಪರಮ ಪೂಜ್ಯ ಸ್ವಾಮಿ ಸ್ವಾಮಿ ವಿರಜಾನಂದರು ತಮ್ಮ ಆಧ್ಯಾತ್ಮಿಕ ಜೀವನವನ್ನು ಶ್ರೀರಾಮಕೃಷ್ಣ ಭಕ್ತವಲಯದ ಸಾನ್ನಿಧ್ಯಕ್ಕೆ ಬಂದು ಪ್ರಾರಂಭಿಸಿದಲ್ಲಿಂದ ತೊಡಗಿ, ಅವರ ಜೀವನದ ಅಂತಿಮ ಕಾಲದವರೆಗೆ, ೬೦ ವರ್ಷಗಳ ಸುದೀರ್ಘ ಅವಧಿಯ ರಾಮಕೃಷ್ಣ ಮಹಾಸಂಘದ ವಿಕಾಸ ಮತ್ತು ಸ್ಥಿತಿ-ಗತಿಗಳೇ ಈ ಗ್ರಂಥದ ಹಿನ್ನೆಲೆ. ಒಬ್ಬ ವಿಶೇಷ ವ್ಯಕ್ತಿಯ ಜೀವನಚರಿತ್ರೆಯ ಚಿತ್ರಣವೇ ಈ ಪುಸ್ತಕದ ಗುರಿಯಲ್ಲ; ಆ ದೃಷ್ಟಿಯಿಂದ, ಸಾಮಾನ್ಯ ಅರ್ಥದಲ್ಲಿ ಇದನ್ನೊಂದು ಜೀವನ ಚರಿತ್ರೆ ಎಂದು ಹೇಳಲಾಗದು. ಅಲ್ಲದೆ ಒಂದು ಮಹಾಸಂಘದ ಕ್ರಮವಾದ ಘಟನಾವಳಿಗಳ ವರ್ಣನೆ ಹಾಗೂ ವಿಶ್ಲೇಷಣೆ ಮಾಡುವ ಪ್ರಯತ್ನವನ್ನೂ ಮಾಡಿಲ್ಲ. ಆದ್ದರಿಂದ ಇದು ಐತಿಹಾಸಿಕ ಗ್ರಂಥಗಳ ಸಾಲಿಗೂ ಸೇರಿಲ್ಲ. ಬದಲಾಗಿ, ಹಿಂದೆ ಹೇಳಿದಂತೆ, ಸ್ವಾಮಿ ಸ್ವಾಮಿ ವಿರಜಾನಂದರ ಜೀವನ ಹಾಗೂ ಸಾಧನೆಯ ಬಗ್ಗೆ ಕೆಲವೊಂದು ಆಯ್ದ ಸಮಕಾಲೀನ ಘಟನೆಗಳ ಪ್ರತಿಬಿಂಬವಿದು.

ಶ್ರೀರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಪೂಜ್ಯ ಮಾಧವಾನಂದರು ಮತ್ತು ಬೇಲೂರಿನ ಶ್ರೀರಾಮಕೃಷ್ಣ ಮಿಷನ್ನಿನ ವಿದ್ಯಾಮಂದಿರದ ಅಧ್ಯಕ್ಷರಾದ ಸ್ವಾಮಿ ತೇಜಸಾನಂದರು ಈ ಗ್ರಂಥದ ಕರಡಚ್ಚಿನ ಬಹುಭಾಗವನ್ನು ಓದಿ, ಅಗತ್ಯ ಕಂಡಲ್ಲಿ ಸಂಸ್ಕರಣವನ್ನು ಮಾಡುವುದರ ಮೂಲಕ ಗ್ರಂಥದ ಗೌರವವನ್ನು ಹೆಚ್ಚಿಸಿದ್ದಾರೆ. ಈ ಪುಸ್ತಕದ ಲಾಭಾಂಶವನ್ನು ಬೇಲೂರು ಮಠದ ಶಿಕ್ಷಣ ಕೇಂದ್ರಕ್ಕಾಗಿ ಮೀಸಲಾಗಿಟ್ಟಿದೆ. ಇತಿ ವಿನೀತನಾದ,

– ಲೇಖಕ

೧

ಧರೆಯ ರಭಸವಾದ ಘಟನಾ ಪ್ರವಾಹವು ತನ್ನದೇ ಆದ ವೇಗವನ್ನನುಸರಿಸಿ ಹರಿಯುತ್ತಿದೆ. ಮಾನವ ಆದರೊಂದಿಗೆ ಓಡಿ ಸರಿಗಟ್ಟಲಾರ. ನೋಡನೋಡುತ್ತಲೇ ಅವು ಎಲ್ಲಿಗೆ ಹೋಗಿ ಸೇರುತ್ತವೆ ಎಂಬುದನ್ನು ಊಹಿಸಲೂ ಆಗದೆ, ಅವನು ಮೂಕನಾಗಿ ಹಿಂದೆಯೇ ಉಳಿಯುತ್ತಾನೆ. ಆದರೂ ಅವನು ಸೋಲನ್ನೊಪ್ಪುವುದಿಲ್ಲ; ಕಳೆದು ಹೋದ ಘಟನೆಗಳಿಗೆ ತನ್ನ ಸ್ಮೃತಿಪಟಲದಲ್ಲಿ ಆಶ್ರಯವನ್ನಿತ್ತು ಹೊಸತಾದ ಕೌಶಲದಿಂದ ಅದನ್ನು ಹಿಡಿದಿಟ್ಟಿರುತ್ತಾನೆ. ನೆನಪಿಗೆ ನಾಶ

ವಿಲ್ಲ. ಮರೆಯಲ್ಲಿದ್ದುಕೊಂಡು, ಆಗಾಗ ತೆರೆಗೆ ಬರುತ್ತಾ ಜೀವನದ ಕಣಕಣವನ್ನೂ ಅದು ಸಮೃದ್ಧಗೊಳಿಸುತ್ತದೆ. ಮನುಷ್ಯನೊಬ್ಬ ಮೃತ್ಯುವಶನಾದರೂ ಅವನು ಇತರರಿಗಾಗಿ ತನ್ನಲ್ಲಿ ಸಂಗ್ರಹವಾದ ನೆನಪುಗಳನ್ನು ಬಿಟ್ಟು ಹೋಗುತ್ತಾನೆ. ಅದನ್ನು ಆಧರಿಸಿ ಇತರರು ನಕ್ಕು ನಲಿದು, ಅತ್ತು ಕರೆದು, ಓಡಾಡಿ ಜೀವನದ ಔನ್ನತ್ಯವನ್ನು ತಲುಪುತ್ತಾರೆ. ನೆನಪು ಎಂಬುದು ಇರುವುದರಿಂದ ಮಾನವನು ಕಾಲ, ಜಗತ್ತು ಹಾಗೂ ಜೀವನ ಇವೆಲ್ಲವನ್ನೂ ಗೆಲ್ಲಬಲ್ಲ.

ಘಟನೆಗಳು ನಡೆದಾಗ ಅದರಲ್ಲಿ ಆಸಕ್ತಿ-ವಿರಕ್ತಿ, ಸುಖ-ದುಃಖ, ಭಯ-ಸಂದೇಹ, ರೂಪ-ಕುರೂಪಗಳು ಅಡಕವಾಗಿರುತ್ತವೆ. ಆದರೆ ನೆನಪಿನಲ್ಲಿ ಈ ದ್ವಂದ್ವವಿರುವುದಿಲ್ಲ. ನೆನಪನ್ನು ನಾವು ರಾಗ-ದ್ವೇಷದಿಂದ ಮುಕ್ತವಾದ ದೃಷ್ಟಿಕೋನದಿಂದ ನೋಡುತ್ತೇವೆ. ಇದರಲ್ಲಿ ಏನೋ ಒಂದು ರೀತಿಯ ಸ್ನಿಗ್ಧ ಮಾಧುರ್ಯ ತುಂಬಿರುತ್ತದೆ.

ನೆನಪುಗಳಿಗೆ ಹಿನ್ನೆಲೆಯೇ — 'ಸತ್ಯ-ಶಿವ-ಸುಂದರ.'

* * *

ಒಂದು ಶತಮಾನಕ್ಕೆ ಹಿಂದೆ, ಕಾಲಗರ್ಭದಲ್ಲಿ ಅಡಗಿಹೋದ ಅಸಂಖ್ಯ ವ್ಯಕ್ತಿಗಳ ನಡುವಿನಿಂದ ಇಬ್ಬರು ವೃದ್ಧರನ್ನು ಸ್ಮೃತಿಪಟಲಕ್ಕೆ ಎಳೆದು ತರುತ್ತೇನೆ. ಇವರಿಬ್ಬರೂ ಕೊಲ್ಕತ್ತಾ ನಿವಾಸಿಗಳು, ಮೇಲಾಗಿ ಬೀಗರು. ಅವರಲ್ಲೊಬ್ಬ ರಾಮರತನ ಬಸು. ಈತನು ಉದ್ಯೋಗದ ನಿಮಿತ್ತ ೨೪ ಪರಗಣ ಜಿಲ್ಲೆಯಲ್ಲಿರುವ ಕೊದಾಲಿಯಾ ಗ್ರಾಮದ ತನ್ನ ಪೂರ್ವಿಕರ ಮನೆಯನ್ನು ಬಿಟ್ಟು ಕೊಲ್ಕತ್ತೆಗೆ ಬಂದು, ಸಿಮ್ಲಾ ಎಂಬಲ್ಲಿ ವಾಸವಾಗಿದ್ದನು. ಅವನು ಬಹಳ ದಿನಗಳಿಂದ ವಿಧುರ. ತನ್ನ ದೂರದ ಸಂಬಂಧಿ ಸೋದರನ ಪತ್ನಿಯ ಸಹಾಯದಿಂದ ತನ್ನ ಒಬ್ಬಳು ಮಗಳು ಹಾಗೂ ಐವರು ಗಂಡುಮಕ್ಕಳನ್ನು ಬೆಳೆಸಿದ್ದ. ಅವನು ಜೀವನದಲ್ಲಿ ಅನೇಕ ಆಘಾತಗಳನ್ನೂ, ಕಷ್ಟ-ನಷ್ಟಗಳನ್ನೂ ಸಹಿಸಿದ್ದ. ಅವನ ಎರಡನೇ ಮಗ ೧೫ನೇ ವಯಸ್ಸಿನಲ್ಲಿ ಕಠಿಣ ರೋಗಕ್ಕೆ ತುತ್ತಾದಾಗ ಅವನ ಸೇವೆ, ಶುಶ್ರೂಷೆಗಳಿಗಾಗಿ ಸದಾ ಮನೆಯಲ್ಲಿರ ಬೇಕಾಗಿ ಬಂತು. ಅದಕ್ಕೆ ರಜೆ ಕೇಳಿದಾಗ ಸಾಹೇಬ ಕೊಡಲಿಲ್ಲ. ಒಂದು ದಿನ ಕಛೇರಿಯಿಂದ ಮನೆಗೆ ಬರುವಷ್ಟರಲ್ಲಿ ಮಗನ ಪ್ರಾಣಪಕ್ಷಿ ಹಾರಿಹೋಗಿತ್ತು. ಅವನು ಅಂದಿನಿಂದಲೇ ಕೆಲಸಕ್ಕೆ ತಿಲಾಂಜಲಿ ಯಿತ್ತು, ಸ್ವಂತ ವ್ಯಾಪಾರ ಪ್ರಾರಂಭಿಸಿದ; ಬಹಳಷ್ಟು ಹಣವನ್ನೂ ಗಳಿಸಿದ. ಈತ ಕಾಳೀಭಕ್ತನಾಗಿದ್ದ. ಅವನು ಸದಾ ಕಾಳೀಮಾತೆಯನ್ನು ಧ್ಯಾನಿಸುತ್ತಿದ್ದ. ವೃದ್ಧಾಪ್ಯದಲ್ಲಿ ಬೇಕಾದಷ್ಟು ವಿರಾಮದ ಸಮಯವನ್ನು ಚದುರಂಗದಾಟದಲ್ಲಿ ಕಳೆಯುತ್ತಿದ್ದ. ರಾಮರತನನ ಸಹೃದಯತೆ ಹಾಗೂ ತೀಕ್ಷ್ಣಬುದ್ಧಿಯಿಂದಾಗಿ ನೆರೆ ಹೊರೆಯವರು ಅವನನ್ನು ಗೌರವಿಸುತ್ತಿದ್ದರು. ಅಲ್ಲದೆ ಆಪತ್ತಿನಲ್ಲಿ ಆತನ ಸಲಹೆಯನ್ನೂ ಅಪೇಕ್ಷಿಸುತ್ತಿದ್ದರು. ರಾಮರತನನು ಸ್ನೇಹಶೀಲನೇ ಆದರೂ ಸ್ವಲ್ಪ ಮುಂಗೋಪಿಯಾಗಿದ್ದ. ತನ್ನ ಮೊದಲನೆಯ ಮಗನಾದ ತ್ರೈಲೋಕ್ಯನಾಥನಿಗೆ ವೈದ್ಯಕೀಯ ವ್ಯಾಸಂಗ ಮಾಡಿಸಿದ್ದ. ಓದುತ್ತಿರುವಾಗಲೇ ಅವನಿಗೆ ಮದುವೆ ಮಾಡಿಸಿದ್ದ. ಬಾಲಕಿಯಾದ ವಧು ನಿಷಾದಕಾಲಿ ಗಂಡನ ಮನೆಗೆ ಬಂದು, ಅತ್ತೆಯಿಲ್ಲದ ಮನೆಯ ಸಂಸಾರ ನಿರ್ವಹಣೆಯನ್ನು ವಹಿಸಿಕೊಂಡಳು. ಇವಳು ವಿನೋದವಿಹಾರಿ ಮಿತ್ರನ ಮಗಳು.

ಬೀಗನಾದ ವಿನೋದವಿಹಾರಿ ಮಿತ್ರನು ಆಹಿರಿಟೋಲಾದ ಕುಲೀನ ಗೃಹಸ್ಥ. ಆತನದು ಶಾಂತ, ಗಂಭೀರ ಪ್ರಕೃತಿ. ಎಲ್ಲರ ಬಗ್ಗೆ ಅವನಿಗೆ ಉದಾರ ಪ್ರೀತಿಯಿತ್ತು. ಆತನ ದೈನಂದಿನ ಜೀವನದ ನಿಖರ-ನಿಯಮ-ನಿಷ್ಠೆ, ಸಂಯಮ ಮತ್ತು ಅಚ್ಚುಕಟ್ಟುತನ ಸಹಜವಾಗಿಯೇ ಎಲ್ಲರ ಕಣ್ಣಿಗೂ ಬೀಳುತ್ತಿತ್ತು. ವೃದ್ಧಾಪ್ಯದಲ್ಲಿಯೂ ದಂಡ-ಬೈಠಕ್ ಹೊಡೆಯುತ್ತಿದ್ದ, ಸಂಜೆ ೪-೫ ಮೈಲಿ ತಿರುಗಾಡಿ ಬರುತ್ತಿದ್ದ. ಹಾಗೆಯೇ ತನ್ನ ಮೂವರು ಹೆಣ್ಣು ಮಕ್ಕಳನ್ನು ಸರದಿ ಪ್ರಕಾರ ಭೇಟಿಯಾಗಿ ಬರುತ್ತಿದ್ದ. ಅವನು ಎರಡನೇ ಮಹಡಿಯ ತಾರಸಿಯ ಮೇಲೆ ಅನೇಕ ಕುಂಡಗಳಲ್ಲಿ ಹೂವಿನ ಗಿಡಗಳನ್ನು ಬೆಳೆಸಿದ್ದ. ತಾನೇ ಸ್ವತಃ ಕೆಳಗಿಂದ ಬಾಲ್ದಿಯಲ್ಲಿ ನೀರು ತುಂಬಿಕೊಂಡು ಆ ಗಿಡಗಳಿಗೆ ಬಹಳ ವಾತ್ಸಲ್ಯದಿಂದ ನೀರೆರೆಯುತ್ತಿದ್ದ. ೧೦-೧೨ ಜೋಡಿ ಬೂಟುಗಳನ್ನು ತಾನೇ ಮೆರಗು ಮಾಡುತ್ತಿದ್ದ. ತಂಬಾಕಿನೊಂದಿಗೆ ಬೆರಸಲು ನಾನಾ ಬಗೆಯ ಸುವಾಸನೆಯ ಪುಡಿಗಳನ್ನು ತಯಾರಿಸಿ, ಮಡಕೆಗಳಲ್ಲಿ ಅದರ ಮಿಶ್ರಣಗಳನ್ನು ತುಂಬಿ ಮಣ್ಣಿನಲ್ಲಿ ಹೂತಿಡುತ್ತಿದ್ದ. ದಿನನಿತ್ಯದ ವ್ಯವಹಾರಕ್ಕೆ ಬೇಕಾಗುತ್ತಿದ್ದ ತಂಬಾಕನ್ನು ಚಿಲುಮೆಗಳಲ್ಲಿ ತುಂಬಿಸಿ ಸಾಲಾಗಿ ಜೋಡಿಸಿಡುತ್ತಿದ್ದ. ಇದಲ್ಲದೆ ದಿನವೂ ಒಂದು ಲಕ್ಷ ಹರಿ ನಾಮ ಜಪವನ್ನು ತಪ್ಪದೆ ಮಾಡುತ್ತಿದ್ದ. ಅನವಶ್ಯಕವಾಗಿ ಮಾತನಾಡುತ್ತಿರಲಿಲ್ಲ, ಇತರರನ್ನು ಕುರಿತ ಚರ್ಚೆಯಲ್ಲಿ ಭಾಗವಹಿಸುತ್ತಿರಲಿಲ್ಲ. ಸುಸಂಸ್ಕೃತ ಅಭಿರುಚಿಯವನೂ, ಕಾರ್ಯಕುಶಲನೂ, ಸ್ವಾವಲಂಬಿಯೂ, ಭಗವನ್ನಿಷ್ಠನೂ ಆದ ವಿನೋದ ವಿಹಾರಿಯ ಪ್ರಶಾಂತ ವ್ಯಕ್ತಿತ್ವವು ಆತನ ಪರಿವಾರದವರೆಲ್ಲರ ಮನವನ್ನು ಸೆಳೆದಿತ್ತು. ಆತನ ಸಂಸಾರವು ನಿಜಕ್ಕೂ ಶಾಂತಿ-ಸಾಮರಸ್ಯದಿಂದ ಪರಿಪೂರ್ಣವಾಗಿತ್ತು.

ಈ ಇಬ್ಬರು ವೃದ್ಧರ ಸ್ವಭಾವದಲ್ಲಿ ವೈಪರೀತ್ಯಗಳಿದ್ದರೂ, ಅವರ ಗೆಳೆತನಕ್ಕೇನೂ ಕುಂದುಂಟಾಗಿರಲಿಲ್ಲ. ಬಸು ಮಹಾಶಯನು ತನ್ನ ಬೀಗನಾದ ವಿನೋದವಿಹಾರಿ ಮಿತ್ರನನ್ನು ಚದುರಂಗದಾಟಕ್ಕೆ ಎಳೆಯಲು ಪ್ರಯತ್ನ ಮಾಡುತ್ತಿದ್ದ; ಆತನಾದರೋ ಮಂದಹಾಸ ಬೀರಿ ನಿರಾಕರಿಸಿಬಿಡುತ್ತಿದ್ದ. ಮಿತ್ರನಾದರೊ ವಿಧುರನಾದ ತನ್ನ ಬೀಗನ ಹಿಡಿತವಿಲ್ಲದ ಸಂಸಾರದಲ್ಲಿ ಶೃಂಖಲತೆ, ಸಾಮರಸ್ಯಗಳನ್ನು ತರಲು ಉಪದೇಶವೀಯುತ್ತಿದ್ದ. ರಾಮರತನನ ಬೇಸತ್ತ ಮನಸ್ಸಿಗೆ ಅದೆಷ್ಟು ಉಪದೇಶಗಳು ಹಿಡಿಸುತ್ತಿದ್ದವೋ ತಿಳಿಯದು. ಚದುರಂಗದಾಟದ ಗುಂಗಿನಲ್ಲಿ ನೋಡನೋಡುತ್ತಾ ಉಪದೇಶಗಳೆಲ್ಲ ಎಲ್ಲೋ ಕರಗಿ ಹೋಗುತ್ತಿದ್ದವು. ಆತ 'ಹೋಹೋ' ಎಂದು ನಗುತ್ತ, ''ಅಯ್ಯೋ! ಬೀಗರೇ, ಇನ್ನೂ ಸಂಸಾರವೇ! ಮಗ-ಸೊಸೆಯಂದಿರು ಸಂಬಾಳಿಸಲಿ ಬಿಡಿ, ನನಗ್ಯಾಕಿನ್ನು?'' ಎನ್ನುತ್ತಿದ್ದ.

ಆದರೆ ಅಂತರಿಕ್ಷದಲ್ಲಿ ವಿಧಿ, 'ಓ ವೃದ್ಧ, ಇಷ್ಟಕ್ಕೆ ವೈರಾಗ್ಯ ತಾಳಿದರಾದೀತೆ? ಇನ್ನೂ ಎಷ್ಟೋ ಆಘಾತಗಳು ನಿನಗಾಗಿ ಕಾಯುತ್ತಿವೆಯಲ್ಲಾ!' ಎಂದು ತನ್ನಲ್ಲೇ ನಕ್ಕ.

ಕ್ರಿ.ಶ. ೧೮೭೫ರ ಜೂನ್ ೧೦, ಮಂಗಳವಾರ; ಪುರೀಕ್ಷೇತ್ರದ ಶ್ರೀಜಗನ್ನಾಥದೇವನ ಸ್ನಾನಯಾತ್ರೆಯ ದಿನ. ಅಂದು ಆ ವೃದ್ಧರಿಬ್ಬರ ಮನಸ್ಸು ಸಂತಸ-ಉಲ್ಲಾಸದಿಂದ ತುಂಬಿತ್ತು. ಏಕೆಂದರೆ ಬೆಳಿಗ್ಗೆ

ಎಂಟರ ವೇಳೆಗೆ ಆಹಿರಿಟೋಲಾದ ವಿನೋದವಿಹಾರಿಯ ಮನೆಯಲ್ಲಿ ರಾಮರತನನ ಮೊದಲ ಮೊಮ್ಮಗ – ವಿನೋದ ವಿಹಾರಿಯ ಎರಡನೇ ಮಗಳ ಮೊದಲ ಮಗು ಜನ್ಮ ತಾಳಿದೆ. ತಾತನಾದ ರಾಮರತನ ಉದ್ವೇಗದಿಂದ ಹೇಳಿದ ''ಕಾಳಿ, ಕಾಳಿ – ತಾಯೆ! ಮಗುವನ್ನು ದೀರ್ಘಾಯುವನ್ನಾಗಿ ಮಾಡು. ಅವನಿಂದ ವಂಶದ ಬೆಳಕು ಉಜ್ವಲವಾಗಿ ಬೆಳಗಲಿ!'' ಅಜ್ಜನ (ತಾಯಿಯ ತಂದೆ) ಅಂತರಾಳದಿಂದ ಗಭೀರ ಪ್ರಾರ್ಥನೆಯೊಂದು ಹೊರಟಿತು ''ಕೃಷ್ಣ – ನಾರಾಯಣ–ಹರಿ! ಮಗು ಉತ್ತಮ ಪುರುಷನಾಗಿ ಬೆಳೆಯಲಿ, ಭಕ್ತನಾಗಲಿ'' ಎಂದು. ಶಿಶುವಿಗೆ ಕಾಳೀಕೃಷ್ಣನೆಂದು ನಾಮಕರಣ ಮಾಡಿದರು. ಮಗುವನ್ನು ಕರೆದರೆ ಅಜ್ಜ–ತಾತಂದಿರಿಬ್ಬರಿಗೂ ತಮ್ಮ ತಮ್ಮ ಆರಾಧ್ಯ ದೇವತೆಯ ನೆನಪಾಗುತ್ತಿತ್ತು.

ಶಿಶುವು ತಾಯಿಯ ಮೊಲೆಹಾಲು ಕುಡಿಯುತ್ತಿರಲಿಲ್ಲ. ಇದರಿಂದಾಗಿ ತಾತನು ಒಂದು ಒಳ್ಳೆಯ ಹಸುವನ್ನು ಕೊಂಡು ತಂದನು. ಅದರ ಹಾಲನ್ನು ಮೊಮ್ಮಗನಲ್ಲದೆ ಇನ್ನಾರೂ ಕುಡಿಯುವಂತಿರಲಿಲ್ಲ; ಅದು ತಾತನ ಬಿಗಿ ನಿಯಮ. ತಾನೇ ಸ್ವತಃ ಆ ಗೋವಿನ ಸೇವೆ ಮಾಡುತ್ತಿದ್ದ. ಮಗುವು ರಾತ್ರಿಯೆಲ್ಲಾ ನಿದ್ರಿಸುತ್ತಿರಲಿಲ್ಲ; ಹಗಲಲ್ಲಿ ಮಲಗುತ್ತಿತ್ತು. ರಾತ್ರಿ ವೇಳೆ ಮಲಗಿಸಲು ಹೋದರೆ ಅತ್ತು ಬೊಬ್ಬಿಡುತ್ತಿತ್ತು. ಯಾರಾದರೊಬ್ಬರು ಮಗುವನ್ನು ಎತ್ತಿಕೊಂಡು ತಾರಸಿಯಲ್ಲಿ ಚಂದಮಾಮನನ್ನು ತೋರಿಸುತ್ತಾ ಸುತ್ತಾಡಬೇಕಿತ್ತು; ಇಲ್ಲವೇ ಮಡಿಲಲ್ಲಿಟ್ಟು ತೂಗುತ್ತಾ ಮಲಗಿಸುವ ಪ್ರಯತ್ನ ಮಾಡಬೇಕಿತ್ತು.

ಮೊಮ್ಮಗನ ಜನನವಾಗಿ ಒಂದು ವರ್ಷದೊಳಗೆ ಮಗನಾದ ತ್ರೈಲೋಕ್ಯನಾಥನು ಎಲ್.ಎಮ್.ಎಸ್. ಎಂಬ ವೈದ್ಯಕೀಯ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ, ಮಹಿಷಾದಳದ ರಾಜ್‌ಸ್ಟೇಟ್ ಎಂಬಲ್ಲಿ ೧೫೦ ರೂಪಾಯಿ ಸಂಬಳದ ಕೆಲಸ ದೊರಕಿಸಿಕೊಂಡನು. ಈ ಬಾಲಕನ ಆಗಮನವು ಸಂಸಾರದ ಸಿರಿ–ಸಂಪತ್ತಿನ ವೃದ್ಧಿಯ ಸೂಚನೆ ಎಂದು ಭಾವಿಸಿದ ವೃದ್ಧನ ಆನಂದಕ್ಕೆ ಪಾರವೇ ಇರಲಿಲ್ಲ; ಮಗುವಿನ ಮೇಲೆ ಆತನ ಸ್ನೇಹಾದರಗಳು ಬೆಳೆಯುತ್ತಲೇ ಹೋದವು. ಭವಿಷ್ಯದ ಸುಂದರ ಕನಸುಗಳು ಅವನ ಮನಸ್ಸನ್ನು ಉತ್ತೇಜಿಸುತ್ತಿದ್ದವು. ಇತ್ತ ಮಗು ಹಸುವಿನ ಹಾಲನ್ನು ಚೆನ್ನಾಗಿ ಕುಡಿದು, ತನ್ನ ವಯಸ್ಸಿನ ಮಕ್ಕಳಿಗಿಂತ ಹೆಚ್ಚು ದಷ್ಟಪುಷ್ಟವಾಗಿ ಬೆಳೆದಿತ್ತು. ತಾತನು ಮಗುವಿಗಾಗಿ ಮೈತುಂಬ ಒಡವೆಗಳನ್ನು ಮಾಡಿಸಿ ತಂದನು.

ಈ ರೀತಿ ಸಂಗೀತ ಕಳೆ ಕಟ್ಟುತ್ತಿರುವಾಗ, ಇದ್ದಕ್ಕಿದ್ದಂತೆಯೇ ಲಯ ತಪ್ಪಿಹೋಯಿತು. ಚದುರಂಗದ ಕಾಯಿಗಳನ್ನು ನಡೆಸುವಲ್ಲಿ ತಾತನು ಒಂದು ದೊಡ್ಡ ತಪ್ಪು ಮಾಡಿದ್ದರಿಂದ ಅನಿರೀಕ್ಷಿತವಾಗಿ ಆಟ ಭಂಗವಾಯಿತು. ಈಗ ಹಿರಿಯ ಸೊಸೆ ತನ್ನ ಮೂಗಿನ ನೇರಕ್ಕೆ ನಡೆಯುವ ವೃದ್ಧನ ಕೋಪಕ್ಕೆ ತುತ್ತಾಗಿದ್ದಾಳೆ. ಅತ್ಯಂತ ಸಹಿಷ್ಣುವೂ, ಶ್ರಮಜೀವಿಯೂ, ಸೇವಾಪರಾಯಣೆಯೂ ಆದ ನಿಷಾದಕಾಲಿಗೆ ಏನು ಮಾಡಿದರೂ ಮಾವನನ್ನು ಸಮಾಧಾನಪಡಿಸಲಾಗುತ್ತಿರಲಿಲ್ಲ. ಸಣ್ಣಪುಟ್ಟ ಕಾರಣಗಳಿಗೂ ವೃದ್ಧನು ಸೊಸೆಯಲ್ಲಿ ದೋಷವನ್ನು ಹುಡುಕಿ ಮತ್ತೆ ಮತ್ತೆ ಮಗನ ಬಳಿ ಚಾಡಿ ಹೇಳುತ್ತಿದ್ದ. ಗಲಾಟೆ ಎಬ್ಬಿಸಿ ದಿನದಿನವೂ ಅಶಾಂತಿ ಸೃಷ್ಟಿಸುತ್ತಿದ್ದ. ವಿಧೇಯನೂ, ಸಾಧುಸ್ವಭಾವದವನಾದ ತ್ರೈಲೋಕ್ಯನ ಮೃದುವಾದ ಮಧ್ಯಸ್ಥಿಕೆ ಯಾವ ಕೆಲಸಕ್ಕೂ ಬರಲಿಲ್ಲ. ಬೇರೆ ದಾರಿಕಾಣದೆ ಅವನು ಹೆಂಡತಿ ಹಾಗೂ ಎರಡು ವರ್ಷದ ಮಗ ಕಾಳೀಕೃಷ್ಣನನ್ನು ಕರೆದುಕೊಂಡು ಬೇರೆ ಸಂಸಾರ ಹೂಡಿದನು. ಅಷ್ಟುಹೊತ್ತಿಗೆ ಅವನು ಹಿಂದಿನ ಕೆಲಸ ತೊರೆದಿದ್ದ. ಕೆಲವು ದಿನ ಜಯನಗರದಲ್ಲಿ ವೈದ್ಯನಾಗಿ ಸೇವೆ ಸಲ್ಲಿಸಿದ. ನಂತರ ಕೊಲ್ಕತ್ತೆಯ ೮೭, ಅಮ್‌ಹರ್ಸ್ಟ್ ಸ್ಟ್ರೀಟಿನಲ್ಲಿ 'ದಿ ಈಸ್ಟರ್ನ್ ಮೆಡಿಕಲ್ ಹಾಲ್' ಎಂಬ ಹೆಸರಿನ ಸ್ವಂತ ಚಿಕಿತ್ಸಾಲಯವನ್ನು ತೆರೆದು, ಅದರ ಒಳಭಾಗದಲ್ಲೇ ಸಂಸಾರ ಹೂಡಿದ. ತನ್ನ ಪ್ರಾಣಪುತ್ಥಲಿಯಾದ ಮೊಮ್ಮಗನು ಎಂದು ತನ್ನಿಂದ ದೂರವಾದನೋ ಅಂದೇ ಅವನಿಗಾಗಿ ತಂದಿದ್ದ ತನ್ನ ನೆಚ್ಚಿನ ಹಸುವನ್ನು ತಾತನು ರಸ್ತೆಗೆ ಬಿಟ್ಟುಬಿಟ್ಟ.

* * *

ಬಾಲ್ಯದ ನೆನಪುಗಳು ಸ್ವಲ್ಪ ಸ್ವಲ್ಪವಾಗಿ ವಾರ್ಧಕ್ಯದ ತೀರಕ್ಕೆ ಇದ್ದಕ್ಕಿದ್ದಂತೆ ತೇಲಿಬರುವುದುಂಟು. ಆಶ್ಚರ್ಯ! ಅಷ್ಟೊಂದು ಸುದೀರ್ಘ ಕಾಲದ ಮರೆಯಲ್ಲಿದ್ದರೂ ಅವುಗಳ ಬಣ್ಣ ಸ್ವಲ್ಪವೂ ಮಾಸಿರುವುದಿಲ್ಲ.....

ತಂದೆಯ ಚಿಕಿತ್ಸಾಲಯದ ಒಂದು ಮೂಲೆಯಲ್ಲಿ ಒಂದು ಸೀಮೆಎಣ್ಣೆಯ ಟಿನ್ನಿತ್ತು. ದಿನವೂ ಸಂಜೆ ಅದರಿಂದ ಅದೇನೋ ನೀರಿನಂತಹುದನ್ನು ಬಾಟಲಿಯಲ್ಲಿ ಸುರಿಯುತ್ತಿದ್ದರು. ಅಲ್ಲಿಂದ ಮತ್ತೆ ಲ್ಯಾಂಪಿಗೆ. ಬತ್ತಿಯನ್ನು ಉರಿಸಿದೊಡನೆಯೇ ಮನೆ ಬೆಳಗುತ್ತಿತ್ತು. ಶಿಶುವಿನ ಮನದಲ್ಲಿ ಆ ಟಿನ್ನು ಒಂದು ಅದ್ಭುತ ರಹಸ್ಯವೇ ಆಗಿತ್ತು. ಒಂದು ದಿನ ಮನೆಯಲ್ಲಿ ಯಾರೂ ಇಲ್ಲದಾಗ ಮಗು ಮೆಲ್ಲನೆ ಟಿನ್ ಬಳಿಗೆ ಹೋಯಿತು. ಅದರ ಒಂದು ಮೂಲೆಯಲ್ಲಿ ಒಂದು ಕಿಂಡಿಯಿದೆ; ಅಲ್ಲಿಂದ ಒಂದು ರೀತಿಯ ವಿಚಿತ್ರ ವಾಸನೆ ಬರುತ್ತಿದೆ! ಮಗು ತನ್ನ ಪುಟ್ಟ ಕೈಗಳನ್ನು ಆ ಕಿಂಡಿಯೊಳಗಿಟ್ಟು, ಆ

ರಹಸ್ಯ ಪದಾರ್ಥದ ಸ್ವರೂಪವನ್ನು ಪರೀಕ್ಷಿಸಲು ಕೈಯನ್ನು ಬಾಯಿಗಿಟ್ಟು ರುಚಿ ನೋಡಿಯೇ ಬಿಟ್ಟಿತು. ತಲೆಯಲ್ಲಿ, ಮೈಯಲ್ಲಿ ಏನೋ ಒಂದು ರೀತಿಯ ತಳಮಳ. ಅಷ್ಟರಲ್ಲಿ ತಂದೆ ಒಂದು ಸೀಮೆಎಣ್ಣೆ ನಿರೋಧಕ ಔಷಧಿ ಕೊಟ್ಟು ಮಗುವನ್ನು ಅಪಾಯದಿಂದ ಪಾರು ಮಾಡಿದರು.

ದಿನದಿನವೂ ನೋಡುತ್ತಿದ್ದ ಮತ್ತೊಂದು ದೃಶ್ಯ ನೆನಪಿಗೆ ಬರುತ್ತದೆ. ಒಬ್ಬ ಅಂಧ ಬಾಲಕನನ್ನು ಆತನ ತಾಯಿ ಕೈಹಿಡಿದು ಕರೆತಂದು ರಸ್ತೆಯ ಪಕ್ಕದಲ್ಲಿ ಕೂರಿಸಿ ಹೋಗುತ್ತಿದ್ದಳು. ಆತನು ಗೆಜ್ಜೆ ಕಟ್ಟಿಕೊಂಡಿದ್ದ. ತನ್ನ ಒಂದು ಕೈಯನ್ನು ದೊಡ್ಡ ಮಣ್ಣಿನ ಕೊಡದ ಒಳಗಿಳಿಸಿ, ಬಾರಿಸುತ್ತಾ ಹಾಡುತ್ತಿದ್ದ. ಅವನ ಹಾಡು, ವಾದ್ಯ ತುಂಬ ಮಧುರವಾಗಿರುತ್ತಿತ್ತು. ನೋಡುತ್ತಿದ್ದಂತೆಯೆ ಜನರ ಗುಂಪು ಸೇರುತ್ತಿತ್ತು; ಅನೇಕರು ಪುಡಿಗಾಸು ಕೊಟ್ಟು ಹೋಗುತ್ತಿದ್ದರು.

ವಿಚಿತ್ರ ಬಟ್ಟೆ ಹಾಕಿಕೊಂಡಿದ್ದ ತಿಂಡಿ ಮಾರುವವನ ಚಿತ್ರವೂ ಕಣ್ಣಮುಂದೆ ತೇಲುತ್ತದೆ. ಒಂದು ಕಾಸಿನ ಪೊಟ್ಟಣದೊಳಗೆ ಏನೇನಿರುತ್ತದೆ ಎಂದು ಅವನು ಒಂದು ಚುಟುಕನ್ನು ರಾಗವಾಗಿ ಹಾಡುವ ಮೂಲಕ ತಿಳಿಸುತ್ತಿದ್ದ. ಬಹಳ ತಮಾಷೆಯ ಅವನ ಹಾಡನ್ನು ಕೇಳುವುದಕ್ಕಾಗಿ ಮನೆಮನೆಯ ಜನರು ಅವನನ್ನು ಕರೆದು ಒಂದೆರಡು ಕಾಸಿನ ತಿಂಡಿ ಖರೀದಿಸುತ್ತಿದ್ದರು. ಅವನ ಪದ್ಯದ ಒಂದೆರಡು ಸಾಲು ಈಗ ನೆನಪಿಗೆ ಬರುತ್ತದೆ:

ಅಕ್ಕಿ ಅವಲಕ್ಕಿ, ಗಸಗಸೆ, ಕಡಲೆಪುರಿ ।
ಅದರಲ್ಲೇ ಇರುತ್ತೆ ಅರ್ಧ ಮೆಣಸಿನಕಾಯಿ ಮಸಾಲೆ ॥

ತಮಾಷೆಯ ಘಟನೆಯೊಂದು ನೆನಪಿಗೆ ಬರುತ್ತದೆ. ದೂರದ ಸಂಬಂಧಿ ದೊಡ್ಡಪ್ಪ ಬೌಬಜಾರಿನಲ್ಲಿ ತಂಬಾಕಿನ ಅಂಗಡಿ ಇಟ್ಟಿದ್ದ. ಆಗಾಗ ದೊಡ್ಡಪ್ಪನಲ್ಲಿಗೆ ಹೋಗುತ್ತಿದ್ದದ್ದೂ ಉಂಟು. ಆಗಿನ್ನೂ ೬-೭ ವರ್ಷ ವಯಸ್ಸು. ಒಂದು ದಿನ ದೊಡ್ಡಪ್ಪ 'ಒಂದು ಸ್ವಲ್ಪ ಕುಳಿತಿರಪ್ಪ, ನಾನು ಈಗ ಬರ್ತೀನಿ' ಅಂತ ಹೇಳಿ ಹೋದ. ಆತ ಹೋದಾಗಲೇ ಒಬ್ಬ ಗಿರಾಕಿ ಎರಡು ಪೈಸೆಗೆ ತಂಬಾಕು ಕೊಂಡುಕೊಳ್ಳಲು ಬಂದ. ಆಗ ಈ ಹುಡುಗನೇ ಅತ್ಯುತ್ಸಾಹದಿಂದ ದಕ್ಷ ವ್ಯಾಪಾರಸ್ಥನಂತೆ ದುಡ್ಡು ತೆಗೆದುಕೊಂಡು ಸಾಮಾನು ಕೊಟ್ಟುಬಿಟ್ಟ. ದೊಡ್ಡಪ್ಪ ಬಂದು ''ಎಲ್ಲಿಂದ ಕೊಟ್ಟೆ?'' ಎಂದು ಕೇಳಿದಾಗ ಆತ, ''ಏಕೆ, ಆ ಡಬ್ಬದಿಂದ'' ಎಂದ. ದೊಡ್ಡಪ್ಪ ನಕ್ಕು ''ಥತ್! ಅದು ತಂಬಾಕಲ್ಲ; ಕಾಮಿರಾ (ತಂಬಾಕಿಗೆ ಹಾಕುವ ಸುವಾಸನೆಯ ಪುಡಿ)'' ಎಂದ.

ತನ್ನನ್ನು ತಾನೇ ಮರೆಯುತ್ತಿದ್ದ ಒಬ್ಬ ಚಿತ್ರಕಾರನ ನೆನಪೂ ಆಗುತ್ತದೆ. ಆತ ತಂದೆಯ ಚಿಕಿತ್ಸಾಲಯಕ್ಕೆ ಸೇರಿದಂತಿದ್ದ ಭಾಗವನ್ನು ಬಾಡಿಗೆಗೆ ತೆಗೆದುಕೊಂಡು ವಾಸವಾಗಿದ್ದ. ಯಾರೊಂದಿಗೂ ಬೆರೆಯದೆ ಅವನು ತನ್ನ ಪಾಡಿಗೆ ತಾನು ಚಿತ್ರ ಬಿಡಿಸುತ್ತಲೇ ಇರುತ್ತಿದ್ದ. ಆತ ತಂದೆಗೊಂದು ಚಿತ್ರವನ್ನು ಉಡುಗೊರೆಯಾಗಿ ಕೊಟ್ಟಿದ್ದ. ಅದರ ಭಾವವಾದರೋ ಬಹಳ ಸುಂದರವಾಗಿತ್ತು: ಮಹಾದೇವನು ಅರ್ಧನಿಮೀಲಿತ ನೇತ್ರನಾಗಿ ಹಿಮಾಲಯದ ಒಂದು ದೊಡ್ಡ ಮರದ ಬುಡದಲ್ಲಿ ಒಂದು ಬಂಡೆಯ ಮೇಲೆ ಕಾಲನ್ನು ಇಳಿಬಿಟ್ಟು ಕುಳಿತಿದ್ದಾನೆ. ಉಮೆ ತನ್ನಿಬ್ಬರು ಸಖಿಯರೊಂದಿಗೆ ಆತನನ್ನು ಪೂಜಿಸಲು ಪುಷ್ಪ-ಚಂದನದ ತಟ್ಟೆ ಹಿಡಿದು ಬಂದಿದ್ದಾಳೆ. ಶಿವನಲ್ಲಿ ಭಕ್ತಿ-ಭಾವದಿಂದ ನೆಟ್ಟ ದೃಷ್ಟಿ ಇಟ್ಟು ಅಚಲವಾಗಿ ನಿಂತಿದ್ದಾಳೆ. ಆಶ್ಚರ್ಯ! ಆತ ತನ್ನ ಚಿತ್ರದ ಶಿವನ ಭಂಗಿಯಂತೆಯೇ ಒಂದು ದಿನ ಧ್ಯಾನದಲ್ಲಿ ನಿಶ್ಚಲನಾಗಿ ಕುಳಿತಿದ್ದ, ಅವನ ಪ್ರಾಣಪಕ್ಷಿ ಮಾತ್ರ ಹಾರಿಹೋಗಿತ್ತು! ಆ ಚಿತ್ರ ಬಹುಕಾಲ ಕಾಳೀಕೃಷ್ಣನ ಮನೆಯಲ್ಲಿಯೇ ಇತ್ತು.

ದಿನೇ ದಿನೇ ತ್ರೈಲೋಕ್ಯನಾಥನ ವೈದ್ಯವೃತ್ತಿ ಯಶಸ್ಸು ಗಳಿಸಿದಂತೆಲ್ಲಾ ಅವನ ಆದಾಯವೂ ಹೆಚ್ಚತೊಡಗಿತು. ಅವನು ತನ್ನ ದುಡಿಮೆಯ ಹಣದಿಂದ ನಾರಿಕೇಲ್ ಡಂಗಾ (ಕಲ್ಕತ್ತಾದ ಒಂದು ಪ್ರದೇಶ)ದಲ್ಲಿ ಮನೆ ಮಾಡಿದ. ಬಾಲಕ ಕಾಳೀಕೃಷ್ಣ ಈಗ ಒಬ್ಬಂಟಿಯಲ್ಲ. ಅವನ ತಂಗಿ, ತಮ್ಮಂದಿರು ಒಬ್ಬೊಬ್ಬರಾಗಿ ಜನ್ಮ ತಳೆದು ಜಗತ್ತಿಗೆ ಬಂದಿದ್ದಾರೆ. ಹಿರಿಯಣ್ಣನೆಂಬ ಗೌರವದ ಸ್ಥಾನ ಈ ಬಾಲಕನ ಹೃದಯಕ್ಕೆ ಉಲ್ಲಾಸ ತರುತ್ತಿದೆ. ಅವರನ್ನು ನೋಡಿಕೊಳ್ಳುವುದು, ಅವರೊಂದಿಗೆ ಆಟ-ಪಾಠ, ಹಾಡು-ಕಥೆ ಇವುಗಳಲ್ಲಿ ಅವನ ದಿನಗಳು ಆನಂದದಿಂದ ಉರುಳುತ್ತಿವೆ.

ಹುಡುಗನಿಗೆ ವಿದ್ಯಾಭ್ಯಾಸದಲ್ಲಿ ಮನಸ್ಸು ಏಕಾಗ್ರವಾದರೂ, ಶಾಲೆ ಕೆಡುಕೆನಿಸದಿದ್ದರೂ, ಕಾಳೀಕೃಷ್ಣನು ಇತರ ಮಕ್ಕಳೊಡನೆ ಬೆರೆಯುತ್ತಿರಲಿಲ್ಲ; ಮಾಸ್ಟರ್‌ಗಳೊಂದಿಗೆ ಮಾತನಾಡಲೂ ಸಹ ಲಜ್ಜೆ ಅಡ್ಡ ಬರುತ್ತಿತ್ತು. ಹೀಗಾಗಿ ಶಾಲಾವೇಳೆಯನ್ನು ಹೇಗೋ ಮೌನವಾಗಿ ಕಳೆಯಬೇಕಿತ್ತು. ಒಳ್ಳೆಯ ಸ್ವಭಾವದವನೂ, ನಾಚಿಕೆ ಹಾಗೂ ಮೃದು ಸ್ವಭಾವದವನೂ ಆದ ಕಾಳೀಕೃಷ್ಣನ ಸ್ನೇಹವನ್ನು ಬಯಸಿ ಸಹಪಾಠಿಗಳು ಅವನ ಮೇಲೆ ಬಿದ್ದು ಬರುತ್ತಿದ್ದರು. ಪುಂಡರೂ ಸಹ ಇವನೊಂದಿಗೆ ಸೇರಬಯಸುತ್ತಿದ್ದರು; ಆದರೆ ಅವರೊಂದಿಗೆ ಇವನ ಸ್ನೇಹ ಬಲಿಯುತ್ತಿರಲಿಲ್ಲ. ಬಾಲಕ ಕಾಳೀಕೃಷ್ಣನ ಜಗತ್ತು ಶಾಲೆಯ ಗದ್ದಲದಿಂದ ದೂರ ಉಳಿಯುತ್ತು .

ಅವನ ಆ ಭಾವನಾಜಗತ್ತು ತನ್ನ ಮನೆಯ ಪರಿಸರದಲ್ಲಿ ನಿರಾತಂಕವಾಗಿ ಉಲ್ಲಾಸದಿಂದ ವಿಕಾಸಹೊಂದುತ್ತಿತ್ತು. ತಾಯಿಯೊಂದಿಗಿದ್ದು ಆಕೆಯ ಮನೆ ಕೆಲಸದಲ್ಲಿ ಸಹಾಯ ಮಾಡುವುದು, ಮನೆಯನ್ನು ಓರಣವಾಗಿಡುವುದು, ಅಂಗಡಿಯಿಂದ ಸಾಮಾನು ಖರೀದಿಸಿ ತರುವುದು, ಅಂಗಳದಲ್ಲಿ ಹೂತೋಟ ಮಾಡುವುದು ಇವೆಲ್ಲವೂ ಅವನ ಮನಸ್ಸಿಗೆ ಮುದ ನೀಡುತ್ತಿತ್ತು. ತಂದೆಯೂ ಸಹ ಅವನನ್ನು ನೆರೆಹೊರೆಯ ಹುಡುಗರೊಂದಿಗೆ ಬೆರೆಯಲು ಬಿಡುತ್ತಿರಲಿಲ್ಲ; ಕೇವಲ ತಮ್ಮ-ತಂಗಿಯರೇ ಈತನ ಸಂಗಾತಿಗಳು. ಹೊರಗಿನ ಆಟ-ಪಾಠಗಳು ಇಲ್ಲವೆಂದೇ ಹೇಳಬಹುದು. ಸೋದರಮಾವನ ಮನೆಗೆ ಹೋದಾಗ ಅಜ್ಜನ ದಿನಚರಿ ವಿಶೇಷವಾಗಿ ಈ ಬಾಲಕನ ಗಮನವನ್ನು ಸೆಳೆಯುತ್ತಿತ್ತು. ಆತನ ಸ್ವಾವಲಂಬನೆ, ಕಾರ್ಯತತ್ಪರತೆ ಮತ್ತು ನೇಮನಿಷ್ಠೆಗಳು ಈ ಮೊಮ್ಮಗನ ಶೀಲದಲ್ಲಿ ನಿಧಾನವಾಗಿ ಬೇರೂರತೊಡಗಿತು.

(ಮುಂದುವರಿಯುವುದು)



ಏಕಾಗ್ರತೆ ಮತ್ತು ಅದನ್ನು ಸಾಧಿಸುವ ಮಾರ್ಗ

ಸ್ವಾಮಿ ಮುಕ್ತಿರೂಪಾನಂದ

ಮಾನಸಿಕ ಏಕಾಗ್ರತೆ ಪ್ರತಿಯೊಬ್ಬರೂ ರೂಢಿಸಿಕೊಳ್ಳಬೇಕಾದ ಒಂದು ಗುಣವಾಗಿದೆ. ವಿದ್ಯಾರ್ಥಿಗಳು, ಬೌದ್ಧಿಕ ಕ್ರಿಯೆಗಳಲ್ಲಿ ನಿರತರಾದವರು ಈ ಕಲೆಯನ್ನು ವಿಶೇಷವಾಗಿ ಕರಗತಮಾಡಿಕೊಳ್ಳಬೇಕು. ಆಧ್ಯಾತ್ಮಿಕ ಸಾಧಕರಿಗೂ ಅತ್ಯಗತ್ಯವಾಗಿ ಇರಬೇಕಾದ ಏಕಾಗ್ರತೆಯನ್ನು ಸಾಧಿಸುವ ಬಗೆ ಹೇಗೆ ಎಂಬುದನ್ನು ತಿಳಿಸಿಕೊಟ್ಟಿರುವ ಲೇಖಕರು ಸಿಂಗಾಪುರ ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾಗಿದ್ದರು. ಬಹುಶ್ರುತ ವಿದ್ವಾಂಸರೂ, ಚಿಂತಕರೂ, ಉತ್ತಮ ಲೇಖಕರೂ ಆಗಿರುವ ಪೂಜ್ಯರು ಸದ್ಯ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

ಕನಸುಗಳ ವಿಷಯ ಎಲ್ಲರಿಗೂ ಗೊತ್ತಿದೆ. ರಾತ್ರಿ ನಿದ್ರೆಯ ಸಮಯದಲ್ಲಿ ಕನಸುಗಳನ್ನು ನೋಡುವ ಅನುಭವ ಎಲ್ಲರಿಗಿದೆ. ಅವುಗಳ ಮೇಲೆ ನಮಗೆ ಯಾವ ನಿಯಂತ್ರಣವೂ ಇಲ್ಲ. ಅವು ತಮ್ಮಷ್ಟಕ್ಕೆ ತಾವೇ ಕಾಣಿಸಿಕೊಂಡು, ಸ್ವಲ್ಪ ಸಮಯದ ನಂತರ ಮರೆಯಾಗುತ್ತವೆ. ಎಲ್ಲ ಕನಸುಗಳೂ ನಮ್ಮ ನೆನಪಿನಲ್ಲಿರುವುದಿಲ್ಲ. ಅವುಗಳಲ್ಲಿ ಒಂದೆರಡು ಮಾತ್ರ ನೆನಪಿನಲ್ಲಿ ಉಳಿಯುತ್ತವೆ. ರಾತ್ರಿ ಮಾತ್ರ ಕನಸುಗಳನ್ನು ನೋಡಲು ಸಾಧ್ಯ, ಹಗಲಿನಲ್ಲಿ ಎಚ್ಚರದಿಂದಿರುವಾಗ, ವಿವಿಧ ಕೆಲಸಗಳಲ್ಲಿ ನಿರತರಾಗಿರುವಾಗ ಸ್ವಪ್ನ ನೋಡುವುದು ಅಸಾಧ್ಯವೆಂದು ನಮ್ಮ ಗ್ರಹಿಕೆ. ಈ ಗ್ರಹಿಕೆ ಸತ್ಯವೆ? ನಮ್ಮ ಪ್ರತಿದಿನದ ಜೀವನವನ್ನು ಸ್ವಲ್ಪ ಪರಿಶೀಲಿಸಿದರೆ ಇದು ಎಷ್ಟರಮಟ್ಟಿಗೆ ನಿಜವೆಂದು ಅರಿವಾಗುವುದು. ನಮ್ಮ ಮನಸ್ಸು ಹಗಲು ಹೊತ್ತಿನಲ್ಲಿಯೂ ಸುತ್ತಮುತ್ತಲಿನ ಪ್ರಪಂಚವನ್ನು, ಮಾಡುತ್ತಿರುವ ಕೆಲಸವನ್ನು ಮರೆತು ತನ್ನ ಕಲ್ಪನೆಗಳಲ್ಲಿ ಅಥವಾ ಹಿಂದಿನ ನೆನಪುಗಳಲ್ಲಿ ಮಗ್ನವಾಗಿರುವುದು. ರಾತ್ರಿ ನೋಡುವ ಕನಸುಗಳಿಗೂ, ದಿನದ ಹೊತ್ತಿನಲ್ಲಿ ನೋಡುವ ಕನಸುಗಳಿಗೂ ಹೆಸರಿನಲ್ಲಿ ಮಾತ್ರ ವ್ಯತ್ಯಾಸ. ಎಚ್ಚರದ ಅವಸ್ಥೆಯಲ್ಲಿ ನೋಡುವ ಸ್ವಪ್ನವನ್ನು ಸ್ವಪ್ನವೆಂದು ಕರೆಯದೆ, ಆಲೋಚಿಸುವುದು, ಚಿಂತನೆ ಮಾಡುವುದು ಅಥವಾ ಅನ್ಯಮನಸ್ಕನಾಗಿರುವುದು ಇತ್ಯಾದಿ ಬೇರೆ ಹೆಸರುಗಳಿಂದ ಕರೆಯುತ್ತೇವೆ. ಹೆಸರು ಬೇರೆಯಾದರೂ ವಿಷಯ, ವಸ್ತು ಒಂದೇ.

ಹಗಲಿನಲ್ಲಿಯೂ ನಾವು ಪೂರ್ಣ ಎಚ್ಚರದಿಂದ ಇರುವುದು ಕಡಿಮೆ. ಇದಕ್ಕೆ ನಮ್ಮ ಪ್ರತಿದಿನದ ವಿಸ್ಮರಣೆಯ ಘಟನೆಗಳೇ ಸಾಕ್ಷಿ. ಟ್ರೇನಿನಲ್ಲಿ, ಬಸ್ಸಿನಲ್ಲಿ ಅಥವಾ ಟ್ಯಾಕ್ಸಿಯಲ್ಲಿ ಸಾಮಾನುಗಳನ್ನು ಮರೆತು ಬಂದುಬಿಡುತ್ತೇವೆ. ಒಂದು ವಸ್ತುವನ್ನು ಉಪಯೋಗಿಸಿದ ಮೇಲೆ, ಉದಾಹರಣೆಗಾಗಿ ಸೂಜಿ, ಚೂರಿ, ಕತ್ತರಿ, ಪೆನ್ನು, ಸೆಲ್ ಫೋನ್, ಮಹತ್ವದ ಕಾಗದ ಪತ್ರ, ಕೀಲಿಕೈ ಅಥವಾ ಬೇರೆ ಯಾವುದೇ ವಸ್ತುವಾಗಲಿ ಅದನ್ನು ನಿರ್ಲಕ್ಷ್ಯದಿಂದ ಎಲ್ಲಿಯೋ ಎಸೆದುಬಿಡುತ್ತೇವೆ. ಅದು ಪುನಃ ಬೇಕಾದಾಗ ಅದನ್ನು ಹುಡುಕುವುದರಲ್ಲಿ ಸಾಕಷ್ಟು ಸಮಯ ವ್ಯರ್ಥಮಾಡುವುದಲ್ಲದೆ, ಅದು ಸಿಗದಿದ್ದರೆ ಸಿಟ್ಟು, ಅಸಮಾಧಾನಗಳಿಂದ ಸಿಡಿಮಿಡಿಗೊಳ್ಳುತ್ತೇವೆ. ಬೇರೆಯವರಿಂದ ಎರವಲು ತಂದ ವಸ್ತುವನ್ನು ಅವರಿಗೆ ಹಿಂದಿರುಗಿಸುವುದನ್ನು ಮರೆತುಬಿಡುತ್ತೇವೆ. ಬೇರೆಯವರಿಗೆ ಕೊಟ್ಟ ವಚನವನ್ನೂ ಪಾಲಿಸುವುದಿಲ್ಲ. ದೀಪ, ವಾತಾನುಕೂಲ, ಫ್ಯಾನುಗಳನ್ನು ಅಗತ್ಯವಿಲ್ಲದಾಗ ನಿಲ್ಲಿಸಬೇಕೆಂಬ ಅರಿವೇ ನಮಗಿರುವುದಿಲ್ಲ. ಪ್ರತಿದಿನದ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡದೆ ಅರ್ಧಮರ್ಧವಾಗಿ ಮಾಡುವುದೇ ಹೆಚ್ಚು. ಯಾವ ಕೆಲಸವನ್ನೂ ನಾವು ಮನಸ್ಸಿಟ್ಟು ಮಾಡಲಾರೆವು. ಯಾವುದನ್ನೂ ಲಕ್ಷ್ಯವಿಟ್ಟು ಕೇಳಲಾರೆವು, ಯಾವುದನ್ನೂ ಎಚ್ಚರದಿಂದ ನೋಡಲಾರೆವು. ಇದಕ್ಕೆ ಕಾರಣ, ವರ್ತಮಾನಕಾಲದಲ್ಲಿ ನಮ್ಮ ಮನಸ್ಸು ಇರುವುದೇ ಅಪರೂಪ. ಅದನ್ನು ಸ್ಥಿರವಾಗಿ ಹಿಡಿದು ನಿಲ್ಲಿಸುವುದೇ ನಮ್ಮೆದುರು ಇರುವ ದೊಡ್ಡ ಸಮಸ್ಯೆ. ಆದರೂ ನಾವು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ, 'ಹಗಲು ಹೊತ್ತಿನಲ್ಲಿ ನಾವು ಬಹಳ ಎಚ್ಚರದಿಂದಿರುತ್ತೇವೆ' ಎಂದು!

ನಾವು ಏಕೆ ಮೇಲಿಂದ ಮೇಲೆ ಮರೆಯುತ್ತೇವೆ, ಏಕೆ ಯಾವುದಾದರೂ ಕೆಲಸವನ್ನು ಪೂರ್ಣ ಮನಸ್ಸಿಟ್ಟು ಮಾಡಲು ಅಸಮರ್ಥರಾಗಿದ್ದೇವೆ, ಏಕೆ ಹೀಗೆ ಅರೆನಿದ್ರೆಯಲ್ಲಿರುವವರಂತೆ ವರ್ತಿಸುತ್ತೇವೆ? ಇದೆಲ್ಲ ನಮ್ಮ ಗ್ರಹ-ನಕ್ಷತ್ರ ದೋಷದಿಂದಲೇ ಅಥವಾ ಇದು ಆನುವಂಶಿಕ ನ್ಯೂನತೆಯೆ, ಅಥವಾ ಮೆದುಳಿನ ಅಸ್ವಸ್ಥತೆಯೆ? ನಮ್ಮ

ವಿಮನಸ್ಕತೆಗೆ ಹೊರಗಿನ ಯಾವ ಶಕ್ತಿಯೂ ಕಾರಣವಲ್ಲ, ಅದಕ್ಕೆ ಬೇರೆ ಯಾರೂ ಹೊಣೆಯಲ್ಲ. ನಾವೇ ಇದಕ್ಕೆ ಹೊಣೆಗಾರರು.

ಇದೆಲ್ಲ ಸಂಭವಿಸುತ್ತಿರುವುದು ನಮ್ಮಿಂದಲೇ. ನಾವು ಮನಸ್ಸು ಮಾಡಿದರೆ ಈ ಅರ್ಧ ಎಚ್ಚರ, ಅರ್ಧ ನಿದ್ರೆಯ ಸ್ಥಿತಿಯನ್ನು ನಿಲ್ಲಿಸ ಬಹುದು ಮತ್ತು ಪಶ್ಚಾತ್ತಾಪ, ವ್ಯಸನ, ಚಿಂತೆಗಳಿಂದ ಪಾರಾಗ ಬಹುದು. ಚಿಕ್ಕ ಅಥವಾ ದೊಡ್ಡ ಅಪಘಾತಗಳು ಸಂಭವಿಸಿದಾಗ ಅಥವಾ ತಪ್ಪುಗಳಾದಾಗ ನಮ್ಮನ್ನು ನಾವೇ ಬೈದುಕೊಂಡಿದ್ದೇವೆ, ''ಅಯ್ಯೋ, ಸ್ವಲ್ಪ ಎಚ್ಚರಿಕೆಯಿಂದಿದ್ದರೆ ಇದನ್ನು ತಪ್ಪಿಸಬಹುದಾ ಗಿತ್ತು. ಇದು ಆಗದ ಹಾಗೆ ನೋಡಿಕೊಳ್ಳಬಹುದಾಗಿತ್ತು'' ಎಂದು. ಇಂತಹ ಅನೇಕ ಪಶ್ಚಾತ್ತಾಪಗಳಿಂದ, ವ್ಯಥೆಗಳಿಂದ ನಾವು ಕಲಿತದ್ದು ಕಡಿಮೆ.

ಈ ಎಲ್ಲ ದುಗುಡ, ದುಃಖ, ಚಿಂತೆಗಳಿಗೆ ಕಾರಣ ನಮ್ಮ ಮನಸ್ಸಿನ ದುರ್ಬಲತೆ ಮತ್ತು ಚಂಚಲತೆ. ಯಾವುದೇ ಒಂದು ವಿಷಯದ ಮೇಲೆ ಸ್ವಲ್ಪ ಸಮಯದವರೆಗೆ ಮನಸ್ಸನ್ನು ಕೇಂದ್ರೀ ಕರಿಸುವುದು, ಹಿಡಿದು ನಿಲ್ಲಿಸುವುದು ಕಷ್ಟ. ಕೆಲವೇ ಕ್ಷಣಗಳಲ್ಲಿ ಅದು ಬೇರೆ ಬೇರೆ ವಿಷಯಗಳ ಹಿಂದೆ ಓಡುವುದು. ಒಂದಾದ ಮೇಲೆ ಒಂದು ಬರುವ ಯೋಚನೆಗಳ ಪ್ರವಾಹಕ್ಕೆ ಅಂತ್ಯವೇ ಇಲ್ಲ. ಈ ಪ್ರವಾಹದ ಸೆಳೆತ ಎಷ್ಟು ಶಕ್ತಿಶಾಲಿಯಾಗಿದೆಯೆಂದರೆ, ಅದು ಮನಸ್ಸನ್ನು ಯಾವ ಕೆಲಸದ ಮೇಲೂ ಏಕಾಗ್ರತೆಯಿಂದ ನಿಲ್ಲಲು ಬಿಡದೆ ಕೊಚ್ಚಿಕೊಂಡು ಹೋಗುತ್ತದೆ. ಯಾವ ಮನಸ್ಸು ಅಸ್ಥಿರವೋ, ದುರ್ಬಲವೋ, ಅದು ಈ ಜಗತ್ತಿನಲ್ಲಿ ಏನನ್ನೂ ಸಾಧಿಸಲಾರದು, ಶಾಂತಿಯನ್ನು ಕೊಡಲಾರದು. ನಮ್ಮ ಔದಾಸೀನ್ಯವೇ ಈ ಬಗೆಯ ಚಂಚಲತೆಗೆ ಕಾರಣ. ಮೊದಲನೆಯದಾಗಿ, ನಮ್ಮ ಮನಸ್ಸನ್ನು ನಾವೇ ತಿಳಿದುಕೊಳ್ಳಲು ಯಾವ ಆಸಕ್ತಿಯನ್ನೂ ನಾವು ತೋರ ದಿರುವುದು. ಎರಡನೆಯದಾಗಿ, ಏಕಾಗ್ರತೆಯ ವಿಷಯದಲ್ಲಿ ನಾವು ಸರಿಯಾದ ಶಿಕ್ಷಣವನ್ನು, ತರಬೇತನ್ನು ಪಡೆಯದೆ ಇರುವುದು.

ಇದರ ಪರಿಣಾಮ: ಮನಸ್ಸನ್ನು ಅಂಕೆಯಲ್ಲಿಟ್ಟುಕೊಳ್ಳಲು ಸಾಧ್ಯವಾಗದೆ ಇರುವುದು. ಹಿಡಿತಕ್ಕೆ ಸಿಗದ, ಲಂಗುಲಗಾಮಿಲ್ಲದ ಇಂಥ ಮನಸ್ಸು ಜೀವನದಲ್ಲಿ ಶಾಂತಿ, ಆನಂದಗಳನ್ನು ಹೇಗೆ ಕಂಡುಕೊಳ್ಳಲು ಸಾಧ್ಯ? ಬೇರೆ ಎಲ್ಲ ವಿಷಯಗಳಲ್ಲಿ, ನಮ್ಮ ವೇಷ ಭೂಷಣಗಳಲ್ಲಿ , ಶರೀರದ ಶೃಂಗಾರದಲ್ಲಿ, ಮನೆಯ ಅಲಂಕಾರ ದಲ್ಲಿ, ಬಾಹ್ಯ ನಡತೆಯಲ್ಲಿ ನಾವು ಸಾಕಷ್ಟು ಆಸ್ಥೆಯನ್ನು ವಹಿಸು ತ್ತೇವೆ. ಆದರೆ ಮನಸ್ಸಿನ ವಿಷಯದಲ್ಲಿ ಅಷ್ಟೇ ನಿರಾಸಕ್ತಿಯನ್ನು ವ್ಯಕ್ತಗೊಳಿಸುತ್ತೇವೆ. ಸ್ವಾಮಿ ವಿವೇಕಾನಂದರ ಶಬ್ದಗಳಲ್ಲಿ ಹೇಳುವು ದಾದರೆ: ''ನಾವು ಮುಕ್ತರೆಂದು ಹೆಮ್ಮೆಪಟ್ಟುಕೊಳ್ಳುತ್ತೇವೆ. ಮುಕ್ತರೆ! ನಮ್ಮ ಮನಸ್ಸನ್ನು ಕ್ಷಣಕಾಲ ನಿಗ್ರಹಿಸಲಾರೆವು, ಉಳಿದ ವಸ್ತುಗಳನ್ನು ತೊರೆದು ಒಂದು ವಿಷಯದ ಮೇಲೆ ನಮ್ಮನ್ನು ನಿಲ್ಲಿಸಲಾರೆವು! ಆದರೂ ಸ್ವತಂತ್ರರು ಎಂದು ಕರೆದುಕೊಳ್ಳುತ್ತೇವೆ. ಇದನ್ನು ಆಲೋ ಚಿಸಿ ನೋಡಿ! ಒಂದೇ ಒಂದು ಕ್ಷಣಕಾಲವೂ ನಾವು ಇಚ್ಛಿಸಿದಂತೆ ಮಾಡಲಾರೆವು.''

(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೬, ಪು. ೨೩೯)

ಮನಸ್ಸಿನ ತರಬೇತಿ ಅಷ್ಟು ಮಹತ್ವದ ವಿಷಯವೇ ಎಂಬ ಸಂದೇಹ ಬರಬಹುದು. ಅದರಿಂದ ಶಕ್ತಿ ಮತ್ತು ಕಾಲ ವ್ಯರ್ಥವಾಗುವು ದೆಂದು ತೋರಬಹುದು. ಆದರೆ ಒಂದು ಮಹತ್ವದ ಸಂಗತಿಯನ್ನು ಮರೆಯಬಾರದು: ಅದೇಂದರೆ, ನಮ್ಮ ಶಾಂತಿ, ಸುಖ, ಸಫಲತೆಗಳು ಅಂಕೆಯಲ್ಲಿರುವ ಮನಸ್ಸಿನಿಂದ ಮಾತ್ರ ಸಾಧ್ಯ. ಅಶಾಂತ, ನಿರಂಕುಶ ಮನಸ್ಸಿನಿಂದ ನಾವು ಏನನ್ನೂ ಸಾಧಿಸಲಾರೆವು. ದುಃಖ, ವ್ಯಸನ, ಅಪಘಾತಗಳು ನಿರಂಕುಶ ಮನಸ್ಸಿನ ಅನಿವಾರ್ಯ ಫಲಗಳು. ಇವು ಗಳನ್ನು ಜೀವನವಿಡೀ ಅನುಭವಿಸುವ ಇಚ್ಛೆ ಇದ್ದರೆ ನಾವು ಯಾವ ಸ್ಥಿತಿಯಲ್ಲಿರುವೆವೋ ಆ ಸ್ಥಿತಿಯಲ್ಲಿಯೇ ಇರಬಹುದು. ಅವು ಗಳಿಂದ ಮುಕ್ತರಾಗಬೇಕೆಂಬ ಬಯಕೆ ಇದ್ದರೆ, ಪರಿವರ್ತನೆಗಾಗಿ ಪ್ರಯತ್ನಿಸಬಹುದು.

ಮನಸ್ಸಿನ ನಿಯಂತ್ರಣ ಒಂದೇ ದಿನದಲ್ಲಿ , ಇಚ್ಛಿಸಿದ ಕೂಡಲೇ ಬರುವಂತಹುದಲ್ಲ. ಈ ಜಗತ್ತಿನಲ್ಲಿ ಏನನ್ನೂ ಮಾಡದೆ ಯಾವುದೂ ಸಿಗುವುದಿಲ್ಲ. ಅದಕ್ಕಾಗಿ ಸ್ವಲ್ಪ ಶ್ರಮ, ಪ್ರತಿದಿನದ ಅಭ್ಯಾಸದ ಅಗತ್ಯವಿದೆ. ಹಿಂದಿನ ಚಟುವಟಿಕೆಗಳನ್ನು ಹಾಗೂ ರೂಢಿಸಿಕೊಂಡಂತೆ ಯೋಚಿಸುವ ರೀತಿಯನ್ನು ತ್ಯಜಿಸಿ, ಹೊಸ ಅಭ್ಯಾಸಗಳನ್ನು ಕಲಿ ಯಲು ಸಮಯದ ಅಗತ್ಯವಿದೆ. ಹಳೆಯ ದಾರಿಯನ್ನು ಬಿಟ್ಟು ಹೊಸ ದಾರಿ ಯನ್ನು ತುಳಿಯಲು ಸಾಮಾನ್ಯವಾಗಿ ಎಲ್ಲರೂ ಹಿಂದೇಟು ಹಾಕುತ್ತಾರೆ. ಏಕೆಂದರೆ ಹಳೆಯ ದಾರಿಯಲ್ಲಿ ನಡೆಯಲು ಯಾವುದೇ ವಿಶೇಷ ಪ್ರಯತ್ನದ ಆವಶ್ಯಕತೆಯಿಲ್ಲ ಮತ್ತು ಹೆಚ್ಚು ಯೋಚಿಸಬೇಕಾಗಿಲ್ಲ. ಕಣ್ಣುಮುಚ್ಚಿ ಕೊಂಡು ಹೋಗಬಹುದು.



ಸಣ್ಣದಿರಲಿ ಅಥವಾ ದೊಡ್ಡ ದಿರಲಿ, ಯಾವುದೇ ಕೆಲಸವನ್ನು ಪೂರ್ಣ ಎಚ್ಚರದಿಂದ ಅಚ್ಚುಕಟ್ಟಾಗಿ ಮಾಡುವುದೇ ಭಗವಂತನ ಪೂಜೆ. ಗುಡಿ ಗಳಲ್ಲಿ ಮಾಡುವ ಪೂಜೆ ಯಾಂತ್ರಿಕ. ಅದರಲ್ಲಿ ಯಾವ ವಿಶೇಷತೆಯೂ ಇಲ್ಲ. ಭಗವಂತನ ನಿಜವಾದ ಆರಾಧನೆ ನಿತ್ಯಜೀವನದಲ್ಲಿ ವ್ಯಕ್ತವಾಗಬೇಕು; ನಮ್ಮ ನಡತೆಯಲ್ಲಿ, ಮಾತು ಗಳಲ್ಲಿ, ಯೋಚನೆಗಳಲ್ಲಿ ಮತ್ತು ನಾವು ಮಾಡುವ ಕೆಲಸಗಳ ಮೂಲಕ ಇದು ವ್ಯಕ್ತವಾಗಬೇಕು. ಕೆಲವು ಮಕ್ಕಳಲ್ಲಿ ವಿಶೇಷವಾಗಿ ಮಾನಸಿಕ ಚಂಚಲತೆಯನ್ನು ನೋಡಬಹುದು. ಇದೊಂದು ಮಾನ ಸಿಕ ರೋಗ. ಈ ವ್ಯಾಧಿಯಿಂದ ಆಕ್ರಾಂತರಾದ ಮಕ್ಕಳು ಒಂದು ವಿಷಯದ ಮೇಲೆ ಕೆಲವು ಸೆಕೆಂಡುಗಳವರೆಗೆ ತಮ್ಮ ಮನಸ್ಸನ್ನು ನಿಲ್ಲಿಸಲಾರರು. ಅವರ ಮನಸ್ಸು ಒಂದು ವಿಷಯದಿಂದ ಇನ್ನೊಂ ದಕ್ಕೆ, ಮತ್ತೊಂದಕ್ಕೆ ನಿರಂತರ ಚಲಿಸುತ್ತಾ ಇರುವುದು. ವಯಸ್ಸಾದ ಕೆಲವರು ಇಂಥ ಮಕ್ಕಳಿಗಿಂತ ಸ್ವಲ್ಪ ಉತ್ತಮ ಸ್ಥಿತಿಯಲ್ಲಿರಬಹುದಷ್ಟೆ!

ಅಸ್ಥಿರ ಮನಸ್ಸು ಹೆಚ್ಚು ಕಡಿಮೆ ಎಲ್ಲರಲ್ಲಿ ಕಾಣಿಸಿಕೊಳ್ಳುವ ರೋಗವೆಂದು ಹೇಳಬಹುದು.

ನಿತ್ಯದ ಸಾಧಾರಣ ಕೆಲಸವನ್ನು ಯಾವುದೇ ಆತುರವಿಲ್ಲದೆ ಗಮನವಿಟ್ಟು ಮಾಡಲು ಸಾಧ್ಯವೆ? ಇದು ಎಲ್ಲರಿಗೂ ಸಾಧ್ಯ. ಸ್ವಲ್ಪ ಸಹನೆ ಪರಿಶ್ರಮಗಳಿಂದ ಇದನ್ನು ಸಾಧಿಸಬಹುದು. ಇದರಿಂದ ಆಗುವ ಪ್ರಯೋಜನ: ನಾವು ಮಾಡುವ ಕಾರ್ಯ ತೃಪ್ತಿಯನ್ನು ತರುವುದು; ಅನವಶ್ಯಕವಾದ ದೋಷಗಳಿಂದ, ಪಶ್ಚಾತ್ತಾಪಗಳಿಂದ ಮುಕ್ತರಾಗಿ ನಿಶ್ಚಿಂತೆಯಿಂದಿರಬಹುದು; ನಿರರ್ಥಕವಾಗಿ ವ್ಯಯವಾಗುವ ಮಾನಸಿಕ ಶಕ್ತಿಯನ್ನು ನಿಲ್ಲಿಸಬಹುದು. ಕುಟುಂಬದಲ್ಲಿ ಒಬ್ಬ ವ್ಯಕ್ತಿ ಜಾಗರೂಕನಾಗಿದ್ದು, ಪ್ರತಿಯೊಂದನ್ನೂ ಲಕ್ಷ್ಯವಿಟ್ಟು ಮಾಡುತ್ತಿದ್ದರೆ ಆ ವ್ಯಕ್ತಿಯ ಉದಾಹರಣೆ ಬೇರೆ ಸದಸ್ಯರ ಮೇಲೆ ಒಳ್ಳೆಯ ಪರಿಣಾಮವನ್ನುಂಟುಮಾಡುವುದು. ಉಪದೇಶಕ್ಕಿಂತ ನಡತೆ ಹೆಚ್ಚು ಪ್ರಭಾವಶಾಲಿ. ಚೆದುರಿಹೋದ ಮನಸ್ಸನ್ನು ಕೇಂದ್ರೀಕರಿಸಿ, ಅದರ ಶಕ್ತಿಯನ್ನು ವ್ಯರ್ಥವಾಗಲು ಬಿಡದೆ, ಅದನ್ನು ಹೆಚ್ಚಿಸುವುದಕ್ಕೆ ಅಷ್ಟೇನೂ ಕಷ್ಟಕರವಲ್ಲದ ಸಾಧನೆಗಳಿವೆ. ಇವುಗಳನ್ನು ಅನುಷ್ಠಾನ ಮಾಡಲು ಯಾವುದೇ ಪೂರ್ವಸಿದ್ಧತೆಗಳ ಆವಶ್ಯಕತೆಯಿಲ್ಲ. ಅದನ್ನು ಮಾಡಲು ನಾವು ಶಕ್ತರೋ ಅಲ್ಲವೋ ಎಂದು ಶಂಕಿಸಬೇಕಾಗಿಲ್ಲ, ಏಕಾಂತ ಸ್ಥಳವನ್ನು ಅಥವಾ ಸೂಕ್ತ ಸಮಯವನ್ನು ಹುಡುಕಬೇಕಾಗಿಲ್ಲ.

೧. ಉಸಿರಾಟವನ್ನು ಗಮನಿಸುವುದು: ಶ್ವಾಸ-ಪ್ರಶ್ವಾಸ ಕ್ರಿಯೆ ನಮಗೆ ಅರಿವಿಲ್ಲದೆ, ತನ್ನಷ್ಟಕ್ಕೆ ತಾನೆ ೨೪ ಗಂಟೆಯೂ ನಡೆಯುತ್ತಿರುತ್ತದೆ. ಎಚ್ಚರದ ಸಮಯದಲ್ಲಾಗಲಿ, ನಿದ್ರೆಯಲ್ಲಾಗಲಿ ಅಥವಾ ಮೂರ್ಛೆಯ ಸ್ಥಿತಿಯಲ್ಲಾಗಲಿ ಉಸಿರಾಟದ ಅನೈಚ್ಛಿಕಕಾರ್ಯ ನಿಲ್ಲುವುದಿಲ್ಲ. ಅಸ್ತಮಾ, ನೆಗಡಿ, ಶ್ವಾಸನಾಳದ ಊತ ಇತ್ಯಾದಿಗಳಿಂದ ತೊಂದರೆಯಾದಾಗ ಮಾತ್ರ ಉಸಿರಾಟದ ಅಸ್ತಿತ್ವದ ಅರಿವು ನಮಗುಂಟಾಗುತ್ತದೆ. ಇಲ್ಲದಿದ್ದರೆ ಇಲ್ಲ. ಈ ಶ್ವಾಸ-ಪ್ರಶ್ವಾಸ ಕ್ರಿಯೆಯ ಮೇಲೆ ಮನಸ್ಸನ್ನು ಸ್ವಲ್ಪ ಸಮಯದವರೆಗೆ ಹಿಡಿದು ನಿಲ್ಲಿಸಬೇಕು. ಪ್ರಾಣಾಯಾಮದ ಆವಶ್ಯಕತೆಯಿಲ್ಲ. ಉಸಿರು ಬರುವುದು ಮತ್ತು ಹೊರ ಹೋಗುವುದನ್ನು ಅವಿಚಲಿತ ಚಿತ್ತದಿಂದ ನಿರೀಕ್ಷಿಸಬೇಕು. ಆ ಸಮಯದಲ್ಲಿ ಉಸಿರಾಟವನ್ನು ಗಮನಿಸುವುದನ್ನು ಬಿಟ್ಟು ಬೇರೆ ಯಾವ ಯೋಚನೆಗಳೂ ಮನಸ್ಸಿಗೆ ಬರಬಾರದು. ಮನಸ್ಸನ್ನು ನಿಗ್ರಹಿಸಲು ಉಸಿರಾಟದ ನಿರೀಕ್ಷಣೆ ಒಂದು ಸುಲಭವಾದ ಸಾಧನ. ಕೆಲವು ನಿಮಿಷ ಉಸಿರಾಟವನ್ನು ಗಮನಿಸುತ್ತಾ ಇದ್ದರೆ ಅನೇಕ ಚಿಂತೆಗಳಿಂದ ಪ್ರಕ್ಷುಬ್ಧವಾದ ಮನಸ್ಸು ಕ್ರಮೇಣ ಶಾಂತವಾಗುವುದು. ಚಂಚಲತೆಯಿಂದ, ಅಶಾಂತಿಯಿಂದ ತಳಮಳಿಸುತ್ತಿರುವ ಮನಸ್ಸನ್ನು ಹತೋಟಿಗೆ ತರಲು ಇದೊಂದು ಶಕ್ತಿಶಾಲಿಯಾದ ಅಸ್ತ್ರ. ಇದನ್ನು ಯಾವಾಗ ಬೇಕಾದರೂ ಉಪಯೋಗಿಸಬಹುದು. ಶ್ವಾಸ ಮತ್ತು ಪ್ರಶ್ವಾಸಗಳನ್ನು ಎಣಿಸುವುದು ಇನ್ನೂ ಸಹಾಯಕರ. ಉಸಿರನ್ನು ಎಳೆದು **ಒಂದು** ಎಂದು, ಉಸಿರನ್ನು ಬಿಟ್ಟು **ಎರಡು** ಎಂದು, ಹತ್ತರವರೆಗೆ ಎಣಿಸಿ ಮತ್ತೆ ಒಂದರಿಂದ ಪ್ರಾರಂಭಿಸಬೇಕು. ಪ್ರತಿದಿನ ೧೫-೨೦ ನಿಮಿಷಗಳ ಕಾಲ ಅಭ್ಯಾಸ ಮಾಡಬೇಕು. ಸಮಯ ದೊರೆತಾಗಲೆಲ್ಲ ಹೀಗೆ ಮಾಡಿದರೆ ಮಾನಸಿಕ ಏಕಾಗ್ರತೆ ವೃದ್ಧಿಯಾಗುತ್ತಾ ಬರುವುದು.

ಉಸಿರಾಟವನ್ನು ಗಮನಿಸುವುದರಿಂದ ಆಗುವ ಇನ್ನೊಂದು ಪ್ರಯೋಜನವೆಂದರೆ, ಅದು ನಮ್ಮ ಶರೀರ ಮತ್ತು ಮನಸ್ಸಿನ ಉದ್ವೇಗ, ಒತ್ತಡಗಳನ್ನು ಕಡಿಮೆ ಮಾಡುವುದು. ಅಲ್ಲದೆ, ಅವುಗಳಿಗೆ ಅವಶ್ಯವಿರುವ ವಿಶ್ರಾಂತಿಯನ್ನು ಸಹ ಕೊಡುವುದು. ಉಸಿರಾಟವನ್ನು ನಿಂತಾಗ, ಕುಳಿತಾಗ, ನಡೆಯುತ್ತಿರುವಾಗ ಗಮನಿಸಬಹುದು. ಪದ್ಮಾಸನದಲ್ಲಿ ಕುಳಿತೇ ಮಾಡಬೇಕೆಂಬ ನಿಯಮವಿಲ್ಲ. ಮನಸ್ಸು ಮತ್ತು ಉಸಿರಾಟಕ್ಕೆ ಪರಸ್ಪರ ಸಂಬಂಧವಿದೆ. ಒಂದು ಇನ್ನೊಂದನ್ನು ಪ್ರಭಾವಗೊಳಿಸುತ್ತದೆ. ಆದ್ದರಿಂದ ಒಂದನ್ನು ನಿಯಂತ್ರಣದಲ್ಲಿಟ್ಟುಕೊಂಡರೆ ಇನ್ನೊಂದನ್ನು ಸಹ ನಿಯಂತ್ರಿಸಬಹುದು. ಮನಸ್ಸಿನ ಬಂದು ಹೋಗುವ ಸಂವೇದನೆಗಳು: ಸಿಟ್ಟು , ಭಯ, ಆತಂಕ, ಸಂತೋಷ ಇತ್ಯಾದಿಗಳು ನಮ್ಮ ಉಸಿರಾಟದ ಗತಿಯನ್ನು ಬದಲಾಯಿಸುತ್ತವೆ. ಆದ್ದರಿಂದ ನಮ್ಮ ಶ್ವಾಸ-ಪ್ರಶ್ವಾಸಗಳನ್ನು ಹತೋಟಿಯಲ್ಲಿಟ್ಟುಕೊಂಡರೆ ಮನಸ್ಸನ್ನು ಸಹ ಅಧೀನದಲ್ಲಿಟ್ಟುಕೊಳ್ಳಬಹುದು. ಮನಸ್ಸನ್ನು ಹಿಡಿದು ಪಳಗಿಸುವುದಕ್ಕಿಂತ ನಮ್ಮ ಕಣ್ಣೆದುರಿಗಿರುವ ಉಸಿರಾಟವನ್ನು ಅಂಕೆಯಲ್ಲಿಟ್ಟುಕೊಳ್ಳುವುದು ಸುಲಭವಾದುದು.

೨. ಶರೀರವನ್ನು ಲಕ್ಷಿಸುವುದು: ಉಸಿರಾಟವು ಶರೀರದಲ್ಲಿ ನಡೆಯುತ್ತಿರುವ ಕ್ರಿಯೆಯಾದ್ದರಿಂದ, ಶರೀರದ ಚಟುವಟಿಕೆಗಳ ಮೇಲೆ ಗಮನವಿರಿಸಲು ಹೆಚ್ಚು ಶ್ರಮಪಡಬೇಕಾಗಿಲ್ಲ. ಉಸಿರನ್ನು ಎಳೆದುಕೊಂಡಾಗ ಹೊಟ್ಟೆ ಉಬ್ಬುವುದನ್ನು, ಉಸಿರು ಬಿಟ್ಟಾಗ ಹೊಟ್ಟೆ ಒಳಸೇರುವುದನ್ನು ಲಕ್ಷಿಸಬಹುದು. ಈ ಅರಿವನ್ನು ವಿಸ್ತೃತಗೊಳಿಸಿ ಶರೀರದ ಪ್ರತಿಯೊಂದು ಕ್ರಿಯೆಯನ್ನೂ ಎಚ್ಚರಿಕೆಯಿಂದ ನೋಡುತ್ತಿರಲು ಸಾಧ್ಯ. ನಡೆಯುತ್ತಿರುವಾಗ ನಡೆಯುವುದರ ಮೇಲೆ, ಕುಳಿತಿರುವಾಗ ಕುಳಿತಿರುವುದರ ಮೇಲೆ, ಮಲಗಿರುವಾಗ ಮಲಗಿರುವುದರ ಮೇಲೆ, ಹೀಗೆ ದೇಹದ ಪ್ರತಿಯೊಂದೂ ಕ್ರಿಯೆಯ ಮೇಲೆ ಮನಸ್ಸಿಡಬೇಕು. ಅದು ಮಾಡುವ ಪ್ರತಿಯೊಂದು ಕೆಲಸವೂ ಪ್ರಜ್ಞೆಯ ಬೆಳಕಿಗೆ ಬರಬೇಕು. ಶರೀರದ ಅಸ್ತಿತ್ವವನ್ನು ನಾವು ಹೆಚ್ಚಾಗಿ ಗಮನಿಸುವುದೇ ಇಲ್ಲ; ಲಕ್ಷಿಸಿದರೂ ವಿರಳವಾಗಿ ಲಕ್ಷಿಸುತ್ತೇವೆ.

ಶರೀರವನ್ನು ಗಮನಿಸುವುದರಿಂದ ಹಲವು ಪ್ರಯೋಜನಗಳಿವೆ:

ಅ) ನಾವು ಅರಿವಿಲ್ಲದೆ ಯಾಂತ್ರಿಕವಾಗಿ ರೂಢಿಸಿಕೊಂಡ ಅನೇಕ ಅನಾರೋಗ್ಯಕರವಾದ ಮತ್ತು ಅನುಚಿತವಾದ ಚಟಗಳನ್ನು ಗುರುತಿಸಿ, ಅವುಗಳನ್ನು ತೊಡೆದುಹಾಕಬಹುದು. ಉದಾಹರಣೆಗೆ, ಎಲ್ಲಿ ಬೇಕಾದರೂ ಉಗಿಯುವುದು, ಉಗುರು ಕಡಿಯುವುದು, ಮೂಗಿ

ನಲ್ಲಿ ಅಥವಾ ಬಾಯಿಯಲ್ಲಿ ಬೆರಳು ಹಾಕುವುದು, ಅನಾವಶ್ಯಕವಾಗಿ ಕೈಕಾಲುಗಳನ್ನು ಆಡಿಸುವುದು ಇತ್ಯಾದಿ. ನಮಗೆ ಅರಿವಿಲ್ಲದೆ ಮಾಡುತ್ತಿರುವ ಇಂತಹ ಎಷ್ಟೋ ಕ್ರಿಯೆಗಳು ಬೇರೆಯವರ ತಿರಸ್ಕಾರಕ್ಕೆ ಕಾರಣವಾಗುತ್ತವೆ. ಅವನ್ನು ತಿದ್ದಿಕೊಳ್ಳದಿದ್ದರೆ ನಮ್ಮ ಗೌರವವನ್ನು ನಾವು ಕಳೆದುಕೊಳ್ಳುತ್ತೇವೆ.

ಆ) ಎರಡನೆಯ ಮಹತ್ವಪೂರ್ಣ ಪ್ರಯೋಜನವೆಂದರೆ, ಅಜಾಗರೂಕತೆಯಿಂದ ಸಂಭವಿಸುವ ಅನೇಕ ದುರ್ಘಟನೆಗಳನ್ನೂ ಪ್ರಮಾದಗಳನ್ನೂ ಇದರಿಂದ ತಪ್ಪಿಸಬಹುದು. ದುರ್ಘಟನೆಗಳು ಸಂಭವಿಸುವುದು ವ್ಯಕ್ತಿಯ ನಿರ್ಲಕ್ಷ್ಯದಿಂದಲೇ ಆಗಿದೆ. ಪ್ರಮಾದ ಸಂಭವಿಸಿದ ಮೇಲೆ, 'ಸ್ವಲ್ಪ ಎಚ್ಚರದಿಂದಿದ್ದರೆ ಈ ಅನಾಹುತವನ್ನು ತಪ್ಪಿಸಬಹುದಾಗಿತ್ತು' ಎಂದು ಪಶ್ಚಾತ್ತಾಪಪಡುತ್ತೇವೆ. ಇಂಥ ಅನುತಾಪಗಳು ಬರದಂತೆ ನೋಡಿಕೊಳ್ಳುವುದು ನಿಜವಾದ ಬುದ್ಧಿವಂತಿಕೆ.

ಇ) ಮೂರನೆಯದಾಗಿ, ಶರೀರದ ಅವಲೋಕನದಿಂದ ಅದರ ಇತಿಮಿತಿಗಳನ್ನು ಸರಿಯಾಗಿ ಗುರುತಿಸಬಹುದು ಮತ್ತು ಆರೋಗ್ಯದಿಂದಿದ್ದುಕೊಂಡು ಶರೀರವನ್ನು ರೋಗಗಳಿಂದ ರಕ್ಷಿಸಬಹುದು.

ಈ) ಇನ್ನೊಂದು ಲಾಭವೆಂದರೆ, ಶರೀರದಲ್ಲಿ ಕೇಂದ್ರೀಕೃತವಾದ ಮನಸ್ಸು ಅನವಶ್ಯಕವಾದ ಯೋಚನೆಗಳಲ್ಲಿ ಮಗ್ನವಾಗಿರುವುದಿಲ್ಲ.

೩. ವರ್ತಮಾನಕಾಲದಲ್ಲಿ ಉಪಸ್ಥಿತಿ: ನಾವು ವರ್ತಮಾನ ಕಾಲದಲ್ಲಿ ಅಥವಾ ಸದ್ಯದ ಕ್ಷಣದಲ್ಲಿರುವುದು ಕಡಿಮೆ. ನಮ್ಮ ಶರೀರ ಉಪಸ್ಥಿತವಿದ್ದರೂ ನಮ್ಮ ಮನಸ್ಸು ಆ ಸ್ಥಳದಲ್ಲಿ ಮತ್ತು ಆ ಸಮಯದಲ್ಲಿರದೆ, ಬೇರೆಲ್ಲಿಯೋ ಇರುವುದು. ಆದ್ದರಿಂದ ಏನಾದರೂ ಕೇಳುತ್ತಿರುವಾಗ, ನೋಡುತ್ತಿರುವಾಗ, ಮಾಡುತ್ತಿರುವಾಗ ಅಥವಾ ಓದುತ್ತಿರುವಾಗ ಮನಸ್ಸು ಅಲ್ಲಿ ಇರುವುದಿಲ್ಲ. ಇದರಿಂದ ಯಾವುದೂ ಸರಿಯಾಗಿ ನಮ್ಮ ಅರಿವಿಗೆ ಬರುವುದಿಲ್ಲ. ಈ ಕಾರಣದಿಂದಾಗಿ ಯಾವುದೂ ನಮಗೆ ಸರಿಯಾಗಿ ಅರ್ಥವಾಗುವುದಿಲ್ಲ; ಯಾವುದನ್ನೂ ಸರಿಯಾಗಿ ಮಾಡಲು ಸಾಧ್ಯವಾಗುವುದಿಲ್ಲ. ವರ್ತಮಾನ ಕಾಲದಲ್ಲಿ ಅನೇಕ ಯೋಚನೆಗಳಲ್ಲಿ ಮಗ್ನವಾದ ಮನಸ್ಸು ವಾಸ್ತವತೆಯಿಂದ ದೂರವಾಗುತ್ತದೆ. ಆದ್ದರಿಂದ ಎಲ್ಲಿಯವರೆಗೆ ಅದು ತನ್ನ ಕನಸುಗಳಲ್ಲಿ , ಕಲ್ಪನೆಗಳಲ್ಲಿ ತಲ್ಲೀನವಾಗಿರುತ್ತದೋ ಅಲ್ಲಿಯವರೆಗೆ ಸುತ್ತಮುತ್ತಲಿನ ಜಗತ್ತಿನ ಪ್ರಜ್ಞೆಯೇ ಅದಕ್ಕಿರುವುದಿಲ್ಲ. ಸದ್ಯದ ಕ್ಷಣದಲ್ಲಿ ಅಥವಾ ವರ್ತಮಾನ ಕಾಲದಲ್ಲಿ ಸಂಭವಿಸುವುದನ್ನು ಮನಸ್ಸಿಟ್ಟು ಗಮನಿಸಬೇಕಾದರೆ, ಮನಸ್ಸು ತನ್ನ ಯೋಚನೆಗಳ ಬಲೆಯಿಂದ ಹೊರಬರಬೇಕು ಮತ್ತು ನಿರಂತರವಾಗಿ ತನ್ನಲ್ಲಿಯೇ ತಾನು ಮಾತನಾಡುವುದನ್ನು ನಿಲ್ಲಿಸಬೇಕು. ಅಂತಹ ನಿಶ್ಶಬ್ದವಾದ ಮನಸ್ಸೇ ಪೂರ್ಣ ಜಾಗೃತ ಅವಸ್ಥೆಯಲ್ಲಿರುವುದು. ಸತತವಾಗಿ ಅಪ್ರಯೋಜಕ ಚಿಂತನೆಯಲ್ಲಿರುವ ಮನಸ್ಸು ವ್ಯಥಾ ಶಕ್ತಿಯನ್ನು ಕಳೆದುಕೊಂಡು ಖಿನ್ನತೆ ಮತ್ತು ಆಯಾಸದಿಂದ, ಯಾವುದೇ ಲವಲವಿಕೆಯಿಲ್ಲದೆ ಬಳಲುತ್ತದೆ. ಇಂತಹ ಮನಸುಳ್ಳ ವ್ಯಕ್ತಿಗೆ ಜೀವನ ಅತ್ಯಂತ ನೀರಸ ಮತ್ತು ಯಾಂತ್ರಿಕವೆನಿಸುವುದು. ಅದರಲ್ಲಿ ಹೊಸತೇನನ್ನೂ ಅವನು ಕಾಣುವುದಿಲ್ಲ. ಬುದ್ಧ ತನ್ನ ***ಆನಾಪಾನ ಸತಿ ಸುತ್ತ*** ದಲ್ಲಿ ಈ ಸಾಧನೆಗಳನ್ನು ಕುರಿತು ವಿಶದವಾಗಿ ಹೇಳಿದ್ದಾನೆ.

ಶ್ರೀರಾಮಕೃಷ್ಣರು ಮೇಲಿಂದ ಮೇಲೆ ಸಮಾಧಿಸ್ಥರಾಗಿ ತಮ್ಮ ಶರೀರವನ್ನು ಮತ್ತು ಬಾಹ್ಯ ಜಗತ್ತನ್ನು ಮರೆಯುತ್ತಿದ್ದರು. ಆದರೆ ಬಾಹ್ಯಪ್ರಜ್ಞೆ ಬಂದ ಮೇಲೆ ಅವರು ಸಂಪೂರ್ಣ ಜಾಗೃದವಸ್ಥೆಯಲ್ಲಿದ್ದು ತಮ್ಮೆದರು ನಡೆಯುತ್ತಿದ್ದ ಪ್ರತಿಯೊಂದನ್ನೂ ಏಕಾಗ್ರಚಿತ್ತದಿಂದ ಗಮನಿಸುತ್ತಿದ್ದರು. ನಿತ್ಯಜೀವನದಲ್ಲಿ ಪ್ರತಿ ಕೆಲಸವನ್ನು– ಚಿಕ್ಕದಾಗಲಿ ಅಥವಾ ದೊಡ್ಡದಾಗಲಿ, ಅಸಾಧಾರಣ ಅನನ್ಯ ಮನಸ್ಸಿನಿಂದ ಮಾಡುತ್ತಿದ್ದರು. ಒಂದು ಸಲ ಕೇಳಿದ್ದನ್ನು ಮತ್ತು ನೋಡಿದ್ದನ್ನು ಮರೆಯುತ್ತಿರಲಿಲ್ಲ. ಬೇರೆಯವರ ಔದಾಸೀನ್ಯವನ್ನೂ, ವಿಮನಸ್ಕತೆಯನ್ನು ನೋಡಿ ಅವರು ಸಿಡಿಮಿಡಿಗೊಳ್ಳುತ್ತಿದ್ದರು. ಪ್ರತಿ ವಸ್ತುವನ್ನೂ ಅಚ್ಚುಕಟ್ಟಾಗಿ ಆಯಾ ಸ್ಥಳದಲ್ಲಿಯೇ ಇಡುತ್ತಿದ್ದರು. ರಾತ್ರಿ ಕತ್ತಲೆಯಲ್ಲೂ ಅದು ಸುಲಭವಾಗಿ ಕೈಗೆ ಸಿಗುವಂತಿರಬೇಕು. ತಮ್ಮ ಕೊಡೆಯನ್ನಾಗಲಿ, ಪಾದರಕ್ಷೆಯನ್ನಾಗಲಿ ಅಥವಾ ಮಸಾಲೆಯ ಸಂಚಿಯನ್ನಾಗಲಿ ಭಕ್ತರ ಮನೆಯಲ್ಲಿ ಒಂದು ಸಲವಾದರೂ ಮರೆತು ಬರುತ್ತಿರಲಿಲ್ಲ. ಅವರಂತೆಯೇ ಸ್ವಾಮಿ ವಿವೇಕಾನಂದರ ಅನ್ಯಾದೃಶ ಸ್ಮರಣಶಕ್ತಿ ಮತ್ತು ಏಕಾಗ್ರತೆ ಸಾಧಾರಣ ಮನುಷ್ಯರಿಗೆ ಸಾಧ್ಯವೇ ಎಂಬ ಸಂದೇಹ ಬರುವುದು ಸಹಜ.

ಆಧ್ಯಾತ್ಮಿಕ ಜೀವನದ ಅಸ್ತಿಭಾರವೆ ಪೂರ್ಣ ಅರಿವು. ಅದು ಅರೆಪ್ರಜ್ಞೆ ಅರೆ ಸ್ವಪ್ನದ ಸ್ಥಿತಿಯಲ್ಲ. ಜಾಗೃತ ಅವಸ್ಥೆಯ ಧ್ಯಾನ. ಧ್ಯಾನವೇ ಪೂರ್ಣ ಎಚ್ಚರದ ಸ್ಥಿತಿ. ಜಪ, ಧ್ಯಾನಗಳ ಉದ್ದೇಶ ವಿಕ್ಷಿಪ್ತ ಮನಸ್ಸಿನಲ್ಲಿ ನಿರಂತರವಾಗಿ ನಡೆಯುತ್ತಿರುವ ಅಪ್ರಯೋಜಕ ಆಲೋಚನೆಯ ಕ್ರಿಯೆಯನ್ನು ತಡೆದು, ಮನಸ್ಸಿನ ಶಕ್ತಿಯನ್ನು ಕೇಂದ್ರೀಕರಿಸುವುದು. ಇಂಥ ಏಕಾಗ್ರವಾದ ಮನಸ್ಸೇ ಸತ್ಯಾನ್ವೇಷಣೆಯನ್ನು ಮಾಡಬಲ್ಲದು. ಶ್ರೀರಾಮಕೃಷ್ಣರ ಶಿಷ್ಯರಾದ ಸ್ವಾಮಿ ಬ್ರಹ್ಮಾನಂದರು ಆಶ್ರಮದ ಬ್ರಹ್ಮಚಾರಿಗಳು ಉದಾಸೀನತೆಯಿಂದ, ಅಲಕ್ಷ್ಯದಿಂದ ಮಾಡಿದ ಕೆಲಸವನ್ನು ನೋಡಿ, ''ನೀನು ಸರಿಯಾಗಿ ಧ್ಯಾನ ಮಾಡಲಿಲ್ಲವೆಂದು ತೋರುತ್ತದೆ. ಮನಸ್ಸಿಟ್ಟು ಧ್ಯಾನ ಮಾಡಿದರೆ, ಮಾಡುವ ಪ್ರತಿಯೊಂದು ಕೆಲಸವೂ ಅಚ್ಚುಕಟ್ಟಾಗಿರುತ್ತದೆ'' ಎಂದು ಹೇಳುತ್ತಿದ್ದರು. ಅವರು ಬ್ರಹ್ಮಚಾರಿ, ಸಂನ್ಯಾಸಿಗಳ ಜಪ, ಧ್ಯಾನಗಳ ಪರಿಣತಿಯನ್ನು ಪರೀಕ್ಷಿಸುವ ವಿಧಾನ ಅಪೂರ್ವವಾಗಿತ್ತು. ಪ್ರತಿಯೊಬ್ಬರಿಗೂ ಆಲೂಗಡ್ಡೆಯ ಸಿಪ್ಪೆಯನ್ನು ಸುಲಿದು, ಅದನ್ನು ತಂದು ತಮಗೆ ತೋರಿಸಲು ಹೇಳುತ್ತಿದ್ದರು. ಯಾರು ಗಮನವಿಟ್ಟು ಸುಲಿದಿದ್ದಾನೋ ಅವನಿಗೆ, ''ನಿನ್ನ ಧ್ಯಾನ ಸರಿಯಾಗಿ ನಡೆದಿದೆ. ಇನ್ನೂ ಪ್ರಯತ್ನಮಾಡು'' ಎನ್ನುತ್ತಿದ್ದರು. ಯಾರು ಅಜಾಗರೂಕತೆಯಿಂದ ಸುಲಿದಿದ್ದಾನೋ ಅವನಿಗೆ, ''ನಿನ್ನ ಜಪ, ಧ್ಯಾನ, ಸರಿಯಾಗಿಲ್ಲ. ನೀನು ಹೆಚ್ಚು ಪರಿಶ್ರಮ ಪಡಬೇಕು'' ಎಂದು ಹೇಳುತ್ತಿದ್ದರು.

ಮನಸ್ಸಿನ ಏಕಾಗ್ರತೆಯ ಅಳತೆ ನಾವು ಪ್ರತಿದಿನ ಮಾಡುವ ಕೆಲಸವನ್ನು ಅವಲಂಬಿಸಿದೆ. ಆಧ್ಯಾತ್ಮಿಕ ಮಾರ್ಗದಲ್ಲಿ ಒಬ್ಬ ವ್ಯಕ್ತಿ ಎಷ್ಟು ಮುಂದುವರೆದಿದ್ದಾನೆ ಎಂದು ಅವನು ಅಥವಾ ಅವಳು ಮಾಡುವ ಕೆಲಸಗಳನ್ನು ನೋಡಿ ಹೇಳಬಹುದು. ಹೆಚ್ಚು ಮರೆವಿರುವ ವ್ಯಕ್ತಿಯ ಮನಸ್ಸು ಅತ್ಯಂತ ವಿಕ್ಷಿಪ್ತವಾದದ್ದು.



ಬದುಕಿ ಬಾಳಬೇಕಾಗಿದೆ ನಾವು – ನೀವು

ಜಿ.ಎಸ್. ಜಯದೇವ

> ನಮ್ಮ ದೇಶದ ಹಾಗೂ ಇಡೀ ವಿಶ್ವದ ಜೀವನಶೈಲಿ ಕ್ಷಿಪ್ರಗತಿಯಿಂದ ಬದಲಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಈ ಆಧುನಿಕ ಚಲನೆಯ ಭರದಲ್ಲಿ ನಾವು ಉಳಿಸಿಕೊಳ್ಳಬೇಕಾದ ಹಾಗೂ ಕಂಡುಕೊಳ್ಳಬೇಕಾದ ಮೌಲ್ಯಗಳು ಯಾವುವು ಎಂಬುದನ್ನು ಚರ್ಚಿಸುವ ಲೇಖಕರು ಉತ್ತಮ ಚಿಂತಕರೂ, ವಾಗ್ಮಿಗಳೂ, ನುರಿತ ಬರಹಗಾರರೂ ಆಗಿದ್ದಾರೆ. ಚಾಮರಾಜನಗರದಲ್ಲಿ 'ದೀನಬಂಧು ಟ್ರಸ್ಟ್' ಎಂಬ ಅನಾಥಾಲಯವೊಂದನ್ನು ಕಟ್ಟಿ ಬೆಳೆಸುವ ಮೂಲಕ ಅವರು ಸಮಾಜಸೇವೆಯಲ್ಲೇ ತಮ್ಮನ್ನು ತಾವು ಪೂರ್ಣಾವಧಿ ತೊಡಗಿಸಿಕೊಂಡಿದ್ದಾರೆ.

ಹೆಚ್ಚುತ್ತಿರುವ ಪ್ರಕೃತಿ ವಿಕೋಪಗಳು, ಮಿತಿಮೀರಿ ಬೆಳೆಯುತ್ತಿರುವ ಜನಸಂಖ್ಯೆ, ಹಳಸುತ್ತಿರುವ ಅಂತಾರಾಷ್ಟ್ರೀಯ ಸಂಬಂಧಗಳು – ಇಂತಹ ಅನೇಕ ಅವಘಡಗಳನ್ನೇ ಬಂಡವಾಳ ಮಾಡಿಕೊಂಡು ಬೆಳೆಯುತ್ತಿರುವ ಮಾರುಕಟ್ಟೆಗಳು ಇಂದು ಮನುಕುಲವನ್ನು ವಿನಾಶದ ಅಂಚಿಗೆ ಕೊಂಡೊಯ್ದಿದೆ. ಮೇಲ್ನೋಟಕ್ಕೆ ಇವು ಸರಿಪಡಿಸಲಾರದಷ್ಟು ಕೈಮೀರಿ ಹೋಗಿರುವಂತೆ ಕಂಡುಬರುತ್ತಿವೆ. ಮನುಷ್ಯನ ಸ್ವಾರ್ಥ ದುರಾಸೆಗಳಿಂದಾಗಿ ಮುಂದೊಂದು ದಿನ ಆಗಬಹುದಾದ ಜಾಗತಿಕ ಯುದ್ಧ ಇಡೀ ಭೂಮಿಯನ್ನೇ ಸರ್ವನಾಶ ಮಾಡಬಹುದು. ಪರಿಸ್ಥಿತಿ ಇಷ್ಟೊಂದು ದುರಂತಮಯವಾಗಿದ್ದರೂ ನಮ್ಮ ಯುವ ಜನತೆ ಏಕೆ ಎಚ್ಚೆತ್ತುಕೊಂಡಿಲ್ಲ? ತಮ್ಮ ಮೊಬೈಲ್ – ಲ್ಯಾಪ್‌ಟಾಪ್‌ಗಳಲ್ಲಿ, ಮನೋರಂಜನೆಗಳಲ್ಲಿ ಮುಳುಗಿ ಹೋಗಿದ್ದಾರಲ್ಲ!

ಯುವಕರಷ್ಟೇ ಏಕೆ, ನಮ್ಮ ಸಮಾಜದ ಶೇಕಡ ೯೦ ರಷ್ಟು ಜನ ತಮ್ಮ ಸುತ್ತಮುತ್ತ ಆಗುತ್ತಿರುವ ಪಲ್ಲಟಗಳಿಗೂ ತಮಗೂ ಏನೇನೂ ಸಂಬಂಧವಿಲ್ಲವೇನೋ ಎಂಬಂತೆ ನಡೆದುಕೊಳ್ಳುತ್ತಿದ್ದಾರೆ. ಹೆಚ್ಚೆಂದರೆ ತಮ್ಮ ಮತ್ತು ತಮ್ಮ ಕುಟುಂಬದ ಕ್ಷೇಮಕ್ಕಾಗಿ ಮಾತ್ರ ಹೆಣಗಾಡುತ್ತಾರೆ. ಮನುಷ್ಯಕುಲ ಎದುರಿಸುತ್ತಿರುವ ಈ ಜಾಗತಿಕ ಸಮಸ್ಯೆಗಳಿಗೂ ನಮ್ಮ ವೈಯುಕ್ತಿಕ ಜೀವನಕ್ಕೂ ಸಂಬಂಧವೇ ಇಲ್ಲವೇನು?

ಇದೊಂದು ಗಂಭೀರವಾದ ಪ್ರಶ್ನೆ. ನೀವು ಸಂದರ್ಶನ ನಡೆಸಿದರೆ ಶೇಕಡ ೯೯ ಭಾಗ ಜನ ಇದಾವುದಕ್ಕೂ ತಾವು ಕಾರಣರಲ್ಲ ಎಂದು ಕೈ ತೊಳೆದುಕೊಂಡು ಬಿಡುತ್ತಾರೆ. ಅವರು ತಿರುಗಿ ಕೇಳಬಹುದಾದ ಪ್ರಶ್ನೆ ಎಂದರೆ – ದೊಡ್ಡ ದೊಡ್ಡ ಕಾರ್ಖಾನೆಗಳು ಸಮುದ್ರದ ನೀರನ್ನು ಕಲುಷಿತಗೊಳಿಸಿದರೆ ಅದಕ್ಕೆ ನಾನು ಹೇಗೆ ಹೊಣೆ? ಕಾಡುಗಳು ನಾಶವಾಗುತ್ತಿವೆ ನಿಜ, ಆದರೆ ನಾನು ಕಾರಣನಲ್ಲ. ಅಹಿಂಸೆಯ ಮಹತ್ವವನ್ನು ಜಗತ್ತಿಗೇ ಮನವರಿಕೆ ಮಾಡಿಕೊಟ್ಟ ಗಾಂಧೀ ಮಹಾತ್ಮನ ಈ ನಾಡಿನಲ್ಲಿ ನಾವು ಅನೇಕಾನೇಕ ಅಣುಬಾಂಬುಗಳನ್ನು ಸಿದ್ಧಪಡಿಸಿ ಇಟ್ಟುಕೊಂಡಿದ್ದೇವೆ ನಿಜ. ಆದರೆ ನಮ್ಮ ದೇಶವನ್ನು ರಕ್ಷಿಸಲು ಇವೆಲ್ಲಾ ಬೇಕಾಗುತ್ತದಲ್ಲವೆ? ಭಾರತ – ಪಾಕಿಸ್ತಾನಕ್ಕೆ ಯುದ್ಧವಾದರೆ ಆಗಲಿ ಬಿಡಿ; ಹೇಗೂ ನಮ್ಮ ಶಸ್ತ್ರಪಡೆ ದೊಡ್ಡದಾಗಿದೆ! ಯುದ್ಧಕ್ಕಿಂತ ಸ್ನೇಹ ಮುಖ್ಯ ಎಂದು ಯಾರಿಗೂ ಅನ್ನಿಸುವುದಿಲ್ಲ. ತಮ್ಮ ಸುತ್ತಮುತ್ತ ಸಂಭವಿಸುತ್ತಿರುವ ಇಂತಹ ಅನೇಕ ದುರಂತಮಯ ಬೆಳವಣಿಗೆಗಳ ಪರಿಣಾಮಗಳನ್ನು ಸ್ವಲ್ಪವೂ ಗಣನೆಗೆ ತೆಗೆದುಕೊಳ್ಳದೆ, ತಮಗೂ ಇದಕ್ಕೂ ಏನೇನು ಸಂಬಂಧವಿಲ್ಲವೆಂಬಂತೆ ವಾದ ಮಂಡಿಸುತ್ತಾರೆ.

ಆಳವಾಗಿ ವಿಚಾರ ಮಾಡಿದರೆ ನಮ್ಮ ವೈಯಕ್ತಿಕ ಜೀವನ ಶೈಲಿಗೂ, ಪರಿಸರಕ್ಕೂ ಇರುವ ಸಂಬಂಧಗಳ ಸರಪಣಿ ನಮಗೂ ಮುಂದೊಂದು ದಿನ ಜರುಗಬಹುದಾದ ಜಾಗತಿಕ ಯುದ್ಧ ವಿನಾಶಗಳಿಗೂ ನೇರವಾದ ಸಂಬಂಧವನ್ನು ಕಲ್ಪಿಸುತ್ತದೆ. ಒಬ್ಬ ವ್ಯಕ್ತಿ ಅಥವಾ ಬೆರಳೆಣಿಕೆಯ ವ್ಯಕ್ತಿಗಳು ಸೇರಿಕೊಂಡು ಇಂತಹ ಒಂದು ಬೃಹತ್ ಸಮಸ್ಯೆಯನ್ನು ಸೃಷ್ಟಿಸಲಾರರು. ಬೃಹದಾಕಾರವಾಗಿ ಬೆಳೆಯುತ್ತಿರುವ ಈ ಸಮಸ್ಯೆಗೆ ನಮ್ಮೆಲ್ಲರ ಸ್ವಾರ್ಥ ಬದುಕಿನ ಕೊಡುಗೆ ಇದೆ ಎಂಬುದನ್ನು ಮೊದಲು ನಾವು ಗುರುತಿಸಬೇಕು. ಮಠ, ಮಸೀದಿ, ಚರ್ಚುಗಳ ವಕ್ತಾರರು, ರಾಜಕೀಯ ಧುರೀಣರು, ಮಾರುಕಟ್ಟೆಯ ನಿರ್ಮಾತೃಗಳು, ಬೃಹತ್ ಉತ್ಪಾದಕರು, ಎಲ್ಲಕ್ಕಿಂತ ಮಿಗಿಲಾಗಿ ಇವರೆಲ್ಲರಿಗೂ ಒತ್ತಾಸೆಯಾಗಿ ನಿಂತಿರುವ ಶ್ರೀಸಾಮಾನ್ಯನ ಕೊಳ್ಳುಬಾಕತನ ಮತ್ತು ಸ್ವಾರ್ಥದ ಪರಿಣಾಮವಾಗಿ ಇಂದು ಜಗತ್ತು ದುರಂತದ ಅಂಚಿಗೆ ಬಂದು ನಿಂತಿದೆ. ಈ ಸಂದರ್ಭದಲ್ಲಿ ನಾವೆಲ್ಲರೂ ನಮ್ಮ ಜೀವನಶೈಲಿಯ ಕಡೆ ನೋಡಬೇಕು; ನಮ್ಮ ಐಷಾರಾಮಿ ಕನಸುಗಳ ಪರಿಣಾಮವನ್ನು ಅರಿಯಬೇಕು. ನಾವು ಯುವಕರಿಗೆ ಕಟ್ಟಿಕೊಡುತ್ತಿರುವ ವೈಭವೋಪೇತ ಕನಸಿನ ಜೀವನದ ಪರಿಣಾಮ

ಗಳನ್ನು ಗುರುತಿಸಬೇಕು. ಅದ್ದೂರಿ ಕಾರ್ಯಕ್ರಮಗಳ ನಡುವೆ ನಾವು ಪೋಲು ಮಾಡುತ್ತಿರುವ ಸಂಪನ್ಮೂಲಗಳು, ವಾಹನಗಳ ಅತಿಬಳಕೆ, ಅನಗತ್ಯ ವಸ್ತುಗಳ ಬೃಹತ್ ಉತ್ಪಾದನೆ ಹೀಗೆ ಮನುಷ್ಯನ ಅಸಹಜ ಜೀವನ ಶೈಲಿಯಿಂದಾಗಿ ನೆಲ-ಜಲ-ಗಾಳಿ ಕಲುಷಿತವಾಗುತ್ತಿದೆ. ನಾವು ಬಳಸುವ ಕೊಳ್ಳುವ ಒಂದೊಂದು ವಸ್ತುವೂ ಈ ಸಮಸ್ಯೆಯ ಗುಡಾಣವನ್ನು ನಮ್ಮ ಪಾಲಿನ ಕೊಡುಗೆಯಿಂದ ತುಂಬಿಸುತ್ತಾ ಇದೆ. ಸರಳ ಜೀವನವನ್ನು ನಾವು ವ್ರತದೋಪಾದಿಯಲ್ಲಿ ಕೈಗೊಂಡರೆ ಸ್ವಲ್ಪಮಟ್ಟಿಗೆ ಈ ದುರಂತದಿಂದ ಪಾರಾಗಬಹುದು.

''ಎಲ್ಲರ ಅಗತ್ಯವನ್ನು ಪೂರೈಸಬಲ್ಲಷ್ಟು ಸಂಪತ್ತು ಈ ಭೂಮಿಯಲ್ಲಿದೆ, ಆದರೆ ಎಲ್ಲರ ದುರಾಸೆಯನ್ನಲ್ಲ'' ಎಂದು ಗಾಂಧೀಜಿ ಹೇಳಿದ್ದನ್ನು ನಾವು ಸ್ಮರಿಸಬಹುದು. ಅಪಾರವಾಗಿ ಬೆಳೆಯುತ್ತಿರುವ ಜನಸಂಖ್ಯೆ ಮತ್ತು ಈ ಜನಗಳ ಕೊಳ್ಳುವ ಶಕ್ತಿಯನ್ನು ಬಂಡವಾಳ ಮಾಡಿಕೊಂಡು ಬೆಳೆಯುತ್ತಿರುವ ಕಂಪನಿಗಳು ಸಮಸ್ಯೆಯನ್ನು ದಿನೇ ದಿನೇ ಉಲ್ಬಣಗೊಳಿಸುತ್ತಿವೆ. ಮೌಲ್ಯಗಳಿಗೆ ಅಥವಾ ಆಧ್ಯಾತ್ಮಿಕತೆಗೆ ಸ್ಥಾನವೇ ಇಲ್ಲದ ಇಂದಿನ ಮಾರುಕಟ್ಟೆ ಜೀವನ ಪದ್ಧತಿ ಪರಿಸರದ ಮಾಲಿನ್ಯದ ಜೊತೆ ಮನಸ್ಸಿನ ಮಾಲಿನ್ಯಕ್ಕೂ ಕಾರಣವಾಗಿದೆ. ಮನುಷ್ಯ ಮನುಷ್ಯರ ನಡುವೆ ಸ್ಪರ್ಧೆಯನ್ನು ಮಾತ್ರ ಹೆಚ್ಚಿಸುವ ಈ ಜೀವನ ಶೈಲಿಯಿಂದಾಗಿ ಮನದಾಳದಲ್ಲಿ ಮಲಗಿದ್ದ ಕ್ರೌರ್ಯ ಭುಗಿಲೇಳುತ್ತದೆ. ವ್ಯಕ್ತಿ-ವ್ಯಕ್ತಿಯ ನಡುವೆ ಹಿಂಸೆ ನೋವು ಅಭದ್ರತೆಗಳು ತಾಂಡವವಾಡುತ್ತವೆ. ಮನುಷ್ಯ ಸಂಬಂಧಗಳಲ್ಲಿ ಪ್ರೀತಿ-ಸಹನೆ-ಕರುಣೆಗಳು ಕಣ್ಮರೆಯಾಗಿ ಅಸಹನೆ, ಅಸಹಿಷ್ಣುತೆಗಳು ಮೇಲೇಳುತ್ತವೆ. ನಮ್ಮವರು-ತಮ್ಮವರು ಎಂಬ ಭೇದ ಕೇವಲ ವಸ್ತು ಲಾಭದ ಸ್ವಾರ್ಥದಿಂದ ಹುಟ್ಟಿ ಜನಾಂಗೀಯ ವೈಷಮ್ಯ - ಜಾತಿ ಕಲಹಗಳಾಗಿ ಹಿಂಸಾರೂಪ ತಾಳುತ್ತವೆ, ಅಸಮಾನತೆ ತಲೆ ಎತ್ತುತ್ತದೆ. ಇವು ಅಂತರ ರಾಜ್ಯ ಕಲಹಗಳಾಗುತ್ತವೆ; ಕೊನೆಗೆ ದೇಶ ದೇಶಗಳ ನಡುವಿನ ಯುದ್ಧವಾಗಿ ಪರಿಣಮಿಸುತ್ತದೆ. ಯಾವ ದೇಶಗಳು ಅತಿಯಾದ ಜನಸಂಖ್ಯೆಯಿಂದ, ದುರಾಡಳಿತದಿಂದ ಸಮಾನತೆ ಸಾಧ್ಯವಾಗದೆ ತೊಳಲುತ್ತಿವೆಯೋ ಆ ದೇಶಗಳು ತಮ್ಮ ಸಮಸ್ಯೆಗೆ ಪರಿಹಾರವನ್ನು ತಮ್ಮದೇ ನೆಲದಲ್ಲಿ ಕಂಡುಹಿಡಿಯುವ ಬದಲು ಇತರ ದೇಶಗಳ ಮೇಲೆ ಯುದ್ಧ ಸಾರುವ ಮೂಲಕ ಪರಿಹರಿಸಿಕೊಳ್ಳಲು ಪ್ರಯತ್ನಿಸುತ್ತವೆ. ಸರ್ಕಾರವಾಗಲಿ ನಾಯಕರಾಗಲಿ ಈ ಸಮಸ್ಯೆಯನ್ನು ಪರಿಹರಿಸಲಾಗುವುದಿಲ್ಲ. ಏಕೆಂದರೆ ಸರ್ಕಾರಗಳು ಜನಗಳ ಬೇಡಿಕೆಗೆ ತಕ್ಕ ಹಾಗೆ ವ್ಯವಸ್ಥೆಮಾಡಿ ಜನ ಮನ್ನಣೆ ಗಳಿಸಿ ಮುಂದಿನ ಚುನಾವಣೆಯಲ್ಲಿ ಆರಿಸಿಬರುವ ತಂತ್ರವನ್ನು ಅನುಸರಿಸದೆ ವಿಧಿಯಿಲ್ಲ. ಆದರೆ ಯಾವ ಸರ್ಕಾರವೂ ಜನಗಳಿಗೆ ಅಪ್ರಿಯವಾದ ಸತ್ಯವನ್ನು ಹೇಳುವುದಿಲ್ಲ. ಅಪ್ರಿಯವಾದ ಸತ್ಯ ಏನೆಂದರೆ ನಮ್ಮ ಭೂಮಿ ಜನಗಳ ದುರಾಸೆಯನ್ನು ಪೂರೈಸುವಂತಹ ಅಭಿವೃದ್ಧಿಯನ್ನು ತಾಳಿಕೊಳ್ಳಲಾರದು. ನಮ್ಮ ಇಂದಿನ ಪರಿಸ್ಥಿತಿಯಲ್ಲಿ ಈ ಅಪ್ರಿಯ ಸತ್ಯವನ್ನು ಯಾವ ಸರ್ಕಾರವೂ ಹೇಳಲು ಸಿದ್ಧವಿಲ್ಲ. ಬದಲಾಗಿ ಮತ್ತಷ್ಟು ಆಶ್ವಾಸನೆಗಳನ್ನು ಕೊಡುತ್ತಲೇ ದಿನ ತಳ್ಳುತ್ತಾರೆ.

ಆದ್ದರಿಂದ ಈ ಸಮಸ್ಯೆಯನ್ನು ಯಾರು ಸೃಷ್ಟಿಸಿದರೋ ಅವರೇ ಪರಿಹರಿಸಬೇಕು. ಎಂದರೆ ನಾವು ನೀವು ಮಾತ್ರ ಪರಿಹರಿಸಲು ಸಾಧ್ಯ.

ಇಂದು ನಮ್ಮ ದೇಶದ ಜನಸಂಖ್ಯೆ ನೂರು ಕೋಟಿಯನ್ನು ದಾಟಿದೆ. ದೇಶದ ಆರ್ಥಿಕ ಪ್ರಗತಿಯಿಂದಾಗಿ ತಲಾವಾರು ಆದಾಯ ಹೆಚ್ಚಾಗಿದೆ ಎಂಬುದೇನೋ ನಿಜ. ಹೀಗೆ ಹೆಚ್ಚಾದ ವರಮಾನವನ್ನು ಹಳ್ಳಿಯ ಜನ ಯಾವುದಕ್ಕಾಗಿ ಬಳಸುತ್ತಿದ್ದಾರೆ? ಒಂದು ಸಮೀಕ್ಷೆ ನಡೆಸಲಾಯಿತು. ಆದಾಯ ಹೆಚ್ಚಾದಂತೆ ಗ್ರಾಮೀಣ ಹೆಣ್ಣುಮಕ್ಕಳು ಹೆಚ್ಚು ಹೆಚ್ಚು ಫೇರ್ ಅಂಡ್ ಲವ್‌ಲಿ ಮತ್ತು ಆ ಬಗೆಯ ಕ್ರೀಮ್‌ಗಳಿಗಾಗಿ ಧಾರಾಳವಾಗಿ ಹಣ ವ್ಯಯ ಮಾಡುವುದು ತಿಳಿಯಿತು. ಜೊತೆಗೆ ಜಂಕ್‌ಫುಡ್ ಎಂದು ಕರೆಯಲಾಗುವ ಪ್ಯಾಕ್ ಮಾಡಿದ ಕುರುಕಲು ತಿಂಡಿಗಳು, ವಿಧವಿಧವಾದ ಕೋಕಾಕೋಲಾ ತರಹದ ಜ್ಯೂಸ್ ಬಾಟಲಿಗಳನ್ನು ಯಥೇಚ್ಛವಾಗಿ ಖರೀದಿಸುತ್ತಾರೆ. ಗಂಡು ಹುಡುಗರು ತಂಬಾಕು, ಸಿಗರೇಟ್ ಮತ್ತು ಮೊಬೈಲ್‌ಗಳಿಗಾಗಿ ಧಾರಾಳವಾಗಿ ಹಣ ಖರ್ಚುಮಾಡುವುದು, ಅದರಲ್ಲೂ ಮೊಬೈಲ್ ರಿಚಾರ್ಜ್‌ಗೆಂದು ಧಾರಾಳವಾಗಿ ಹಣ ಖರ್ಚುಮಾಡುವುದು ಸಮೀಕ್ಷೆಯಿಂದ ಕಂಡುಬರುತ್ತದೆ. ಬೆಳ್ಳಗೆ ಕಾಣುವ ಎಂದರೆ ಆಧುನಿಕರಾಗಿ ಕಾಣುವ ಹಂಬಲ ನಮ್ಮ ಮುಗ್ಧ ಗ್ರಾಮೀಣ ಜನರನ್ನು ಎಷ್ಟು ಆವರಿಸಿಕೊಂಡಿದೆ ಎಂದರೆ ಈ ಹಂಬಲದಲ್ಲಿ ತಮ್ಮ ಮಕ್ಕಳಿಗೆ ಪೌಷ್ಟಿಕ ಆಹಾರ ಕೊಡುತ್ತಿದ್ದೇವೆಯೇ ಎಂಬ ಪ್ರಶ್ನೆ ಅವರನ್ನು ಕಾಡುವುದಿಲ್ಲ, ಅಥವಾ ತಾವೇ ಆರೋಗ್ಯಕರ ಆಹಾರ ಸೇವಿಸುತ್ತಿದ್ದೇವೆಯೆ ಎಂಬ ಕುರಿತಾಗಿ ಅರಿವಿಲ್ಲ. ಆಧುನಿಕರಾಗುವುದು ಎಂದರೆ ಹೊಸ ಕಾಲಮಾನದ ಉಡುಗೆ ತೊಡುಗೆಗಳನ್ನು ತೊಡುವುದು, ಆಧುನಿಕ ಕಂಪನಿಗಳು ತಯಾರಿಸಿದ ಆಹಾರವನ್ನು ಸೇವಿಸುವುದು, ಶ್ರಮವಹಿಸಿ ಕೆಲಸಮಾಡದೆ ಫಲವನ್ನು ಪಡೆಯುವ, ಮತ್ತೊಬ್ಬರ ಶ್ರಮದ ಫಲವನ್ನು ಕದಿಯುವ ಹೊಸ ವಿಧಾನ

ಗಳನ್ನು ಅನುಸರಿಸುವುದು ಎಂದು ಭಾವಿಸುತ್ತಾರೆ. ಹೀಗೆ ಮಾರುಕಟ್ಟೆ ಜಾಹೀರಾತುಗಳು ಕಟ್ಟಿಕೊಟ್ಟ ಜೀವನದ ಚಿತ್ರಕ್ಕೆ ಮಾರುಹೋಗಿ ಅದರಂತೆ ಬದುಕು ರೂಢಿಸಿಕೊಳ್ಳುವುದೇ ನಮ್ಮ ಜನಗಳ ಜೀವನದ ಗುರಿಯಾಗಿ ಪರಿಣಮಿಸಿದೆ. ಇಷ್ಟಾದರೂ ಮನೆಗೊಂದು ಶೌಚಾಲಯ ಬೇಕೆಂದು ಇವರಿಗೆ ಅನ್ನಿಸುವುದೇ ಇಲ್ಲ. ಈ ಬಗೆಯ ಜೀವನದಿಂದ ನಮಗೆ ನಿಜವಾಗಿಯೂ ಸಂತೋಷ-ನೆಮ್ಮದಿಗಳು ಲಭಿಸುತ್ತಿವೆಯೇ ಎಂದು ಪ್ರಶ್ನಿಸುವ ವ್ಯವಧಾನವೂ ಇಲ್ಲವಾಗಿದೆ.

ತಂತ್ರಜ್ಞಾನ - ವಿಜ್ಞಾನಗಳ ಪ್ರಗತಿಯನ್ನು ಆಧರಿಸಿದ ಇಂತಹ ಆಧುನಿಕ ಜೀವನ ಕ್ರಮದ ಪರಿಣಾಮಗಳನ್ನು ಸ್ವಾಮಿ ವಿವೇಕಾನಂದರು ಮೊದಲೇ ಊಹಿಸಿ ಎಚ್ಚರಿಸಿದರು. ''ಮನುಷ್ಯ ಇಂದು ಪಡೆಯುತ್ತಿರುವ ಸಂತೋಷ, ನೂರು ವರ್ಷದ ಹಿಂದೆ ಅವನು ಪಡೆಯುತ್ತಿದ್ದ ಸಂತೋಷಕ್ಕಿಂತ ಹೆಚ್ಚಾಗಿದೆಯೆ?'' ಎಂದು ಅವರು ಪ್ರಶ್ನಿಸುತ್ತಾರೆ. ಮತ್ತೆ ಹೇಳುತ್ತಾರೆ, ''..ನೀವು ಕಂಡುಹಿಡಿಯುವ ಪ್ರತಿಯೊಂದು ಯಂತ್ರವೂ ಇಪ್ಪತ್ತು ಜನರನ್ನು ಶ್ರೀಮಂತರನ್ನಾಗಿ ಮಾಡಿದರೆ ಇಪ್ಪತ್ತು ಸಾವಿರ ಜನರನ್ನು ಬಡವರನ್ನಾಗಿ ಮಾಡುತ್ತದೆ.'' ಭೋಗಸಾಮಗ್ರಿಗಳ ಮೇಲಿನ ವ್ಯಾಮೋಹದಿಂದ ಅತಿಯಾದ ಆಸೆ, ಸ್ಪರ್ಧೆಗಳು ಹುಟ್ಟುವುದನ್ನು ಮತ್ತು ಅವುಗಳಿಂದ ಕೊನೆಗೆ ಸಂತೋಷಕ್ಕಿಂತ ಹೆಚ್ಚಾಗಿ ದುಃಖವುಂಟಾಗುವುದನ್ನು ಕುರಿತು ಸ್ವಾಮೀಜಿ ಸ್ಪಷ್ಟ ಮಾತುಗಳಲ್ಲಿ ಹೇಳಿದ್ದಾರೆ. ಈ ಆಧುನಿಕತೆಯ ವ್ಯಾಮೋಹದಿಂದಾಗಿ ಮನುಷ್ಯ ತನ್ನ ವೈಯುಕ್ತಿಕ ನೆಲೆಯಲ್ಲಿ ಸಂತೋಷ ಕಳೆದುಕೊಂಡರೂ ಅದನ್ನು ಗುರುತಿಸದಾಗಿದ್ದಾನೆ. ಐಷಾರಾಮಿ ಜೀವನದ ಆಸೆಯಿಂದಾಗಿ ದುರಾಸೆ - ಸ್ವಾರ್ಥಗಳು ಹೆಚ್ಚುತ್ತಿವೆ ಮತ್ತು ಇದರ ಪರಿಣಾಮವಾಗಿ ಸಂಪನ್ಮೂಲಗಳ ದುರ್ಬಳಕೆ ಮತ್ತು ಮಾಲಿನ್ಯದ ಸಮಸ್ಯೆ ಬೃಹದಾಕಾರವಾಗಿ ಬೆಳೆದು ಮನುಕುಲದ ಅಳಿವು-ಉಳಿವಿನ ಪ್ರಶ್ನೆಯಾಗಿ ನಿಂತಿದೆ.

ಮನುಷ್ಯನ ಎಲ್ಲಾ ಸಮಸ್ಯೆಗಳಿಗೂ ನಾವು ಕಾರಣವನ್ನು ಹೊರಜಗತ್ತಿನಲ್ಲಿ ಮಾತ್ರ ಹುಡುಕುತ್ತಿದ್ದೇವೆ. ಆರ್ಥಿಕ ಪ್ರಗತಿ ಹೆಚ್ಚಾದರೆ, ಉತ್ಪಾದನೆ ಹೆಚ್ಚಾದರೆ, ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಂಡರೆ ಸಮಸ್ಯೆಯನ್ನು ಪರಿಹರಿಸಬಹುದೆಂಬ ನಂಬಿಕೆಯಿಂದ ನಾವು ಶ್ರಮಿಸುತ್ತಿದ್ದೇವೆ. ಆದರೆ ಆಗಿರುವುದೇನು? ಪ್ರಗತಿ ಸಾಧಿಸಿರುವ ರಾಷ್ಟ್ರಗಳಲ್ಲಾಗಲಿ ಅಥವಾ ಪ್ರಗತಿಶೀಲ ರಾಷ್ಟ್ರಗಳಲ್ಲಾಗಲಿ ಒಂದಲ್ಲಾ ಒಂದು ಸಮಸ್ಯೆ ತಲೆ ಎತ್ತುತ್ತಲೇ ಇದೆ. ದಿನ ಕಳೆದಂತೆ ಮನುಷ್ಯಕುಲ ಅತೃಪ್ತಿ ಅಸಂತೋಷದಿಂದ ಬಳಲುವುದು ಹೆಚ್ಚಾಗುತ್ತಲೇ ಇದೆ. ಹೊರ ಜಗತ್ತಿನಲ್ಲಿ ತರುವ ಬದಲಾವಣೆಗಳಿಂದ ಮನುಷ್ಯ ಸಂತೋಷಿಯಾಗುತ್ತಾನೆ ಎಂಬ ನಂಬಿಕೆ ಸುಳ್ಳಾಗಿದೆ.

ನಮ್ಮ ಮನೆಗಳಲ್ಲಿ ಕಂಡುಬರುವ ಒಂದೊಂದು ಐಷಾರಾಮಿ ಸೌಲಭ್ಯಗಳೂ ನಮ್ಮ ಮನೋದೌರ್ಬಲ್ಯದ ಅಥವಾ ಮನಸ್ಸಿಗೆ ಅಂಟಿದ ಯಾವುದೋ ರೋಗದ ಬಾಹ್ಯಚಿನ್ಹೆ ಎಂದು ಗುರುತಿಸಬಹುದಾಗಿದೆ. ಹೀಗೆ ನಮ್ಮ ಪರಿಸರ ಮನುಷ್ಯನ ಮನೋರೋಗದ ಕುರುಹುಗಳಿಂದ ತುಂಬಿ ಹೋಗಿದೆ. ಇಡೀ ಸಮಾಜವೇ ರೋಗಗ್ರಸ್ತ ಮನುಷ್ಯರಿಂದ ತುಂಬಿ ಹೋಗಿದೆ. ಈ ಪರಿಸರದಲ್ಲಿ ಬೆಳೆಯುವ ಮಕ್ಕಳಿಗೂ ಸಹ ಈ ರೋಗದ ಸೋಂಕು ತಗಲುತ್ತದೆ; ಬಹು ಬೇಗ ಉಲ್ಬಣಿಸುತ್ತದೆ. ತಮ್ಮ ಮಕ್ಕಳಿಗೆ ಎಳೆಯ ವಯಸ್ಸಿನಲ್ಲೆಯೇ ಈ ರೋಗ ತಗುಲಿದ್ದನ್ನು ಕಂಡು ತಂದೆ ತಾಯಿಗಳು ಸಂಭ್ರಮಿಸುತ್ತಾರೆ. ನಮಗಿಂತ ನಮ್ಮ ಮಕ್ಕಳು ಹೆಚ್ಚು ಪ್ರಗತಿ ಸಾಧಿಸಿದ್ದಾರೆ ಎಂದು ಹೆಮ್ಮೆಪಡುತ್ತಾರೆ. ಮನಸ್ಸಿನ ಸಂತೋಷಕ್ಕಾಗಿ ನಾವು ವಸ್ತು ಸೌಕರ್ಯಗಳನ್ನು ಸಂಗ್ರಹಿಸಬೇಕು; ಆದರೆ ಈ ಸಂಗ್ರಹ ಕಾರ್ಯವೇ ಮನಸ್ಸಿನ ಅಳಿದುಳಿದ ಸಂತೋಷವನ್ನು ನಾಶ ಮಾಡಿದರೆ?

ಇಂತಹ ಒಂದು ಸಂದರ್ಭದಲ್ಲಿ ನಮ್ಮ ಅಸಂತೋಷದ ಕಾರಣ ಏನು ಎಂದು ಹುಡುಕಬೇಕಲ್ಲವೆ? ನಿಜವಾಗಿ ಹೇಳಬೇಕೆಂದರೆ ನಮ್ಮ ಒಳಗಿನ ಎಂದರೆ ಮನೋಮಯ ಪರಿಸರವನ್ನು ಆರೋಗ್ಯಕರವಾಗಿ ಬದಲಿಸಿಕೊಂಡರೆ ಅದಕ್ಕೆ ತತ್ಸಮಾನವಾದ ಆರೋಗ್ಯಕರ ಬದಲಾವಣೆಗಳು ಹೊರಜಗತ್ತಿನಲ್ಲಿಯೂ ಉಂಟಾಗುತ್ತದೆ. ಇದನ್ನೇ 'ಅಧ್ಯಾತ್ಮ' ಎನ್ನಬಹುದು.

ನೂರು ವರ್ಷಗಳ ಹಿಂದೆ ಸ್ವಾಮಿ ವಿವೇಕಾನಂದರು ಭಾರತೀಯ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳನ್ನು ಹೋಲಿಸುತ್ತ ಕೇವಲ ಯಂತ್ರ-ತಂತ್ರಗಳ ಸಹಾಯದಿಂದ ಸೌಕರ್ಯಗಳನ್ನು ಹೆಚ್ಚಿಸಿಕೊಂಡಾಕ್ಷಣ ಆ ದೇಶ ನಾಗರಿಕತೆಯನ್ನು ಸಾಧಿಸಿದೆ ಎಂದು ಹೇಳಬಹುದೆ ಎಂದು ಪ್ರಶ್ನಿಸುತ್ತಾರೆ. ಮತ್ತೆ ಹೇಳುತ್ತಾರೆ - ಇವು ಮನುಷ್ಯನ 'ಬೇಕು'ಗಳನ್ನು ಹೆಚ್ಚಿಸುತ್ತಲೇ ಹೋಗುತ್ತವೆ. ಮನುಷ್ಯ-ಮನುಷ್ಯರ ನಡುವೆ ಸ್ಪರ್ಧೆ, ಪೈಪೋಟಿಗಳನ್ನು ಹೆಚ್ಚಿಸಿ ಅವನು ವ್ಯಥಾ ಹೆಣಗುವಂತೆ ಮಾಡುತ್ತವೆ. ಆದರೆ ನಮ್ಮ ಸನಾತನ ಸಂಸ್ಕೃತಿ ಆಧ್ಯಾತ್ಮಿಕ

ಪ್ರಗತಿಯ ಮೂಲಕ ಈ 'ಬೇಕು' ಗಳ ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹರಿಸದಿದ್ದರೂ ಅದನ್ನು ಸಾಕಷ್ಟು ಕಡಿಮೆ ಮಾಡಿದೆ ಎನ್ನುತ್ತಾರೆ. ಎಂದರೆ ಇರುವುದರಲ್ಲೆ ತೃಪ್ತರಾಗಿರುವುದನ್ನು ಅಧ್ಯಾತ್ಮ ಕಲಿಸಿದೆ ಎನ್ನುತ್ತಾರೆ. ಆದರೆ ಇಂದು ಸ್ವಾಮಿ ವಿವೇಕಾನಂದರು ಬಂದು ನೋಡಿದರೆ ಏನು ಕಾಣುತ್ತದೆ? ಪಾಶ್ಚಾತ್ಯರಿಗಿಂತ ಒಂದು ಕೈ ಮಿಗಿಲಾಗಿ ನಮ್ಮ ಜನ 'ಬೇಕು'ಗಳ ಹಿಂದೆ ಬಿದ್ದಿದ್ದಾರೆ. ವೈಚಾರಿಕತೆಯನ್ನು, ವೈಜ್ಞಾನಿಕ ಮನಸ್ಸನ್ನು ಬೆಳೆಸಿಕೊಳ್ಳದೆ ದಟ್ಟದಾರಿದ್ರ್ಯದಿಂದ ತೊಳಲುತ್ತಿದ್ದರೂ, ತಮ್ಮ ಮೂಲಭೂತ ಆವಶ್ಯಕತೆಗಳಿಗೆ ಮೊದಲ ಆದ್ಯತೆ ನೀಡಬೇಕೆಂಬ ತಿಳುವಳಿಕೆಯೂ ಇಲ್ಲದೆ, ಐಷಾರಾಮಿ ಕನಸುಗಳ ಬೆನ್ನುಹತ್ತಿ ಹೋಗುತ್ತಿದ್ದಾರೆ. ಜನಸಾಮಾನ್ಯರ ದೌರ್ಬಲ್ಯಗಳನ್ನೇ ಬಂಡವಾಳ ಮಾಡಿಕೊಂಡು ಬೆಳೆಯುತ್ತಿರುವ ಜಾಗತೀಕರಣ – ಮಾರುಕಟ್ಟೆಗಳು ಜನರನ್ನು ಮತಿಹೀನರನ್ನಾಗಿ ಮಾಡಿವೆ. ವಾಸ್ತವವಾಗಿ ನಮ್ಮ ಈ ಐಷಾರಾಮಿ ಕನಸುಗಳನ್ನು ನನಸು ಮಾಡಲು ಸಾಧ್ಯವಿಲ್ಲ ಎಂಬುದು ನಮ್ಮ ಸರ್ಕಾರಗಳಿಗೆ ತಿಳಿದೇ ಇದೆ. ಇರುವ ಈ ಒಂದೇ ಭೂಮಿಯ ಸಂಪನ್ಮೂಲಗಳಿಂದ ಎಲ್ಲರಿಗೂ ಐಷಾರಾಮಿ ಬದುಕು ಕಟ್ಟಿಕೊಡಲು ಸಾಧ್ಯವಿಲ್ಲ ; ಇಂತಹ ದುಬಾರಿ ಕನಸು ನನಸಾಗಲು ಕನಿಷ್ಠ ಆರು ಭೂಮಿಗಳಾದರೂ ಬೇಕಾದೀತು ಎಂಬುದು ವೈಜ್ಞಾನಿಕ ಸತ್ಯ. ಆದರೂ ನಮ್ಮ ಸರ್ಕಾರಗಳು ಹುಸಿ ಆಶ್ವಾಸನೆ ನೀಡುತ್ತ ಓಟು ಗಿಟ್ಟಿಸುತ್ತ ಸತ್ಯವನ್ನು ಮರೆಮಾಚಿವೆ.

ಇಂತಹ ಒಂದು ಸಂದರ್ಭದಲ್ಲಿ ಆಧ್ಯಾತ್ಮಿಕ ಜೀವನ ದೃಷ್ಟಿಯೊಂದೇ ನಮ್ಮ ದೇಶವನ್ನು, ಆ ಮೂಲಕ ಇಡೀ ಪ್ರಪಂಚವನ್ನು ಕಾಪಾಡಬಲ್ಲದು. ಭಾರತ ತನ್ನ ಆಧ್ಯಾತ್ಮಿಕತೆಯನ್ನು ಕಳೆದುಕೊಂಡರೆ ಅದರಿಂದ ಇಡೀ ಪ್ರಪಂಚವೇ ನಾಶವಾದೀತು ಎಂಬ ಸ್ವಾಮಿ ವಿವೇಕಾನಂದರ ಮಾತುಗಳು ಈ ಸಂದರ್ಭದಲ್ಲಿ ಎಷ್ಟು ಪ್ರಸ್ತುತ ಎನಿಸುತ್ತದೆಯಲ್ಲವೆ? ಗಾಂಧೀಜಿಯವರ ನಡೆ-ನುಡಿಗಳನ್ನು ಗಮನಿಸಿದರೆ ಅವರು ಸ್ವಾಮಿ ವಿವೇಕಾನಂದರ ಮುಂದುವರಿಕೆಯಾಗಿರುವುದು ಸುಸ್ಪಷ್ಟ. ಆಧ್ಯಾತ್ಮಿಕ ಮೌಲ್ಯಗಳನ್ನು ಶ್ರಮದ ಜೊತೆ ಸೇರಿಸಿ ಕಟ್ಟುವ ಸರಳ ಜೀವನದ ಮಾದರಿಯೊಂದೇ ನಮ್ಮ ಮುಂದಿರುವ ಆಯ್ಕೆ. ಆದರೆ ಈ ಅಧ್ಯಾತ್ಮ ಪ್ರಧಾನವಾದ ಸರಳ ಜೀವನ ಜನಗಳಿಗೆ ಇಷ್ಟವಾಗುವ ಹಾಗೆ ಮಾಡಬಲ್ಲವರಾರು? ಇಂದು ನಮ್ಮ ಬಹುಪಾಲು ಮಠಮಾನ್ಯಗಳನ್ನೂ ಐಷಾರಾಮಿ ವ್ಯವಸ್ಥೆಯಿಂದ ಸಜ್ಜುಗೊಳಿಸಲಾಗಿದೆ. ಇವುಗಳೂ ಕೂಡ ಸಮಾಜ ಬಳಲುತ್ತಿರುವ ಸಮಸ್ಯೆಗಳ ಭಾಗವಾಗಿಯೇ ಮುಂದುವರಿಯುತ್ತಿರುವಂತೆ ಕಂಡು ಬರುತ್ತಿವೆ. ಯಾವ ಮಹಾಪುರುಷನೂ ನಮ್ಮ ಈ ಸಮಸ್ಯೆಯನ್ನು ಪರಿಹರಿಸಲಾರ. ಹಾಗಾಗಿ ಸಮಾಜದ ಪ್ರತಿಯೊಬ್ಬನೂ ಈ ಸಮಸ್ಯೆಗೆ ಸ್ಪಂದಿಸಬೇಕು; ಪ್ರತಿಯೊಬ್ಬನೂ ದೃಢಸಂಕಲ್ಪ ಮಾಡಿ ಆಧ್ಯಾತ್ಮಿಕವಾದ ಸರಳ ಜೀವನದ ಕಡೆ ಹೆಜ್ಜೆ ಇಡಬೇಕು.

ಶ್ರೀಮಾತೆಯವರ ಉಪದೇಶಗಳು

❁ ಶಿಷ್ಯ: ಭಗವಂತನ ಪ್ರೀತಿಯನ್ನು ಪಡೆಯದೆ ಅವನಿಗೋಸ್ಕರ ವ್ಯಾಕುಲತೆ ಉಂಟಾಗುವುದಾದರೂ ಹೇಗೆ ?

ಶ್ರೀಮಾತೆ: ಅದೇ ನೋಡು, ಅವನ ಕೃಪೆಯಿಂದ ಅದು ಸಾಧ್ಯವಾದೀತು.

❁ ಬಯಕೆಗಳು ಇರುವಷ್ಟು ಕಾಲವೂ ಜೀವಕ್ಕೆ ಜನನ ಮರಣ ತಪ್ಪಿದ್ದಲ್ಲ. ಬಯಕೆಗಳಿಂದಲೇ ದೇಹದಿಂದ ದೇಹಕ್ಕೆ ಜನ್ಮಾಂತರವುಂಟಾಗುವುದು. ಸ್ವಲ್ಪ ಸಂದೇಶ ಸಿಹಿತಿಂಡಿ ತಿನ್ನುವ ಆಸೆಯಿದ್ದರೂ ಪುನರ್ಜನ್ಮವುಂಟಾಗುವುದು.

❁ ಬಯಕೆಗಳು ಸಣ್ಣ ಬೀಜದಂತೆ – ಆಲದ ಮರದ ಸಣ್ಣ ಬೀಜ ಮುಂದೊಂದು ದಿನ ಮಹಾವೃಕ್ಷವಾಗುವಂತೆ, ಅವೂ ಬೆಳೆದು ದೊಡಲದಾಗುವುವು. ಬಯಕೆಗಳಿದ್ದರೆ ಖಂಡಿತ ಪುನರ್ಜನ್ಮವುಂಟಾಗುವುದು. ಒಂದು ಚೀಲದಿಂದ ದೇಹವನ್ನು ತೆಗೆದು ಇನ್ನೊಂದು ಚೀಲಕ್ಕೆ ತುಂಬಿದಂತೆ. ಎಲ್ಲೋ ಒಂದಿಬ್ಬರಿಗೆ ಮಾತ್ರ ಒಂದೇ ಬಾರಿಗೆ ಆಸೆಗಳು ಇಲ್ಲದಾಗುವುದು. ಆಸೆಗಳಿಂದಾಗಿ ಪುನರ್ಜನ್ಮವುಂಟಾದರೂ, ಪೂರ್ವ ಜನ್ಮದ ಸತ್ಕರ್ಮಗಳಿದ್ದರೆ ಅವನ ಆಧ್ಯಾತ್ಮಿಕ ಚೈತನ್ಯ ನಷ್ಟವಾಗುವುಲ್ಲ.

❁ ಶಿಷ್ಯ : ಅಮ್ಮಾ, ಭಗವಂತನ ಕೃಪೆ ಯಾವಾಗ ಬೇಕಾದರೂ ಆದೀತು, ಆದ್ದರಿಂದ ತಕ್ಕ ಸಮಯಕ್ಕೆ ಕಾಯುವ ಅಗತ್ಯವಿಲ್ಲ.

ಶ್ರೀಮಾತೆ: ಅದೇನೋ ಸರಿ. ಆದರೆ ಜ್ಯೇಷ್ಠ ಮಾಸದಲ್ಲಿ ಆಗುವ ಮಾವಿನ ಹಣ್ಣಿನಷ್ಟು ಸಿಹಿ ಉಳಿದ ತಿಂಗಳಲ್ಲಿ ಆದ ಹಣ್ಣಿಗೆ ಇದ್ದೀತೆ? ಮನುಷ್ಯ ಅಕಾಲದಲ್ಲಿ ಫಲ ಗಳಿಸಲು ಪ್ರಯತ್ನ ಪಡುತ್ತಾನೆ. ಈಗ ನೋಡು, ಆಶ್ವಯುಜ ಮಾಸದಲ್ಲಿ ಹಲಸಿನಹಣ್ಣು, ಮಾವಿನ ಹಣ್ಣು ಆಗುತ್ತದೆ. ಆದರೆ ಆಯಾ ಋತುವಿನಲ್ಲಿ ಆದ ಹಣ್ಣಿನಂತೆ ಸಿಹಿ ಇದ್ದೀತೆ? ಭಗವಂತನ ಸಾಕ್ಷಾತ್ಕಾರದ ಹಾದಿಯೂ ಇದೇ ರೀತಿ. ಈ ಜನ್ಮದಲ್ಲಿ ಜಪ ತಪಾದಿಗಳನ್ನು ಮಾಡಿದರೆ ಮುಂದಿನ ಜನ್ಮದಲ್ಲಿ ಭಾವ ಇನ್ನಷ್ಟು ಘನೀಭೂತವಾಗುವುದು. ಅದಕ್ಕೂ ಮುಂದಿನ ಜನ್ಮದಲ್ಲಿ ಇನ್ನೂ ಸ್ವಲ್ಪ ಪ್ರಗತಿಯುಂಟಾಗುವುದು. ಇದು ಹೀಗೇ ತಾನೆ?

❁ ಭಗವಂತನದು ಬಾಲಕ ಸ್ವಭಾವ. ಕೆಲವರು ಅದನ್ನು ಬಯಸುವುದಿಲ್ಲ, ಅವರಿಗೆ ಕೊಡುತ್ತಾನೆ. ಇನ್ನು ಕೆಲವರು ಬಯಸುತ್ತಾರೆ, ಅವರಿಗೆ ಕೊಡಲಾರ. ಇದೆಲ್ಲ ಅವನ ಆಟ.

❁ ಶಿಷ್ಯ : ಬೆರಳಲ್ಲಿ ಮಂತ್ರಜಪ ಎಣಿಸುವುದೇಕೆ? ಸುಮ್ಮನೇ ಜಪ ಮಾಡಿದರೆ ಸಾಕಲ್ಲವೆ?

ಶ್ರೀಮಾತೆ: ಭಗವಂತ ಬೆರಳನ್ನು ಕೊಟ್ಟಿದ್ದಾನೆ. ಮಂತ್ರಜಪ ಮಾಡುವುದರಲ್ಲಿ ಅದರ ಸಾರ್ಥಕತೆ ಇದೆ.

ಶ್ರೀಶಾರದಾದೇವಿ ವಚನವೇದದಿಂದ



ಚಿತ್

ಸ್ವಾಮಿ ಶಿವಾಕಾಂತಾನಂದ

ವೇದಾಂತ ಎಂಬುದು ಒಂದು ಜೀವನಧರ್ಮವೂ ಹೌದು, ಸಾಕ್ಷಾತ್ಕಾರದ ಮಾರ್ಗವೂ ಹೌದು. ಎಲ್ಲಕ್ಕಿಂತ ಮಿಗಿಲಾಗಿ ಅದು ಅಧ್ಯಾತ್ಮವನ್ನು ತಾತ್ತ್ವಿಕವಾಗಿ ವಿವರಿಸುವ ಬೌದ್ಧಿಕ ಅನ್ವೇಷಣೆಯಾಗಿದೆ. ಭಗವಂತನ ಮೂಲ ಸ್ವರೂಪವೆಂದು ಪರಿಗಣಿಸಲಾದ ಚಿತ್ ಲಕ್ಷಣವನ್ನು ಇಲ್ಲಿ ವಿವರಿಸಿರುವ ಲೇಖಕರು ಕೇರಳದ ಕಾಲಡಿಯಲ್ಲಿರುವ ಶ್ರೀರಾಮಕೃಷ್ಣ ಅದ್ವೈತ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಉತ್ತಮ ವಾಗ್ಮಿಗಳು ಮತ್ತು ಲೇಖಕರು. ಇವರು ಬರೆದ ಹಲವು ಲೇಖನಗಳು ಈಗಾಗಲೇ ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.

ಪಾರಮಾರ್ಥಿಕ ವಸ್ತುವಾದ ಪರಬ್ರಹ್ಮವು ಸತ್-ಚಿತ್-ಆನಂದ ಸ್ವರೂಪವಾಗಿದೆ. ಸಚ್ಚಿದಾನಂದವೇ ವೇದಾಂತದಲ್ಲಿ **ತತ್** ಎಂದು ಸಂಬೋಧಿಸಲ್ಪಡುವ ಆ ವಸ್ತುವಿನ ಲಕ್ಷಣ. **ಸತ್** ಎಂದರೆ ಎಲ್ಲ ಸದಸದ್ವಸ್ತುಗಳನ್ನು ಒಳಗೊಂಡ, ಸ್ವರೂಪತಃ ನಿತ್ಯವಾದ, ಸಂಪೂರ್ಣವಾದ, ಎಲ್ಲವನ್ನೂ ವ್ಯಾಪಿಸಿರುವ ಏಕೈಕ ವಸ್ತು. ಈ ಸದ್ವಸ್ತುವೇ **ಚಿತ್** ಆಗಿದೆ. **ಚಿತ್** ಎಂದರೆ ಜ್ಞಾನ. ಇದರ ಸ್ವಭಾವವೇನು? ಆನಂದ, ಎಂದರೆ ಸದಾನಂದ. ದುಃಖರಹಿತ ಸ್ಥಿತಿ. ಈ ಚಿದ್ವಿಚಾರವಾಗಿ ಸ್ವಲ್ಪ ವಿಮರ್ಶಿಸೋಣ. **ಚಿತ್** ಎಂದರೆ ಅನಂತ ಪ್ರಜ್ಞೆ, ಅನಂತ ಜ್ಞಾನ. ಎಲ್ಲವನ್ನೂ ಚೆನ್ನಾಗಿ ನೋಡುವ, ಬೆಳಗುವ ತಿಳಿಯುವ ಸಂವಿತ್. ಅವಿಕಾರ್ಯವಾದ ಚಿತ್ ಪ್ರಕೃತಿಯೊಡಗೂಡಿ ಚೈತನ್ಯವಾಗುತ್ತದೆ. ಶುದ್ಧಸಾಕ್ಷಿಚೈತನ್ಯವು ದೃಶಿ ಸ್ವರೂಪ. ಎಲ್ಲ ದೃಶ್ಯಗಳ ಜ್ಞಾನವನ್ನು ಸಂಪಾದಿಸುವ ಏಕೈಕ ವಸ್ತು. ಇದು ಜಾಗ್ರತ್ಸ್ವಪ್ನಾವಸ್ಥೆಯಲ್ಲಿ ಎಲ್ಲವನ್ನೂ ಅರಿತು, ಎಲ್ಲವನ್ನೂ ಅನುಭವಿಸಿದರೂ ಆಕಾಶದಂತೆ ನಿರ್ಲಿಪ್ತ, ವಿಕಾರರಹಿತ. ಈ ಚಿದಾತ್ಮಕವಾದ ವಸ್ತುವಿನಿಂದಲೇ ಪಾರಮಾರ್ಥಿಕ ಅಥವಾ ವ್ಯಾವಹಾರಿಕ ವಸ್ತುಜ್ಞಾನ, ಅನುಭವ, ಸಂವೇದನೆ ಉಂಟಾಗುತ್ತಿರುವುದು. **ಚಿತ್** ಅಭೇದ, ಮೇರೆಯಿಲ್ಲದ, ದೇಶ ಕಾಲಗಳ ಎಲ್ಲೆಯಿಲ್ಲದ, ಅನಂತವಾದ, ಎಲ್ಲವನ್ನೂ ಒಳಗೊಂಡ ಮತ್ತು ಎಲ್ಲವನ್ನೂ ಮೀರಿರುವ ವಸ್ತು. ಈ ಚಿತ್ಸಾಗರದಲ್ಲಿ ಅನೇಕ ಅಲೆಗಳಂತೆ ಬ್ರಹ್ಮಾಂಡಗಳು ಉದ್ಭವಿಸಿ, ಪರಿಣಮಿಸಿ, ಲಯವಾಗುತ್ತವೆ. ಅನಂತ ಚಿದಾಕಾಶವು ಎಲ್ಲ ಪರಿಣಾಮಗಳಿಗೆ ಅವಕಾಶ ನೀಡುತ್ತದೆ. ನಾವೆಲ್ಲರೂ ಅಜ್ಞಾನದಲ್ಲಿ ಇರುವುದರಿಂದ ನಮಗೆ ಎಲ್ಲ ಚರಾಚರ ವಸ್ತುಗಳಲ್ಲಿರುವ ಚಿದಾವಿರ್ಭಾವದ ಅನುಭವ ಉಂಟಾಗುವುದಿಲ್ಲ. ಶ್ರೀರಾಮಕೃಷ್ಣರಂತಹ ಜ್ಞಾನಿಗಳಿಗೆ ಸದಾ ಉಂಟಾಗುತ್ತಿರುತ್ತದೆ.

ದಾರ್ಶನಿಕ ಗ್ರಂಥಗಳಲ್ಲಿ ಅರಿವು (awareness), ಜ್ಞಾನ (knowledge), ವಸ್ತುಜ್ಞಾನ (cognition) ಮುಂತಾದವುಗಳ ಪ್ರಯೋಗಗಳನ್ನು ಕಾಣುತ್ತೇವೆ. ಈ ಎಲ್ಲವನ್ನೂ **ಚಿತ್** ಒಳಗೊಂಡಿದೆ. ಅದ್ವೈತ ವೇದಾಂತಿಗಳ ಪ್ರಕಾರ ಸತ್ತೇ ಚಿತ್ ಆಗಿರುವದರಿಂದ ಆತ್ಮವೇ ಜ್ಞಾನಸ್ವರೂಪ. ಎಲ್ಲ ಮಾನಸಿಕ ಭಾವನೆ, ವ್ಯಾವಹಾರಿಕ ಜಗತ್ತಿನ ಜ್ಞಾನ ಮತ್ತು ಪಾರಮಾರ್ಥಿಕ ಜ್ಞಾನ ಈ **ಚಿತ್ ಪರಿಣಾಮ**. 'ಮೋಟುಮರದಲ್ಲಿ ಪುರುಷ ನಿಶ್ಚಯವು'* ಎಂಬ ದೃಷ್ಟಾಂತ ಮಾತ್ರದಿಂದ ಮನುಷ್ಯನ ಧರ್ಮವು ಮೋಟುಮರದ್ದಾಗುವುದಿಲ್ಲ. ಮೋಟುಮರದ ಧರ್ಮವು ಮನುಷ್ಯನದೆಂದೂ ಆಗುವುದಿಲ್ಲ. ಹಾಗೆಯೇ ಚೈತನ್ಯದ ಧರ್ಮವು ದೇಹಾದಿಗಳದ್ದಲ್ಲ. ದೇಹಾದಿ ಧರ್ಮಗಳು ಚೈತನ್ಯದ್ದಾಗುವುದಿಲ್ಲ. ಹುಟ್ಟು-ಸಾವು, ಸುಖ-ದುಃಖ, ಲಾಭಾಲಾಭ ಮುಂತಾದವುಗಳು ಅವಿದ್ಯೆಯಿಂದ ಕಲ್ಪಿತವಾಗಿರುವುದರಿಂದ ಆತ್ಮನ ಧರ್ಮಗಳು ಎಂಬುದು ಯುಕ್ತವಾಗುವು

* ಮೋಟುಮರವನ್ನು ಕಂಡಾಗ ಅದು ಮನುಷ್ಯನೆಂಬ ಭ್ರಮೆ ಉಂಟಾಗುವುದು. ಆದರೆ ಸತ್ಯ ತಿಳಿದ ನಂತರ ಅದು ಮರವೆಂಬ ಜ್ಞಾನ ಖಚಿತವಾಗಿ ನೆಲೆನಿಲ್ಲುವುದು. ಇದೇ ರೀತಿ ದೇಹ, ಇಂದ್ರಿಯ, ಮನಸ್ಸುಗಳೇ ತಾನೆಂದು ತಿಳಿದ ಮನುಷ್ಯನು ತನ್ನ ನೈಜಸ್ವರೂಪವಾದ ಆತ್ಮವನ್ನು ಅರಿಯುವುದಿಲ್ಲ. ಅದು ಅರಿವಾದೊಡನೆ ಅವನು ತಾನು ದೇಹ, ಮನಸ್ಸು ಇತ್ಯಾದಿಗಳೆಂಬ ಭ್ರಮೆಯನ್ನು ಹೊಂದುವುದಿಲ್ಲ. ಇದೇ ದೃಷ್ಟಾಂತ.

ದಿಲ್ಲ. ಆದ್ದರಿಂದಲೇ ಅಜ್ಞಾನವು ಅನ್ಯೋನ್ಯ ಅಧ್ಯಾಸನಿರಾಸದಿಂದ ನಿವಾರಣೆಯಾಗುತ್ತದೆ. ಎಲ್ಲಾ ಜ್ಞಾನಗಳ ಮೂಲ ಚಿದ್ವಸ್ತುವೇ. ಎಲ್ಲಾ ಜ್ಞಾನವೃತ್ತಗಳ ಏಕೈಕ ಕೇಂದ್ರಬಿಂದು - **ಚಿತ್.** ಈ ಜ್ಞಾನ ವೃತ್ತದ ಬೇರೆ ಬೇರೆ radiusನಲ್ಲಿ ನಿಂತು ಜ್ಞಾನದ ಅರಿವು, ನಿರ್ಧಾರ, ಮುಂತಾದ ವ್ಯಾಪಾರಗಳನ್ನು ಪುರುಷ ಮಾಡುತ್ತಾನೆ. ಒಬ್ಬನಿಗೆ ಅರಿವು ಹೇಗೆ ಆಗುವುದು? ಅವನಿಗೆ ಯಾವುದಾದರೂ ಉಪಕರಣ ಅಥವಾ ನಿರ್ದಿಷ್ಟವಾದ ವ್ಯವಸ್ಥೆಯ (instrument and structured system) ಮೂಲಕ 'ನಾನು ಇದ್ದೇನೆ', 'ನಾನು ವ್ಯವಹರಿಸುತ್ತಿದ್ದೇನೆ' ಎಂಬ ಜ್ಞಾನವಾಗುತ್ತದೆಯೆ? ಯಾವುದೇ ವಿಷಯ ವಸ್ತುಗಳ ಜ್ಞಾನವು ನಮಗೆ ಉಂಟಾದಾಗ, ನಮ್ಮ ನಿಜ ಸ್ವರೂಪಕ್ಕಿಂತ ಅನ್ಯವಾದದ್ದರ ಸಹಾಯದಿಂದ ಅರಿಯು ತ್ತಿದ್ದೇವೆಯೆ? ಹಾಗೇನಾದರೂ ಆದಲ್ಲಿ ತನಗಿಂತ ಭಿನ್ನವಾದ ವಸ್ತುಗಳ ಸಹಾಯದಿಂದ ಜ್ಞಾನವಾಗುತ್ತಿದೆ ಎಂದಾಗುವುದು. ಹಾಗೆ ಉಂಟಾದ ಜ್ಞಾನವು ಆ ಉಪಕರಣದ, ವ್ಯವಸ್ಥೆಯ ಪ್ರಾಮಾಣಿಕತೆ, ಯೋಗ್ಯತೆ, ಸ್ವಾಮಿನಿಷ್ಠತೆಯನ್ನು (loyalty) ಅವಲಂಬಿಸಿರುತ್ತವೆ. ಅವುಗಳು ದೊರಯದಿರುವಾಗ ಮೂಢ ಸ್ಥಿತಿಯಲ್ಲಿ ತೊಳಲಾಡ ಬೇಕಾದ ಪರಿಸ್ಥಿತಿಯು ಉಂಟಾದೀತು. ಇವುಗಳು ತಂದೊಡ್ಡುವ ಜ್ಞಾನವನ್ನು ಪ್ರಮಾಣೀಕರಿಸಲು ಕೂಡ ಸಾಧ್ಯವಾಗದ ಸ್ಥಿತಿ ಉಂಟಾ ಗುವುದು. ಆಗ ಪ್ರತಿಬಿಂಬಿತ ಚೈತನ್ಯವು ಪರಾವಲಂಬ ಜೀವಿಯಂತೆ (parasite) ಅನ್ಯ ವಸ್ತುವನ್ನು ಅಸ್ತಿತ್ವಕ್ಕೆ ಅವಲಂಬಿಸಿದಂತಾಗು ವುದು. ಎಲ್ಲಿ ಅವಲಂಬನೆಯೋ ಅಲ್ಲಿ ಅಭಯವೆಲ್ಲಿ, ಸ್ವಾತಂತ್ರ್ಯವೆಲ್ಲಿ! ಜ್ಞಾನವೆಂಬುದು ಸ್ವರೂಪವಾಗಿಲ್ಲದಿದ್ದಲ್ಲಿ ನಮಗೆ ಸಾಮಾನ್ಯ ಜ್ಞಾನ ವಾಗುವುದೂ ಇಲ್ಲ. **ದೃಕ್** ಆದ ನಮಗೂ ಆ **ದೃಶ್ಯ**ವಾದ ವಸ್ತು ವಿಗೂ ಯಾವ ಅಸ್ತಿತ್ವವೂ ಇರುವುದಿಲ್ಲ. ಆದ್ದರಿಂದ ಅಸ್ತಿತ್ವ, ಜ್ಞಾನ, ಅಭಯ, ಮತ್ತು ಸ್ವಾತಂತ್ರ್ಯ ಎಲ್ಲವೂ ಒಂದಕ್ಕೊಂದು ಬೆಸೆದು ಕೊಂಡಿರುವವು. ಇವುಗಳ ಸ್ವಭಾವವೇ ಆನಂದ. ಆದ್ದರಿಂದ ಪರಮಾ ರ್ಥತಃ ಜೀವನು ಆಗಲೇ ಎಲ್ಲ ಜ್ಞಾನವನ್ನು ತನ್ನಲ್ಲಿ ಹುದುಗಿಸಿ ಕೊಂಡಿರುವ ಸಚ್ಚಿದಾನಂದನು. ಆದ್ದರಿಂದಲೇ ಭಗವದ್ಗೀತೆಯಲ್ಲಿ ನುಡಿದಿರುವುದು, **ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ-** 'ಜ್ಞಾನಕ್ಕಿಂತ ಪರಿಶುದ್ಧವಾದ ಅನ್ಯ ವಸ್ತುವಿಲ್ಲ' ಎಂದು.

ವೇದಾಂತಿಗಳ ಪ್ರಕಾರ ವ್ಯಾವಹಾರಿಕ ಜಗತ್ತಿನ ಜ್ಞಾನವು ಮಿಥ್ಯಾ ಜ್ಞಾನವಾದದ್ದರಿಂದ ವ್ಯಾವಹಾರಿಕ ಜಗತ್ತಿನಲ್ಲಿ ನಾವು ಪ್ರತಿ ಕ್ಷಣವೂ ತಿಳಿಯುವ ಘಟಾದಿ ಜ್ಞಾನವು ಅಪ್ರಾಮಾಣ್ಯವೇ, ಅಂದರೆ ಜ್ಞಾನ ವಲ್ಲವೇ ಎಂಬ ಪ್ರಶ್ನೆಯನ್ನು ಕೇಳಬಹುದು. ಸಿದ್ಧಾಂತಿಯ ಉತ್ತರ ವೇನೆಂದರೆ ಬ್ರಹ್ಮಸಾಕ್ಷಾತ್ಕಾರದ ನಂತರ ಮಾತ್ರ ಈ ಘಟ-ಪಟಾದಿ ಜ್ಞಾನವು ಬಾಧಿತವಾಗುತ್ತದೆ. **ಸದೇವ ಸೋಮ್ಯೇದಮಗ್ರ ಆಸೀ ದೇಕಮೇವಾದ್ವಿತೀಯಂ।...** *(ಛಾಂ. ೬.೨.೧).* **ಸತ್** ಎಂದರೆ ಕೇವಲ ಇರುವುದು. ಸೂಕ್ಷ್ಮವೂ, ನಿರ್ವಿಶೇಷವೂ, ಸರ್ವಗತವೂ, ಒಂದೇ ಆದ, ಮತ್ತೊಂದಕ್ಕೆ ಅಂಟಿಲ್ಲದ, ಯಾವ ಅವಯವವೂ ಇಲ್ಲದ ವಸ್ತು. ಸರ್ವ ವೇದಾಂತಗಳಿಂದಲೂ ತಿಳಿದು ಬರುವ ಸಚ್ಚಿ ದಾನಂದ ವಸ್ತು. **ಯತ್ರ ಹಿ ದ್ವೈತಮಿವ ಭವತಿ ತದಿಹ ಇತರ ಇತರಮ್ ಪಶ್ಯತಿ... ವಿಜ್ಞಾತಾರಮರೇ ಕೇನ ಕಂ ವಿಜಾನೀಯಾದಿತಿ** *(ಬೃ. ೨.೪.೧೪)* **ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ಕೇನ ಕಂ ಪಶ್ಯೇತ್ ಕೇನ ಕಂ ವಿಜಾನೀಯಾತ್** *(ಬೃ. ೪.೫.೧೫)* - ಇವುಗಳ ಹಿಂದಿನ ಶ್ಲೋಕಗಳಲ್ಲಿ ಯಾಜ್ಞವಲ್ಕ್ಯನು ಉದಾಹರಿಸುತ್ತಾನೆ. ಉಪ್ಪಿನ ಹರಳು (ಸೈಂಧವಘನ) ನೀರಿನಿಂದ ಹೊರಗಿದ್ದಾಗ ತನ್ನ ಆಕಾರವನ್ನು ಕಾಪಾಡಿಕೊಳ್ಳುವುದು. ತನ್ನ ಕಾರಣವಾದ ಸಮುದ್ರದ ನೀರಿನಲ್ಲಿ ಅದನ್ನು ಎಸೆದಾಗ ಗುರುತಿಲ್ಲದಂತೆ ಅದು ಕರಗಿ ಹೋಗು ವುದು. ಈಗ ಎಂತಹ ಅನುಭವಿಯೂ ಆ ನೀರನ್ನು ಮತ್ತೆ ಅದೇ ಹರಳಿನ ಆಕಾರಕ್ಕೆ ತರಲಾರ. ಹಾಗೆಯೇ ಪರಮಾತ್ಮನಿಗಿಂತ ಬೇರೆ ಯಾದ ಭಾವವನ್ನು ಹೊಂದಿರುವ ಆತ್ಮನು *(ಬೃ. ೪.೫.೧೩)* ಉದಕ ಚಂದ್ರನಂತೆ (ನೀರಿನಲ್ಲಿರುವ ಚಂದ್ರನ ಪ್ರತಿಬಿಂಬ, ಚಂದ್ರನು ಅಲೆಗಳ ಜೊತೆ ಚಲಿಸಿದಂತೆ ಕಾಣುವಂತೆ) ನೋಡುವುದು, ಕೇಳು ವುದು ಮುಂತಾದ ವ್ಯಾಪಾರಗಳನ್ನು ಮಾಡುತ್ತಾನೆ. ಈ ಅವಿದ್ಯಾ ಅವಸ್ಥೆಯಲ್ಲಿ ಕ್ರಿಯಾ-ಕಾರಕ ಫಲಗಳನ್ನು ಹೊಂದಿದವನಾಗಿರು ತ್ತಾನೆ. ಯಾವಾಗ ಆತ್ಮನನ್ನು ಬಿಟ್ಟು ಬೇರೆ ಯಾವುದೂ ಇಲ್ಲವೆಂಬ ಜ್ಞಾನವಾಗುತ್ತದೊ ಆಗ ಯಾವ ವ್ಯಾಪಾರವೂ ಇರುವುದಿಲ್ಲ. ಹೀಗಾಗಿ ಜ್ಞಾನಿಗೆ ಕ್ರಿಯೆ ಕರಣಾದಿ ಕಾರಕಗಳು ಹೊಂದುವುದಿಲ್ಲ. ಸೈಂಧವಘನದಂತೆ **ಪ್ರಜ್ಞಾನಘನ**ನಾಗಿ ತನ್ನ ಸ್ವಜ್ಞಾನದಲ್ಲಿ ಅಚಲ ವಾಗಿ ನೆಲೆಗೊಂಡಿರುತ್ತಾನೆ.

ಕೇನೋಪನಿಷತ್ತಿನಲ್ಲಿ ಶಿಷ್ಯನು ಪ್ರಶ್ನಿಸುತ್ತಾನೆ: ''ಯಾರ ಇಚ್ಛೆ ಯಿಂದ ಮನಸ್ಸು ತನ್ನ ವಿಷಯಗಳೆಡೆಗೆ, ಪ್ರಾಣವು ತನ್ನ ವ್ಯಾಪಾರ ದೆಡೆಗೆ, ಕಣ್ಣು-ಕಿವಿಗಳು ದೃಶ್ಯ ಶ್ರಾವ್ಯವನ್ನು ಅನುಸರಿಸುತ್ತವೆ? ಯಾವ ಆ ಜ್ಯೋತಿರ್ಮಯನಾದ ದೇವನು ಇವುಗಳನ್ನು ಹೊರ ವಿಷಯಗಳಿಗೆ ಜೋಡಿಸುತ್ತಿರುವನು? ಅಂದರೆ ಮನಸ್ಸು ಮುಂತಾದ ಕರಣ ಸಮೂಹವನ್ನು ಯಾರು ಪ್ರೇರೇಪಿಸಿ ಕಳುಹಿಸುತ್ತಾರೆ?'' ಇಲ್ಲಿ ಅನೇಕ ವ್ಯಾಪಾರಗಳು ಯಾರೋ ಒಬ್ಬ ಅನ್ಯ ವ್ಯಕ್ತಿಗಾಗಿ ನಡೆಯ ಬೇಕು - ಎಂಬುದೇ ಜಿಜ್ಞಾಸೆ. ಸಾಂಖ್ಯರ ಪ್ರಸಿದ್ಧ ಯುಕ್ತಿ **ಸಂಘಾತ ಪರಾರ್ಥತ್ವಾತ್** - ಬೇರೆ ಬೇರೆ ವಸ್ತುಗಳ ಒಟ್ಟುಗೂಡುವಿಕೆಯು ಬೇರೊಂದರ, ಮತ್ತೊಬ್ಬನ ಭೋಗೋದ್ದೇಶಕ್ಕಾಗಿ ಎಂದು. ಹೇಗೆ ಮನೆಯಲ್ಲಿರುವ ವಿವಿಧ ವಸ್ತುಗಳು ಗೃಹಾಧಿಪತಿಯ ಉಪಯೋಗ ಕ್ಕಾಗಿಯೋ ಹಾಗೆಯೇ ಈ ದೇಹೇಂದ್ರಿಯಗಳಲ್ಲಿ ಮೇಲೆ ಹೇಳಿದ ಇಷ್ಟೊಂದು ಕಾರ್ಯಗಳು ಯಾರ ಇಚ್ಛೆಯಿಂದ, ಯಾರಿಗಾಗಿ, ಎಂಬರ್ಥದಲ್ಲಿ ಶಿಷ್ಯನ ಪ್ರಶ್ನೆ. ಅದಕ್ಕೆ ಗುರುವಿನ ಉತ್ತರ, ಶ್ರೋತ್ರ ಮುಂತಾದವುಗಳಿಗೆ ವಿಷಯವನ್ನು ತಿಳಿಸುವ ಸಾಮರ್ಥ್ಯವು ಚೈತನ್ಯ ರೂಪವೂ, ನಿತ್ಯವೂ, ಮತ್ತೊಂದರೊಂದಿಗೆ ಸೇರಿಕೊಳ್ಳದೆ ಇರುವ, ಎಲ್ಲದಕ್ಕೂ ಒಳಗಿರುವ ಆತ್ಮಜ್ಯೋತಿಯಿಂದಲೇ ಉಂಟಾಗುತ್ತಿರು ವುದು. ಆ ಚಿತ್ ಬೆಳಕಿನಿಂದಲೇ ಎಲ್ಲ ಅರಿಯುವಿಯುಕೆಯ ವ್ಯಾಪಾರವಾಗುತ್ತಿರುವುದು. **ಆತ್ಮನೈವಾಯಂ ಜ್ಯೋತಿಷಾಸ್ತೇ...** *(ಬೃ.೪.೩.೬)*, **ತಸ್ಯ ಭಾಸಾ ಸರ್ವಮಿದಂ ವಿಭಾತಿ** *(ಮುಂ. ೨.೨.೧೦)*, **ನಿತ್ಯೋऽನಿತ್ಯಾನಾಂ ಚೇತನಶ್ಚೇತನಾನಾಮ್** *(ಕಠ ೨.೨.೧೩)*, **ಯದಾದಿತ್ಯಗತಂ ತೇಜೋ ಜಗದ್ಭಾಸಯತೇऽಖಿಲಂ** *(ಗೀ. ೧೫.೧೨),* **ಕ್ಷೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶಯತಿ ಭಾರತ** *(ಗೀ. ೧೩.೩೩)* ಮುಂತಾದ ಶ್ರುತಿ ಸ್ಮೃತಿ ವಾಕ್ಯಗಳು ಇದಕ್ಕೆ

ಪ್ರಮಾಣ. ಜ್ಞಾನಿಗಳ ಬುದ್ಧಿಗೆ ಮಾತ್ರ ಗೋಚರವಾಗಿಯೂ, ಎಲ್ಲಕ್ಕಿಂತಲೂ ಒಳಗಿರುವ ಕೂಟಸ್ಥವಾದ ಶ್ರೋತ್ರಾದಿಗಳಿಗೂ ಶ್ರೋತ್ರವಾಗಿದ್ದುಕೊಂಡು ಅವುಗಳ ಸಾಮರ್ಥ್ಯಕ್ಕೂ ನಿಮಿತ್ತವಾಗಿರುವ ಆ ಆತ್ಮವೇ ಎಲ್ಲವನ್ನೂ ಅರಿಯುತ್ತಿರುವ ಚಿತ್ಸ್ವರೂಪ. ಆದರೆ ಮನಸ್ಸು, ಶ್ರೋತ್ರ ಚಕ್ಷುರಾದಿಗಳು ಈ ಆತ್ಮನ ಬಳಿಗೆ ಹೋಗಲಾರವು. ಅಂದರೆ ಇವುಗಳಿಗೆ ಆತ್ಮನನ್ನು ವಿಷಯವನ್ನಾಗಿ ಮಾಡಿಕೊಳ್ಳುವ, ಅದನ್ನು ಅರಿಯುವ ಸಾಮರ್ಥ್ಯವಿಲ್ಲ. ಸೂರ್ಯನಿಂದ ಪಂಜನ್ನೋ, ಹಣತೆಯನ್ನೋ ಪ್ರಕಾಶಿಸಬಹುದು. ಆದರೆ ಇವುಗಳಿಗೆ ಸೂರ್ಯನನ್ನು ಬೆಳಗುವ ಸಾಮರ್ಥ್ಯವಿರುವುದಿಲ್ಲ.

ಹೀಗೆಂದ ಮಾತ್ರಕ್ಕೆ ಸಂಸಾರ ದಶೆಯಲ್ಲಿ ವ್ಯಾವಹಾರಿಕ ಅರಿಯುವಿಕೆಯು ಬಾಧಿತವಾಗುವುದಿಲ್ಲ. ಎಲ್ಲ ಪರಿಮಿತ ಜ್ಞಾನವೂ ಸಹ ಚಿತ್‌ನ ಆಭಾಸವಾದ ಚೈತನ್ಯದ ಮೂಲಕವೇ ಉಂಟಾಗುತ್ತದೆ. ಚೈತನ್ಯವು ಅನಾದಿಯಾಗಿದ್ದರೂ ಅದಕ್ಕೆ ಅನಿತ್ಯವಾದ ಚಕ್ಷುರಾದಿ ಕರಣಗಳು ಜ್ಞಾನಸಾಧನವಾಗುವುದು ಹೇಗೆ? **ಯತ್ರ ಹಿ ದ್ವೈತಮಿವ ಭವತಿ ತದಿತರ ಇತರಂ ಪಶ್ಯತಿ** *(ಬೃ. ೨.೪.೧೪).* ಎಲ್ಲಿಯವರೆಗೂ ಒಂದಲ್ಲ, ಎರಡು ಮತ್ತು ಇನ್ನಷ್ಟು ಎಂಬ ಅಂತಃಕರಣ ಸ್ಥಿತಿ ನಮಗೆ ಇದೆಯೋ ಆಗ ಇನ್ನೊಂದು ವಸ್ತುವನ್ನು ತಿಳಿಯುವ ವ್ಯಾಪಾರವು ಇದ್ದೇ ಇರುತ್ತದೆ. ಚೈತನ್ಯವು ಅನಾದಿಯಾಗಿದ್ದರೂ ಅದನ್ನು ವ್ಯಕ್ತಪಡಿಸುವ ಅಂತಃಕರಣ ವೃತ್ತಿಯು ಇಂದ್ರಿಯಸನ್ನಿಕರ್ಷದ ಮೂಲಕ **ಅರಿಯುವುದು** ಎಂಬ ಪರಿಚ್ಛಿನ್ನ ಜ್ಞಾನವನ್ನು ಉಂಟುಮಾಡುತ್ತದೆ. ಈ ವಿಶಿಷ್ಟ ಚೈತನ್ಯವು (ಚಿದಾಭಾಸ) ವೃತ್ತಿಜ್ಞಾನೋತ್ಪತ್ತಿಯನ್ನು ಉಂಟುಮಾಡಲೋಸುಗವೋ ಎಂಬಂತೆ ಪರಿಚ್ಛಿನ್ನತೆಯನ್ನು ಹೊಂದುತ್ತದೆ. ಇದನ್ನೇ ವಿವರಣ ಶಾಖೆಯ ಮೂಲಪುರುಷರಾದ, ಪಂಚಪಾದಿಕಕಾರರಾದ ಪದ್ಮಪಾದರು **ಅಂತಃಕರಣವೃತ್ತೌ ಜ್ಞಾನತ್ವೋಪಚಾರಾತ್** ಎಂದು ತಿಳಿಸಿದ್ದಾರೆ. ಇಂತಹ ಸ್ಥಿತಿಯಲ್ಲಿ ಹೇಗೆ ಸಾಮಾನ್ಯ ಇಂದ್ರಿಯಜ್ಞಾನವು ನಮಗೆ ಉಂಟಾಗುತ್ತದೆ ಎಂಬುದನ್ನು *'ವೇದಾಂತ ಪರಿಭಾಷಾ'* ಕರ್ತೃವಾದ ಧರ್ಮರಾಜ ಅಧ್ವರೀಂದ್ರರು ಉತ್ತರಿಸುತ್ತಾರೆ. ಸಾಮಾನ್ಯವಿಷಯಜ್ಞಾನವು ನಮಗೆ ಈ ಕ್ರಮದಿಂದ ಉಂಟಾಗುತ್ತಿದೆ. ಹೇಗೆ ಕೆರೆಯ ನೀರು ತೂಬಿನಿಂದ ಹೊರಬಂದು ಕಾಲುವೆಯ ಮೂಲಕ ಹರಿದು ಹೊಲ ಮುಂತಾದವುಗಳನ್ನು ಪ್ರವೇಶಿಸಿ ಗೋಲಾಕಾರ, ಚತುಷ್ಕೋಣಾಕಾರ, ನಕ್ಷತ್ರಾಕಾರ ಮುಂತಾದ ಹಳ್ಳಗಳ ಆಕಾರವನ್ನು ಹೊಂದುವುದೋ ಹಾಗೆಯೇ ಚೈತನ್ಯಜ್ಯೋತಿಯಿಂದ ಯುಕ್ತವಾದ ಅಂತಃಕರಣವು ಚಕ್ಷುರಾದಿಗಳ ಮೂಲಕ ಹೊರಬಂದು ಮಡಕೆ ಮುಂತಾದ ಆಕಾರವಾಗಿ ಪರಿಣಾಮ ಹೊಂದುತ್ತದೆ. ಈ ಪರಿಣಾಮವೇ ಯೋಗವು ತಿಳಿಸುವ ಅಂತಃಕರಣವೃತ್ತಿ. ಅನುಮಾನ ಮತ್ತು ಸ್ವಪ್ನಗಳ ಜ್ಞಾನವಾಗುವಾಗ ಇಂದ್ರಿಯಗಳ ಬಹಿರ್ವ್ಯಾಪಾರವಿಲ್ಲದೆ ಅಂತರ್ವೃತ್ತಿಯಿಂದ ಜ್ಞಾನಾನುಭವವುಂಟಾಗುತ್ತದೆ. ಇದೇ ಕ್ರಮದಲ್ಲಿ ಎಲ್ಲಾ ವಸ್ತುಗಳ ಆಲೋಚನೆಗಳಿಂದ ಉಂಟಾಗುವ ಜ್ಞಾನವು ಅಂತಃಕರಣದಲ್ಲಿ ಚೈತನ್ಯಜ್ಯೋತಿಯ ಪ್ರತಿಬಿಂಬದಿಂದ ಎಡೆಬಿಡದೆ ನಡೆಯುತ್ತದೆ. ಹಾಗೆಯೇ ಸುಖ-ದುಃಖಾದಿ ವೃತ್ತಿಗಳು ಮನಸ್ಸಿನಲ್ಲಿ ಉಂಟಾದಾಗ ಚೈತನ್ಯವು ಆಯಾ ಭಾವನೆಗಳಿಂದ ನಿಯಮಿತವಾಗಿ 'ನಾನು ಸುಖಿ' 'ನಾನು ದುಃಖಿ' ಎಂಬ ಜ್ಞಾನವಾಗುತ್ತದೆ. ಚೈತನ್ಯವು ವ್ಯಾವಹಾರಿಕ ಜಗತ್ತಿನ ಅರಿಯುವಿಕೆಯಲ್ಲಿ ನಿಯಮಿತವಾದಾಗ (limited) ನಾನಾ ಜ್ಞಾನವು ಉಂಟಾಗುತ್ತದೆ. ಸತ್ತ್ವಗುಣವು ಪ್ರಕಾಶಕ, ಅದರಿಂದ ನಮಗೆ ಪರಿಪೂರ್ಣವಾದ ಜ್ಞಾನ ಉಂಟಾಗುವುದು. ಯಾವಾಗ ಸತ್ತ್ವಗುಣವು, ರಜಸ್ಸು ಮತ್ತು ತಮೋಗುಣಗಳೊಡನೆ ಸಮ್ಮಿಶ್ರಣವಾಗುವುದೋ ಆಗ ಚಿತ್ತವು ಮಲಿನಗೊಂಡು ಕರ್ಮ ಮತ್ತು ಅಜ್ಞಾನವನ್ನು ಜೀವನಿಗೆ ಉಂಟುಮಾಡುತ್ತದೆ. ಸತ್ತ್ವ, ರಜಸ್ಸು ಮತ್ತು ತಮೋಗುಣಗಳ ಪ್ರಮಾಣಾನುಸಾರ ನಮ್ಮ ಆತ್ಮಜ್ಞಾನ ಪ್ರಮಾಣ ನಿಂತಿದೆ. ದ್ವೈತವು ನಾಶವಾದಾಗ ಚಿದೇಕಜ್ಞಾನವು ಉಂಟಾಗುತ್ತದೆ. ಒಟ್ಟಿನಲ್ಲಿ ಇಂದ್ರಿಯಗಳ ಸಂಯೋಗದ ಮೂಲಕ ಉಂಟಾದ ಜ್ಞಾನವಾಗಲೀ, ಶುಕ್ತಿ - ರಜತ ಮುಂತಾದ ಮಿಥ್ಯಾಜ್ಞಾನವಾಗಲೀ ಮತ್ತು ಅವುಗಳ ಮೂಲಕ ಗೋಚರವಾದ ವಸ್ತುಗಳಾಗಲೀ ಈ ಎರಡಕ್ಕೂ ಚೈತನ್ಯದ ಹೊರತು ಬೇರೆ ಅಸ್ತಿತ್ವವಿಲ್ಲ. ಅಖಂಡವಾದ ಚಿದ್ವಸ್ತುವು ವಿಷಯಿಯಾದ ಜೀವಾತ್ಮನ ಅಂತಃಕರಣದಿಂದ ನಿಯಮಿತವಾಗಿ ವಿವಿಧ ವಸ್ತುಗಳನ್ನು ತನ್ನ ಮೇಲೆಯೇ ಆರೋಪಿಸುವ ಮೂಲಕ ಅರಿಯುತ್ತಾನೆ.

ಘಟಾವಭಾಸಕೋ ದೀಪೋ ಘಟಾದನ್ಯೋ ಯಥೇಷ್ಯತೇ।
ದೇಹಾವಭಾಸಕೋ ದೇಹೀ ತಥಾऽಹಂ ಬೋಧವಿಗ್ರಹಃ॥

(ವಾಕ್ಯವೃತ್ತಿ, ೨೩)

ಮಡಕೆಯನ್ನು ಬೆಳಗುವ ದೀಪವು ಮಡಕೆಗಿಂತ ಬೇರೆ. ಹಾಗೆಯೇ ನಮ್ಮ ಸೂಕ್ಷ್ಮ-ಸ್ಥೂಲ ಆತ್ಮನು ದೇಹ ಮತ್ತು ಎಲ್ಲಾ ವಸ್ತುಗಳನ್ನು ತೋರಿಸಿಕೊಡುತ್ತಿರುವ, ದೀಪದಂತೆ ದೇಹಕ್ಕಿಂತ ಬೇರೆಯಾದ ಚೈತನ್ಯಸ್ವರೂಪನು.

ಇನ್ನು ವ್ಯಕ್ತವಾದ ಜಗತ್ತಿಗೆ ಬಂದರೆ ಸತ್ ವಸ್ತುವು ಎಲ್ಲವೂ ಆಗಿದೆ. ಸತ್- ಚಿತ್ ಎರಡು ಬ್ರಹ್ಮನ ಕಾರ್ಯವಾದರೆ, ಆನಂದವು ಅವನ ಸ್ವರೂಪ. ಚಿತ್-ವಸ್ತುವು ಎಲ್ಲವನ್ನೂ ವರಾಹನಂತೆ ಎತ್ತಿಹಿಡಿದಿರುವ, ಎಲ್ಲದರಲ್ಲಿಯೂ ಶಕ್ತಿಯನ್ನು ಪ್ರವಹಿಸುತ್ತಿರುವ, ಎಲ್ಲ ವಸ್ತುಗಳನ್ನೂ ಬೆಳಗುವ, ಎಲ್ಲ ವಸ್ತುಗಳಿಗೂ ಕಾರಣವಾದ ಮೂಲೈಕ ವಸ್ತು. ಮಣ್ಣು, ಕಲ್ಲು, ಲೋಹ ಮುಂತಾದ ಜಡ ವಸ್ತುಗಳಲ್ಲಿ ಚಿತ್ ವಸ್ತುವು ಅತ್ಯಂತ ತಮೋಗುಣಾವೃತವಾಗಿರುವುದರಿಂದ ಅತ್ಯಲ್ಪವಾಗಿ ಪ್ರಕಟವಾಗುತ್ತದೆ. ಸ್ವಶಕ್ತಿಯಿಂದ ಚಲಿಸಲೂ ಸಾಧ್ಯವಿಲ್ಲದ ಸ್ಥಿತಿಯಲ್ಲಿ ನಿಶ್ಚೇತನವಾದ ವಸ್ತುವಿನಂತೆ ಬಿದ್ದುಕೊಂಡಿರುತ್ತವೆ. ಸಸ್ಯಗಳಲ್ಲಿ ಚಟುವಟಿಕೆಯನ್ನೂ, ಬೆಳವಣಿಗೆಯನ್ನೂ, ಇಬ್ಬನಿ ಬೀಳುವಾಗ, ಸೂರ್ಯೋದಯದಲ್ಲಿ, ಮೊಗ್ಗು ಅರಳುವುದು ಮುಂತಾದ ಪ್ರಕೃತಿಯ ಕ್ರಿಯೆಗಳಲ್ಲಿ ಚಿತ್ತಿನ ಸ್ಪಂದನವನ್ನೂ ಕಾಣಬಹುದು. ಇಲ್ಲಿ ಚೇತನವು ಸಾಧಾರಣವಾಗಿ ಪ್ರಕಟವಾಗಿದೆ. ಪ್ರಾಣಿಗಳಲ್ಲಿ ಚಲನೆ, ಪ್ರಚೋದನೆ ಮತ್ತು ಪ್ರತಿಕ್ರಿಯೆ (stimulus and response), ಸ್ಮೃತಿ, ಭಾವನೆಗಳು, ಮೂಲಪ್ರವೃತ್ತಿ (instinct), ಅಸ್ತಿತ್ವ ಹೋರಾಟ, ಬುದ್ಧಿಶಕ್ತಿ ಇವುಗಳನ್ನು ಕಾಣಬಹುದು. ಆದರೆ ಮನುಷ್ಯನಲ್ಲಿ ಮಾತ್ರ ಚೈತನ್ಯವು ಪ್ರಬುದ್ಧವಾಗಿ ಆವಿರ್ಭಾವವಾಗುತ್ತದೆ. ಈ ಮನುಷ್ಯನು ಸೃಷ್ಟಿಯ ತುತ್ತತುದಿಯಲ್ಲೂ , ಚಿತ್ಸಾಗರ

ದಡದಲ್ಲಿಯೂ ನಿಲ್ಲಬಲ್ಲ ಏಕೈಕ ಸೃಷ್ಟಿಯಾಗಿದ್ದಾನೆ. ಆದ್ದರಿಂದಲೇ *ವಿವೇಕಚೂಡಾಮಣಿ* ಯ ಪ್ರಥಮ ಶ್ಲೋಕದಲ್ಲಿಯೇ ಶಂಕರರು 'ಮಾನುಷ ಜನ್ಮವು ಅತ್ಯಂತ ದುರ್ಲಭ' ವೆಂದು ಹೇಳಿರುವುದು:

(ದುರ್ಲಭಂ ತ್ರಯಮೇವೈತತ್ ದೈವಾನುಗ್ರಹಹೇತುಕಮ್।
ಮನುಷ್ಯತ್ವಂ ಮುಮುಕ್ಷತ್ವಂ ಮಹಾ ಪುರುಷ ಸಂಶ್ರಯಃ ॥)

ಚಿತ್ ಎಂಬುದನ್ನು ಎರಡು ರೀತಿಯಲ್ಲಿ ಮಾತ್ರ ಅರಿಯಲು ಸಾಧ್ಯ. ಒಂದು, ಅದರ ಪರಿಣಾಮವಾದ ಈ ಸೃಷ್ಟಿಯನ್ನು ಅರಿಯುವುದರ ಮೂಲಕ. ಎರಡು, ಅದನ್ನು ಅಧ್ಯಾತ್ಮ ಸಾಧನದ ಧ್ಯೇಯವಸ್ತುವಾಗಿಟ್ಟುಕೊಂಡು ತಿಳಿಯುವ ಮೂಲಕ. ಪ್ರತಿಯೊಂದು ರಾಸಾಯನಿಕ ವಸ್ತುವಿನಲ್ಲಿರುವ ಶಕ್ತಿ ಮತ್ತು ಎಲೆಕ್ಟ್ರೋ-ಮ್ಯಾಗ್ನೆಟಿಕ್ ತರಂಗಗಳು ಅವುಗಳಲ್ಲಿರುವ ಚೈತನ್ಯದ ಪ್ರತೀಕ. ''ನೀವು ಈ ವಿಶ್ವದ ಹಿಂದಿರುವ ರಹಸ್ಯವನ್ನು ತಿಳಿಯಬೇಕಾದಲ್ಲಿ ಶಕ್ತಿ, ತರಂಗ, ಕಂಪನ ಮುಂತಾದ ವಿಷಯಗಳ ಮೂಲಕ ಆಲೋಚಿಸಿರಿ'' ಎಂದು ನಿಕೋಲ ಟೆಸ್ಲ ಹೇಳುತ್ತಾನೆ ('' if you want to find the secrets of the universe, think in terms of energy, frequency and vibration'' – *Nikola Tesla.*) ಸಂವೇದನೆ, ಭಾವನೆ, ಅರಿಯುವ ಮತ್ತು ಆಲೋಚಿಸುವ ಮೌಲ್ಯಗಳಿಂದ ಚಿತ್ ಆವಿರ್ಭಾವವನ್ನು ಇದುವರೆಗೂ ವಿಮರ್ಶಿಸಿದೆವು. ಆದರೆ ನಾವು ಚೆನ್ನಾಗಿ ಅರಿತುಕೊಳ್ಳಬೇಕು, ಇವುಗಳಾವುದೂ ಚಿತ್ ಸ್ವರೂಪದ ಗುರುತಲ್ಲ, ಇವುಗಳಾವುವೂ ನಿತ್ಯ, ಅವಿಕಾರ್ಯ, ಕಾರಣವಾದ ಚಿದ್ವಸ್ತುವನ್ನು ವ್ಯಕ್ತಪಡಿಸಲಾರವು. ಇವೆಲ್ಲವೂ ಆ ದಿಗಂಬರ ಚಿದ್ವಸ್ತುವಿನ ಮಾಯಾ ವಸ್ತ್ರಾಭರಣ. ಶ್ರೀರಾಮಕೃಷ್ಣರಂತಹ ಕೆಲವರಿಗೆ ಈ ಜ್ಞಾನವು ಉನ್ನತ ನಿರ್ವಿಕಲ್ಪ ಸಮಾಧಿಯ ಅನುಭವದಲ್ಲಿ ಆಗುವುದು. ಈ ಅವಸ್ಥೆಯು ಎಲ್ಲ ಆಲೋಚನೆಯನ್ನು ಬಿಟ್ಟ ನಂತರ ಉಳಿಯುವ ಸತ್ಯ. *(ವರಾಹೋಪನಿಷದ್, ಅ. ೪)*

ಈ ಜಗತ್ತು ಅಸತ್ತು, ಜಡ ಮತ್ತು ದುಃಖಮಯವಾದದ್ದು, ಆದರೆ ಬ್ರಹ್ಮ ಸಚ್ಚಿದಾನಂದ ವಸ್ತು. ಅಧ್ಯಾಸದಿಂದ ಬ್ರಹ್ಮನು ಜೀವನಾಗಿ ವ್ಯವಹರಿಸುತ್ತಾನೆ. ಅದನ್ನು ಬಿಟ್ಟು ಸಚ್ಚಿದಾನಂದ ಸಾಗರದಲ್ಲಿ ಮುಳುಗಿರುವ ಮೀನಾಗಬೇಕು. ಹಾಗೆಯೇ ಶಂಕರರು ಸಹ ಸಾರಿದ್ದಾರೆ: '**ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ.**' ಈ ಬ್ರಹ್ಮವು ಸಚ್ಚಿದಾನಂದವೆಂಬ ತ್ರಿಪುಟಿಗಳ (ಮೂರು) ಸಮ್ಮಿಲನ. ಬ್ರಹ್ಮವು ಚಿತ್ ಮತ್ತು ಶಕ್ತಿ. ಈ ಚಿದಂಶವು ಒಂದೇ ಆಗಿದ್ದರೂ ಅನೇಕ ಕನ್ನಡಿಗಳಲ್ಲಿ ಸೂರ್ಯನ ಬೆಳಕು ಪ್ರತಿಬಿಂಬಿಸುವಂತೆ ಅನೇಕ ಜೀವಗಳಲ್ಲಿ ಬೆಳಗಿದಾಗ ಅನೇಕ ಚಿದ್ರೂಪಗಳು ಉಂಟಾಗುತ್ತವೆ. ಈ ಚಿತ್ ಎಲ್ಲ ವಸ್ತುಗಳನ್ನೂ ಬೆಳಗಿ ಜೀವನಿಗೆ ಜ್ಞಾನವನ್ನು ಉಂಟುಮಾಡುತ್ತದೆ. ಪರಮಾತ್ಮನು ಕೂಟಸ್ಥನೂ, ಅಸಂಗನೂ, ಚಿದ್ರೂಪನೂ ಆಗಿದ್ದಾನೆ. ಆದರೆ ದೇಹೇಂದ್ರಿಯಾದಿ ಅನ್ಯೋನ್ಯ ಅಧ್ಯಾಸದಿಂದ ಅವನು ಪುರುಷನೆನಿಸಿಕೊಳ್ಳುತ್ತಾನೆ. ಇವನೇ ಚಿದಾಭಾಸನು. ಇವನಿಗೆ ಚಿತ್ಸ್ವರೂಪನಾದ ಭಗವಂತನೇ ಅಧಿಷ್ಠಾನ, ಆಧಾರ.

ಈ ಪುರುಷನು ಅಥವಾ ಜೀವನು ಸದಾ ಚೈತನ್ಯದೊಡನೆ ಯುಕ್ತವಾಗಿದ್ದರೂ ಚಿದಾಭಾಸನೊಡನೆ ಕೂಡಿದ ಸ್ಥೂಲಸೂಕ್ಷ್ಮ ಶರೀರಗಳನ್ನು ತನ್ನ ಸ್ವರೂಪವಾಗಿ ಸ್ವೀಕರಿಸಿ, 'ನಾನು ಸಂಸಾರಿ' ಎಂದು ಅಭಿಮಾನವನ್ನು ಹೊಂದುತ್ತಾನೆ. ಈ ಭ್ರಮೆಯನ್ನು ತಿರಸ್ಕರಿಸಿ ಕೂಟಸ್ಥಚೈತನ್ಯವನ್ನು ತನ್ನ ಸ್ವರೂಪವಾಗಿ ಯಾವಾಗ ಸ್ವೀಕರಿಸುವನೋ ಆಗ 'ನಾನು ಚಿತ್ಸ್ವರೂಪನಾಗಿದ್ದೇನೆ' ಎಂದು ಅರಿಯುತ್ತಾನೆ. 'ನಾನು ಅಸಂಗನು, ಚಿತ್ಸ್ವರೂಪನು' ಎಂಬ ವೈದಿಕ ವ್ಯವಹಾರದಿಂದ ಚಿದಾಭಾಸ ವಿಲಕ್ಷಣವಾದ ವಿಜ್ಞಾನ ಉಂಟಾಗುತ್ತದೆ.

ಮಾಯೆಯು ತನ್ನಲ್ಲಾಗುವ ಚಿದಾಭಾಸದಿಂದ ಜೀವೇಶ್ವರರನ್ನು ಕಲ್ಪಿಸುತ್ತದೆ. ಸಚ್ಚಿದಾನಂದಸ್ವರೂಪವಾದ ಪರಬ್ರಹ್ಮದ ಪ್ರತಿಬಿಂಬದೊಡನೆ ಕೂಡಿದ ಪ್ರಕೃತಿಯೇ ಇಲ್ಲಿ ಮಾಯೆ ಎನಿಸಿದೆ: **ತದೈಕ್ಷತ ಬಹುಸ್ಯಾಂ ಪ್ರಜಾಯೇಯೇತಿ** *(ಛಾಂ. ೬.೩.೩)* **ಅನೇನ ಜೀವೇನ ಆತ್ಮನಾನುಪ್ರವಿಶ್ಯ** *(ಛಾಂ. ೬.೩.೨).* ಸಚ್ಚಿದಾನಂದಸ್ವರೂಪವಾದ ಪರಬ್ರಹ್ಮದ ಮಾಯೆಯೇ ಈ ಪ್ರಕೃತಿ. ಮಾಯೆಯಿಂದ ಜಗತ್ತೆಲ್ಲವೂ ಕಲ್ಪಿತವಾಗಿದೆ. ಈ ಸತ್ತ್ವರಜಸ್ತಮೋಗುಣಾತ್ಮಕವಾದ ಪ್ರಕೃತಿಯೇ ಜಗತ್ತಿಗೆ ಉಪಾದಾನ ಕಾರಣ. ಈ ಮಾಯೆಯು ತನ್ನಲ್ಲಾಗುವ ಚಿದಾಭಾಸದಿಂದ ಜೀವೇಶ್ವರರನ್ನು ಕಲ್ಪಿಸುತ್ತದೆ. ಜೀವೇಶ್ವರರಿಬ್ಬರೂ ಕಲ್ಪಿತರೇ ಆಗಿರುವರು. ಅವರಿಬ್ಬರಿಂದ ಜಗತ್ತೆಲ್ಲವೂ ಕಲ್ಪಿತವಾಗಿದೆ. ಕೂಟಸ್ಥನೂ ಅಸಂಗನೂ ಚಿದ್ರೂಪನೂ ಆದ ಪರಮಾತ್ಮನು ದೇಹೇಂದ್ರಿಯಾದಿಗಳ ಅಧ್ಯಾಸಕ್ಕೆ ಅಧಿಷ್ಠಾನವಾಗಿರುವನು. ಪಾರಮಾರ್ಥಿಕ ಸಂಬಂಧ ರಹಿತವಾದ ಅಂತಃಕರಣದಲ್ಲಿ ಈ ಚಿದ್ರೂಪನು ವರ್ತಿಸುವುದರಿಂದ, ಜೀವಭಾವವನ್ನು ಹೊಂದಿದವನಾಗಿ ಪುರುಷನೆನಿಸುವನು. ಚಿದಾಭಾಸನಾದ ಜೀವನಿಗೆ ಅಧಿಷ್ಠಾನವು ಕೂಟಸ್ಥಚೈತನ್ಯವೇ. ಕೂಟಸ್ಥಚೈತನ್ಯನ ಮೇಲೆ ಅಧ್ಯಾರೋಪವಾದ ಚಿದಾಭಾಸನೇ ಜೀವ-ಜಗತ್ತಾಗಿದ್ದಾನೆ. ಸ್ಥೂಲ-ಸೂಕ್ಷ್ಮ ಶರೀರಗಳನ್ನು ತನ್ನ ಸ್ವರೂಪವಾಗಿ ಸ್ವೀಕರಿಸಿ, 'ನಾನು ಸಂಸಾರಿ' ಎಂದು ಅಭಿಮಾನವನ್ನು ಪಡುತ್ತಾನೆ. ಭ್ರಮಾರೂಪವಾದ ಹಾವು, ಹಗ್ಗವೆಂಬ ಅಧಿಷ್ಠಾನವಿಲ್ಲದೆ ಹೇಗೆ ಉಂಟಾಗುವುದಿಲ್ಲವೋ ಹಾಗೆಯೇ ಆಧಾರಭೂತನಾದ ಕೂಟಸ್ಥನನ್ನು ಬಿಟ್ಟು ಚಿದಾಭಾಸನೊಬ್ಬನೇ ಇರಲಾರನು. ಈ ಕಲ್ಪಿತನಾದ ಜೀವನಿಗೆ ಸಂಸಾರ ಮೋಕ್ಷಗಳು ಸಿದ್ಧಿಸಲು ಚೈತನ್ಯವನ್ನು ಗ್ರಹಿಸಬೇಕು. ಈ ಸೂಕ್ಷ್ಮ-ಸ್ಥೂಲ ದೇಹದ್ವಯಸಹಿತವಾದ ಚಿದಾಭಾಸನನ್ನು ತಿರಸ್ಕರಿಸಿ, ಕೂಟಸ್ಥ ಚೈತನ್ಯವನ್ನು ತನ್ನ ನಿಜಸ್ವರೂಪವಾಗಿ ಯಾವಾಗ ಸ್ವೀಕರಿಸುವನೋ ಆಗ 'ನಾನು ಚಿದಾತ್ಮನಾಗಿದ್ದೇನೆ, ನಾನು ಅಸಂಗನಾಗಿದ್ದೇನೆ' ಎಂದು ಅರಿಯುತ್ತಾನೆ. ಮುಮುಕ್ಷುವೂ ಪಂಡಿತನೂ ಆದವನು ವೇದಾಂತ ಶ್ರವಣದಿಂದ ಉತ್ಪನ್ನವಾದ ಜ್ಞಾನದಿಂದ 'ನಾನು ಅಸಂಗನು, ನಾನು ಚಿತ್ಸ್ವರೂಪನು' ಎಂಬ ವೈದಿಕವಾಕ್ಯಗಳ ವಿಚಾರ ಮಾಡಿ, ಚಿದಾಭಾಸದಿಂದ ಚೈತನ್ಯವನ್ನು ವಿಂಗಡಿಸಿದಾಗ ಜ್ಞಾನವು ಉಂಟಾಗುವುದು. ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬವನ್ನು ತಿರಸ್ಕರಿಸಿದಾಗ ಉಳಿಯುವ ನಿಜವಾದ ವ್ಯಕ್ತಿಯಂತೆ, ಮಿಥ್ಯೆಯಾದ ಚಿದಾಭಾಸನನ್ನು ತಿರಸ್ಕರಿಸಿದಾಗ ಕೂಟಸ್ಥಚೈತನ್ಯವು ಮಾತ್ರ ಉಳಿಯುತ್ತದೆ. ಕೂಟಸ್ಥ ಚೈತನ್ಯವೇ ಚಿದಾಭಾಸನ ನಿಜಸ್ವರೂಪವಾದ್ದರಿಂದ ಪುರುಷಶಬ್ದದಿಂದ ಹೇಳಲ್ಪಟ್ಟ ಕೂಟಸ್ಥಸಹಿತನಾದ ಚಿದಾಭಾಸನು ಮಿಥ್ಯಾರೂಪದಿಂದ ತನ್ನನ್ನು ವಿಂಗಡಿಸಿ 'ನಾನು ಕೂಟಸ್ಥನು' ಎಂದು ಅರಿಯಲು ಸಮರ್ಥನಾಗು

ವನು. ಈ ಜೀವಾವಸ್ಥೆ ಮತ್ತು ಜಗತ್ತು ಎಲ್ಲವೂ ತೋರ್ಕೆಯದಾಗಿದ್ದರಿಂದ, ಅಜ್ಞಾನದಿಂದ ಜ್ಞಾನದೆಡೆಗೆ ಪಯಣಿಸಿದಾಗ ಚಿತ್ಸ್ವರೂಪ ಪ್ರಾಪ್ತಿಯಾಗುವುದು ಎಂದು ಹೇಳಬಹುದು. ಆದ್ದರಿಂದ ನಮಗೆ ಸಂಶಯವುಂಟಾಗಬೇಕು – 'ನಾನು ಸಪ್ತಧಾತುಗಳ ಸ್ಥೂಲ ದೇಹವೆ? ಅಂತಃಕರಣವುಳ್ಳ ಸೂಕ್ಷ್ಮ ಶರೀರವೆ?' – ಎಂದು. ಲೌಕಿಕರಿಗೆ 'ಈ ದೇಹವೇ ನಾನು' ಎಂಬ ಸಂಶಯ–ವಿಪರ್ಯಯ–ರಹಿತವಾದ ಜ್ಞಾನವಿರುತ್ತದೆ. ಇಂತಹ ಅತ್ಯಂತ ಜಡ ಸ್ಥಿತಿಯಲ್ಲಿ ಜ್ಞಾನಾಭ್ಯಾಸ ಸಾಧ್ಯವಿಲ್ಲ. ಅಂತಹವರು ದಕ್ಷಿಣೇಶ್ವರದ ತಮ್ಮ ಕೊಠಡಿಯಲ್ಲಿ ಬಂದು ಕುಳಿತರೆ ಶ್ರೀರಾಮಕೃಷ್ಣರು, 'ರಾಸಮಣಿಯ ಉದ್ಯಾನವನ, ದೇವಸ್ಥಾನಗಳನ್ನು ನೋಡಿ ಬನ್ನಿರಿ' ಎಂದು ಉಪದೇಶವೀಯದೆ ಕಳಿಸಿಬಿಡುತ್ತಿದ್ದರು.

ಶ್ರೀರಾಮಕೃಷ್ಣರಿಗೆ ಜಗನ್ಮಾತೆಯು ಮೂರು ಬಾರಿ ''ಭಾವಮುಖದಲ್ಲಿರು'' ಎಂದು ಆದೇಶವಿತ್ತಳು. ಚೈತನ್ಯಮಯಿಯಾದ ಎಲ್ಲ ಚೇತನಾಚೇತನ ವಸ್ತುಗಳನ್ನು ಬೆಳಗುತ್ತಿರುವ ಜಗನ್ಮಾತೆಯೇ ಇಲ್ಲಿ ಅವರಿಗೆ ಆದೇಶವೀಯುತ್ತಿದ್ದಾಳೆ, 'ಭಾವಮುಖದಲ್ಲಿರು' ಎಂದು. ಈ 'ಭಾವಮುಖ'ವೆಂದರೇನು ಎಂದು ಸ್ವಾಮಿ ಶಾರದಾನಂದರು *ಶ್ರೀರಾಮಕೃಷ್ಣ ಲೀಲಾಪ್ರಸಂಗ*ದಲ್ಲಿ ಪರಾಮರ್ಶಿಸಿದ್ದಾರೆ. ಎಲ್ಲಿಯವರೆಗೂ ನಮಗೆ ಅಹಂಬೋಧೆಯಿದೆಯೋ ಅಲ್ಲಿಯವರೆಗೂ, ವಿಶ್ವಬೋಧೆ ಉಂಟಾಗುವುದಿಲ್ಲ. ವಿಶ್ವಾಹಂತತ್ತ್ವವೇ ಜಗನ್ಮಾತೆಯ ಅಥವಾ ಈಶ್ವರನ ಅಹಂಭಾವ. ಕ್ಷುದ್ರ ಅಹಂಭಾವವನ್ನು ಸಂಪೂರ್ಣವಾಗಿ ಲಯಗೊಳಿಸಿಕೊಂಡ ಶ್ರೀರಾಮಕೃಷ್ಣರಲ್ಲಿ ವಿಶ್ವಮನಸ್ಸಿನ ಭಾವತರಂಗಗಳು ಉದ್ಭವಿಸಿ, ಕ್ರೀಡಿಸಿ, ಲಯವಾಗುತ್ತಿದ್ದವು. ವಿಶ್ವಚೈತನ್ಯ, ವಿಶ್ವಶಕ್ತಿಯ ಪ್ರತ್ಯಕ್ಷ ಅನುಭವವನ್ನು ಅವರು ಪಡೆದರು. ಆ ವಿಶ್ವಶಕ್ತಿಯನ್ನೇ ಅವರು 'ಕೃಪಾಮಯಿ ಜಗಜ್ಜನನಿ' ಎಂದು ಕರೆದರು. ನಿರ್ಗುಣ ಮತ್ತು ಸಗುಣಗಳ ಮಧ್ಯದಲ್ಲಿ ಯಾವ ಈ ವಿಶ್ವ ಅಹಂತತ್ತ್ವವಿದೆಯೋ ಅದೇ ಭಾವಮುಖ. ಶ್ರೀರಾಮಕೃಷ್ಣರಿಗೆ ಅಹಂಬೋಧೆಯು ಯಾವಾಗ ಹೊರಟುಹೋಗುತ್ತಿತ್ತೋ ಆಗ ಅವರು ನಿರ್ಗುಣ ಬ್ರಹ್ಮಭಾವದಲ್ಲಿ ಇರುತ್ತಿದ್ದರು. ಯಾವಾಗ ಅವರಿಗೆ ಸ್ವಲ್ಪ ಅಹಂಬೋಧೆ ಇರುತ್ತಿತ್ತೋ ಆಗ 'ಸಗುಣ ವಿರಾಟ್ ಮತ್ತು ಅದರ ಒಳಗಿರುವ ಅನಂತ ಭಾವತರಂಗಗಳು ಶ್ರೀ ಜಗನ್ಮಾತೆಯ ನಿರ್ಗುಣಭಾವದೊಡನೆಯೇ ಒಂದಾಗಿವೆ' ಎಂದು ಅನುಭವಿಸುತ್ತಿದ್ದರು. ಇಡೀ ಭೂತ–ವರ್ತಮಾನ–ಭವಿಷ್ಯದ ಸಮಸ್ತ ಬೋಧೆಯೂ ಅವರಿಗೆ ಆಗುತ್ತಿತ್ತು. ಇದು ಸಗುಣ ನಿರ್ಗುಣಗಳೆರಡನ್ನೂ ಒಳಗೊಂಡ ಸಂಪೂರ್ಣ ಜ್ಞಾನಾವಸ್ಥೆ. ಈ ಅವಸ್ಥೆಯಲ್ಲಿ ಚಿಚ್ಛಕ್ತಿಯೂ ಜ್ಞಾನಮಯಿಯೂ ಆದ ಚೇತನಳಾದ ಜಗನ್ಮಾತೆಯೇ ಜಡವಸ್ತುಗಳಲ್ಲಿರುವ ಜ್ವಾಲಾಮುಖಿ ಮುಂತಾದ ಶಕ್ತಿಯೂ, ಜಡಶಕ್ತಿಗಳ ಆತ್ಮವೂ ಆಗಿದ್ದಾಳೆಂಬ ಅರಿವುಂಟಾಗುತ್ತದೆ. ('**ಚಿಚ್ಛಕ್ತಿಶ್ಚೇತನಾರೂಪಾ ಜಡಶಕ್ತಿರ್ಜಡಾತ್ಮಿಕಾ।**' *ಲಲಿತಾಸಹಸ್ರನಾಮ, ೯೦*). ಈ ಚಿನ್ಮಯವಾದ ಭಾವಮುಖದ ಸ್ಥಿತಿಯಲ್ಲಿ ಮಹಡಿ ಮೆಟ್ಟಿಲನ್ನು ಹತ್ತಿ ಇಳಿದು ಮಾಡುವ ಬಾಲಕನಂತೆ, ಸಗುಣ–ನಿರ್ಗುಣವೆಂಬೆರಡು ದಡಗಳಿರುವ ಚಿತ್ಸರೋವರದ ಮೀನಿನಂತೆ ಶ್ರೀರಾಮಕೃಷ್ಣರು ವಿಹರಿಸುತ್ತಿದ್ದರು.

ವಿಜ್ಞಾನಮಾನಂದಂ ಬ್ರಹ್ಮ *(ಬೃ. ೩.೯.೨೮)* – ಯಾವುದು ಎಲ್ಲವೂ ತಾನೇ ಆಗಿರುವುದೋ, ಸರ್ವಭೂತಗಳ ಹೃದಯ ಗುಹೆಯಲ್ಲಿರುವುದೋ, ಸರ್ವವಿಷಯಗಳ ಅತೀತವಾಗಿರುವುದೂ, ಆನಂದವೂ ಆಗಿದೆಯೋ ಆ ಚಿತ್ ತತ್ತ್ವಕ್ಕೆ ನಮಸ್ಕಾರ.

ಓಂಕಾರವೇದ್ಯಃ ಪುರುಷಃ ಪುರಾಣೋ
ಬುದ್ಧೇಶ್ಚ ಸಾಕ್ಷೀ ನಿಖಿಲಸ್ಯ ಜಂತೋಃ।
ಯೋ ವೇತ್ತಿ ಸರ್ವಂ ನ ಚ ಯಸ್ಯ ವೇತ್ತಾ
ಪರಾತ್ಮರೂಪೋ ಭುವಿ ರಾಮಕೃಷ್ಣಃ॥

(ಶ್ರೀರಾಮಕೃಷ್ಣಸ್ತವರಾಜ, ೧)

ಇಂತಹ ಬುದ್ಧಿಸಾಕ್ಷಿಯಾದ, ಯಾವ ಚಿದ್ವಸ್ತುವನ್ನು ಶಾಸ್ತ್ರಗಳು 'ಅವಾಙ್ಮಾನಸ ಗೋಚರಮ್', ಮಾತು–ಮನಸ್ಸುಗಳಿಗೆ ನಿಲುಕದ್ದೆಂದು ಸಾರಿರುವುದನ್ನೇ ಗೋಷ್ಪದೀಕರಿಸಿದರೋ ಅಂತಹ ಶ್ರೀರಾಮಕೃಷ್ಣರಿಗೆ ನಮಸ್ಕಾರ.

ಸ್ವಾಮಿ ಸುಬೋಧಾನಂದರ ವಿಶಿಷ್ಟ ಅನುಭವ

ಪರಿವ್ರಾಜಕ ಜೀವನದ ಕಾಲದಲ್ಲಿ ಸುಬೋಧಾನಂದರು ಕೆಲವೊಮ್ಮೆ ದಾರಿ ಪಕ್ಕದ ಮರದ ಕೆಳಗೆ ನಿದ್ರಿಸುತ್ತಿದ್ದರು. ಭೂಮಿಯೇ ಹಾಸಿಗೆ, ಕೈತೋಳೇ ತಲೆದಿಂಬು. ಬಿಹಾರ ಅಥವಾ ಉತ್ತರಪ್ರದೇಶದ ಮೂಲಕ ಹೋಗುತ್ತಿದ್ದಾಗಿನ ಒಂದು ಅನುಭವವನ್ನು ಅವರು ವಿವರಿಸಿದ್ದಾರೆ: ''ಒಮ್ಮೆ ನಾನು ಪ್ರಯಾಣಮಾಡುತ್ತ ರಾತ್ರಿ ಒಂದು ಆಲದ ಮರದ ಕೆಳಗೆ ಮಲಗಿದ್ದೆ. ಸ್ವಲ್ಪ ಹೊತ್ತಾದ ಮೇಲೆ ನನಗೊಂದು ಕನಸಾಯಿತು. ವೃದ್ಧೆಯೊಬ್ಬಳು, 'ಎದ್ದೇಳು. ನಿನ್ನಿಂದಾಗಿ ಇಲ್ಲಿರುವ ಹಾವುಗಳು ತಮ್ಮ ಬಿಲಗಳಿಂದ ಹೊರಬರಲು ಆಗುತ್ತಿಲ್ಲ. ಸ್ವಲ್ಪ ಮುಂದೆ ಹೋದರೆ ಒಂದು ಪೋಲಿಸ್ ಸ್ಟೇಷನ್ ಸಿಗುತ್ತದೆ. ಅಲ್ಲಿ ನೀನು ರಾತ್ರಿಯನ್ನು ಕಳೆಯಬಹುದು' ಎಂದಂತಾಯಿತು. 'ನನಗೆ ಅಲ್ಲಿರುವುದಕ್ಕೆ ಬಿಡುತ್ತಾರೆಯೆ?' ಎಂದು ನಾನು ಕೇಳಿದೆ. ಅವಳು, 'ಹೌದು, ಅಲ್ಲಿ ಮಲಗಲು ಅವಕಾಶ ಕೊಡುತ್ತಾರೆ. ನೀನು ಬಾಗಿಲು ತಟ್ಟಿದಾಗ ಯಾರು ಎಂದು ಕೇಳುತ್ತಾರೆ. ನಾನೊಬ್ಬ ಸಾಧು ಎಂದು ನೀನು ಹೇಳು' ಎಂದಂತಾಯಿತು. ನನಗೆ ಎಚ್ಚರವಾಯಿತು. ಆ ಮುದುಕಿ ಹೇಳಿದಂತೆಯೇ ಮಾಡಿದೆ. ಪೋಲಿಸ್ ಸ್ಟೇಷನ್ ವರಾಂಡದಲ್ಲಿ ನನಗೆ ಜಾಗ ದೊರೆಯಿತು. ಮಾರನೆಯ ಬೆಳಗ್ಗೆ ಆ ಆಲದ ಮರದ ಬಳಿ ಹೋಗಿ ನೋಡಿದರೆ, ಅನೇಕ ಹಾವಿನ ಬಿಲಗಳು ಕಾಣಿಸಿದವು. ಸ್ಥಳೀಯ ಜನರು ಅಲ್ಲಿ ತುಂಬ ನಾಗರಹಾವುಗಳಿವೆ ಎಂದು ಹೇಳಿದರು. 'ಯಾರು ಆ ವೃದ್ಧೆ?' ಎಂದು ಯಾರೋ ಕೇಳಿದ್ದಕ್ಕೆ ನಾನು ಸ್ವಲ್ಪ ಹೊತ್ತು ಸುಮ್ಮನಿದ್ದು, ಬಳಿಕ 'ಅವಳೇ ಜಗನ್ಮಾತೆ' ಎಂದೆ.''

*(**'ದೇವರೊಡನೆ ಬಾಳಿದವರು'** ಭಾಗ ೧, ಪು.೬೩೬, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಪ್ರಕಟಣೆ)*

ಪವಿತ್ರತೆ ಮತ್ತು ಸಂಸ್ಕಾರ

- ಪುಷ್ಪಾ ಶೇಷಾದ್ರಿ

ಆಧ್ಯಾತ್ಮ ಜೀವನದ ಅನಿವಾರ್ಯ ಅಂಗವೇ ಪಾವಿತ್ರ್ಯ ಮತ್ತು ಮನಶ್ಶುದ್ಧಿ. ಈ ವಿಚಾರವಾಗಿ ಶಾಸ್ತ್ರಗ್ರಂಥಗಳು ಮತ್ತು ನಮ್ಮ ಪರಂಪರೆಯ ಸಾಧುಸಂತರು ಸ್ಪಷ್ಟವಾಗಿ ಹಲವು ಮೌಲಿಕವಾದ ವಿಚಾರಗಳನ್ನು ತಿಳಿಸಿಕೊಡುತ್ತಾರೆ. ಈ ವಿಷಯದ ಬಗ್ಗೆ ಬೆಳಕು ಚೆಲ್ಲುವ ಈ ಲೇಖನವನ್ನು ಬರೆದ ಲೇಖಕಿ ಮೈಸೂರಿನ ನಿವಾಸಿಹಾಗೂ ಆಶ್ರಮದ ಭಕ್ತರು. ಸರಳ ಹಾಗೂ ಸುಲಲಿತ ಶೈಲಿಯಲ್ಲಿ ಬರೆಯುವ ಅವರ ಅನೇಕ ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.

ಪವಿತ್ರತೆ ಎಂದರೆ ಶುದ್ಧತೆ. ಒಂದು ಬಿಳಿಯ ಬಟ್ಟೆಯ ಮೇಲೆ ಒಂದು ಸಣ್ಣ ಕಪ್ಪು ಕಲೆ ಇದ್ದರೆ, ಅದು ಎದ್ದು ಕಾಣುವುದು. ಅಂತೆಯೇ ನಮ್ಮ ಮನದಲ್ಲಿ ಏನಾದರೂ ಬೇಡದ ವಿಚಾರಗಳು ತುಂಬಿದ್ದರೆ, ಅದು ನಮ್ಮ ಅಪವಿತ್ರತೆಯನ್ನು ಎತ್ತಿ ತೋರಿಸುವುದು. ಮನದಲ್ಲಿ ಕಾಯಾ, ವಾಚಾ, ಮನಸಾ ಶುದ್ಧತೆ ಇದ್ದರೆ ಅದು ಪವಿತ್ರವೆನಿಸುವುದು.

ಮುಖ್ಯವಾಗಿ, ನಮ್ಮ ಆಲೋಚನೆಗಳ ಮೇಲೆ ಗಮನವಿಡಬೇಕು. ಉಪಯೋಗಕ್ಕೆ ಬಾರದ ಯೋಚನೆ, ವಿಚಾರಗಳನ್ನು ಹೊರಹಾಕಬೇಕು. ನಾವು ಎಷ್ಟು ಒಳ್ಳೆಯ ಆಲೋಚನೆ ಮಾಡಿದೆವು ಎಂಬ ಲೆಕ್ಕವನ್ನು ಪ್ರತಿದಿನ ಮಾಡುತ್ತಾ ಬಂದರೆ ಕ್ರಮೇಣ ಉಪಯೋಗವಿಲ್ಲದ ವಿಚಾರಗಳು ಕಡಿಮೆಯಾಗುತ್ತಾ ಬರುವವು, ಮತ್ತು ಮನಸ್ಸು ಪವಿತ್ರತೆಯ ಮೂಲಕ ಸಾಗುವುದು. ಇದರಿಂದ ನಾವು ಮಾಡುವ ಕಾರ್ಯ, ಆಡುವ ಮಾತು ಸಹ ಪವಿತ್ರವಾಗುವುದು.

ಅಶುದ್ಧ, ಅನಿಷ್ಟ ವಿಷಯಗಳನ್ನು ಚಿಂತಿಸುತ್ತಿದ್ದರೆ, ಕ್ರಮೇಣ ಅದು ನಮ್ಮ 'ಸಂಸ್ಕಾರ'ದ ಮೇಲೆ ಬಲವಾದ ಪರಿಣಾಮ ಬೀರುವುದು. ಇದರಿಂದ ಮನದ ನೆಮ್ಮದಿಯೂ ಕೆಡುವುದು. ಸದ್ಭಾವನೆ, ಸತ್ಕರ್ಮಗಳ ಕಡೆ ಗಮನವಿಡಬೇಕಾದರೆ ಮನದ ಪವಿತ್ರತೆ ಬಹಳ ಮುಖ್ಯ.

ಪವಿತ್ರತೆ ಎಂದರೆ, ಮನಸ್ಸು, ದೇಹ, ಇಂದ್ರಿಯಗಳ ಶುದ್ಧಿ. ದೇಹವನ್ನು ಶುಚಿಯಾಗಿಡಲು ಸುಗಂಧಭರಿತ ಸಾಬೂನನ್ನು ಉಪಯೋಗಿಸಿ ಸ್ನಾನ ಮಾಡುವಂತೆ, ಮನಸ್ಸನ್ನು ಶುಚಿಯಾಗಿಡಲು, ಒಳ್ಳೆಯ ಆಲೋಚನೆಗಳು ಬೇಕು. ಇದಕ್ಕೆ ಶಿಸ್ತಿನ ಜೀವನ ನೆರವಾಗುವುದು.

ರಾಮಕೃಷ್ಣ ಪರಮಹಂಸರ ಹೇಳಿಕೆಯಂತೆ, ದೋಣಿ ನೀರಿನ ಮೇಲಿರಬೇಕು, ಆದರೆ ನೀರು ದೋಣಿಯ ಒಳಗೆ ಇರಬಾರದು. ಅಂದರೆ, ನಾವು ಪ್ರಪಂಚದಲ್ಲಿರಬೇಕು, ಆದರೆ ಪ್ರಾಪಂಚಿಕ ವಿಷಯದಲ್ಲಿ ನಮ್ಮ ಮನಸ್ಸು ಹತೋಟಿಯಲ್ಲಿರಬೇಕು. ಮಾನವನು ಸ್ವರೂಪತಃ ಪವಿತ್ರತೆಯನ್ನು ಹೊಂದಿರುವನು. ಆದರೆ ಅಜ್ಞಾನದಲ್ಲಿ ಸಿಲುಕಿ, ತನ್ನ ನೈಜಸ್ವರೂಪವನ್ನು ಮರೆತಿರುವನು. ಆದರಿಂದ ಹೊರಬರಬೇಕಾದರೆ ಸತ್ಸಂಗ, ಧ್ಯಾನ, ಪವಿತ್ರವಾದ ಜೀವನ ನಡೆಸ ಬೇಕಾಗುವುದು. ಇದರಿಂದ ಆಧ್ಯಾತ್ಮಿಕ ಹಾದಿ ಸುಗಮವಾಗುವುದರಲ್ಲಿ ಸಂದೇಹವಿಲ್ಲ.

ಕರ್ಮ ಅಥವಾ ಕೆಲಸ ಮಾಡುವಾಗ ನಾವು ಮಾಡುತ್ತಿರುವುದು 'ಸರಿಯೇ' ಎಂದು ಗಮನವಿಡಬೇಕು. ಆದರೆ ಅದರ ಫಲದ ಕಡೆಗಲ್ಲ. ಅದೇ 'ಕರ್ಮಯೋಗ'ವೆನಿಸುವುದು. ಪತಂಜಲಿ ಹೇಳಿರುವಂತೆ ಅಹಿಂಸೆ, ಬ್ರಹ್ಮಚರ್ಯ, ಸತ್ಯಸಂಧತೆಯನ್ನು ಪಾಲಿಸಬೇಕು. ನಾವು ಪರರಲ್ಲಿ ಕೆಟ್ಟದ್ದನ್ನು ಗಮನಿಸದೇ, ಅವರಲ್ಲಿರುವ ಒಳ್ಳೆಯ ಸ್ವಭಾವವನ್ನು ವೀಕ್ಷಿಸಬೇಕು. ಇದರಿಂದ ಸಕಾರಾತ್ಮಕ ಭಾವನೆ ವೃದ್ಧಿಸುವುದು.

ಮುಸುರೆ ತೊಳೆಯಬೇಕೋ ಈ ಮನಸಿನಾ ॥ ೧ ॥
ಮುಸುರೆ ತೊಳೆಯಬೇಕು, ಕುಸು, ಕುಸು ಬಿಡಬೇಕು

'ಈಶ ಪ್ರೇರಣೆ ಎಂಬ ಹೇಮಾ ನದಿಯಲ್ಲಿ ಮುಸುರೆ ತೊಳೆಯಬೇಕು' ಎಂದು ಅನೇಕ ವರ್ಷಗಳ ಹಿಂದೆಯೇ ದಾಸರು ಹಾಡಿ ತೋರಿಸಿರುವರು.

ನಮ್ಮ ಮನದ ಕೊಳೆ, ಕ್ಲೇಶಗಳನ್ನು ತೊಳೆದುಹಾಕಬೇಕು. ಹಿಂದಿನ ಕಾಲದಲ್ಲಿ ಮುಸುರೆ ತೊಳೆಯಬೇಕಾದರೆ, ಬೂದಿಯನ್ನು

ಉಪಯೋಗಿಸುತ್ತಿದ್ದರು. ಅಂತೆಯೇ, ಮನದ ಮುಸುರೆ ತೊಳೆಯ ಬೇಕಾದರೆ, ಸಜ್ಜನಸಂಗ, ಧ್ಯಾನ, ಜಪ, ಸತ್ಕಾರ್ಯ ಆವಶ್ಯಕ. ಮನಸ್ಸಿನ ಪವಿತ್ರತೆಗೆ ಇದೂ ಒಂದು ಮಾರ್ಗ.

ಕರ್ತವ್ಯವನ್ನು ಮಾಡುತ್ತಾ ಇದ್ದರೆ ಅದೇ ಕರ್ಮವೆನಿಸುವುದು. ಕ್ರಮೇಣ ಕರ್ತವ್ಯವೇ ಸಂಸ್ಕಾರವಾಗಿ ಮಾರ್ಪಾಟಾಗುವುದು.

ಸಂಸ್ಕಾರವೆಂದರೆ

|

ಮನಸ್ಸು	**ಬುದ್ಧಿ**	**ಕರ್ಮ**
I	I	I
ಯೋಚನೆಗಳು	**ವಿವೇಕ, ವಿಚಾರ**	**ಕರ್ತವ್ಯ**

– ಇವೇ ಸಂಸ್ಕಾರವೆನಿಸುವುದು. ಅದು, ಮಾನವನು ಜನ್ಮ, ಜನ್ಮಾಂತರದಿಂದ ಕೂಡಿ ಹಾಕಿಕೊಂಡು ಬಂದಿರುವ ವಾಸನೆ. ಅದು ಒಳ್ಳೆಯದೇ ಇರಬಹುದು, ಅಥವಾ ಕೆಟ್ಟದ್ದೇ ಇರಬಹುದು.

ಪ್ರತಿ ದಿನ ನಾವು ಮಾಡುವ ಕೆಲಸ, ಚಿಂತನೆ (ಯಾವುದೇ ಆಗಲಿ) ನಮ್ಮ ಒಳ-ಮನದಲ್ಲಿ (sub-concious) ಒಂದು ಮುದ್ರೆಯಾಗಿ (imprint) ಪರಿಣಮಿಸುವುದು. ಅಂದರೆ ನಮ್ಮ ಕರ್ಮ, ಆಲೋಚನೆಗಳು ಸುಪ್ತ ಮನದಲ್ಲಿ ಬೀಜ ಬಿತ್ತಿ ಬಿಡು ವುದು. ಆದ್ದರಿಂದ ಏನೇ ಮಾಡಿದರೂ, ಎಚ್ಚರಿಕೆಯಿಂದಿರಬೇಕು. ಏಕೆಂದರೆ, ಬೀಜ ಬಿತ್ತಿದಂತೆ ಫಲ. ಮರಣದ ನಂತರ, ಜೀವವು ಈ ಸಂಸ್ಕಾರದ ಗಂಟನ್ನು ಹೊತ್ತು ಮತ್ತೊಂದು ಜನ್ಮದಲ್ಲಿ ಅದರ ಫಲ ವನ್ನು ಅನುಭವಿಸಿಯೇ ತೀರಬೇಕು.

ಒಬ್ಬ ವ್ಯಕ್ತಿ ಸಾಯುವಾಗ ಅವನ ಸಂಬಂಧಿಕನು, ''ಅವನು ಏನೇನು ಸೊತ್ತನ್ನು ಬಿಟ್ಟುಹೋಗಿದ್ದಾನೆ?'' ಎಂದು ಕೇಳುತ್ತಾನೆ.

ಆದರೆ ಯಮಧರ್ಮರಾಯ ಸತ್ತವನ ಕಡೆಗೆ ತಿರುಗಿ, ''ಇವನು ಏನೇನು ಒಳ್ಳೆಯ ಹಾಗೂ ಕೆಟ್ಟ ಕೆಲಸಗಳನ್ನು ಮಾಡಿದ್ದಾನೆ?'' ಎಂದು ಕೇಳುತ್ತಾನೆ.

ಈ ಜನ್ಮದಲ್ಲಿ ಭಗವಂತನು ಮಾನವನಿಗೆ 'ವಿವೇಕ'ಎಂಬ ಅಮೂಲ್ಯವಾದ ವರವನ್ನು ಕರುಣಿಸಿದ್ದಾನೆ. ಇಂತಹ ವಿವೇಕ, ವಿಚಾರ ಮಾಡುವ ಸಾಧ್ಯತೆ ಪ್ರಾಣಿ, ಗಿಡ, ಮರಗಳಿಗಿಲ್ಲ. ಹಿಂದೆ ಮಾಡಿದ ಕರ್ಮಗಳಿಗೆ, ಈಗ ಅನುಭವಿಸುತ್ತಿರುವ ಸುಖ, ದುಃಖ ಗಳೇ ಸಾಕ್ಷಿ. ನಮ್ಮನ್ನು ನಾವು ತಿದ್ದಿಕೊಳ್ಳುವುದಕ್ಕೆ ಈ ಜನ್ಮ ಒಂದು ಕಾರಣವಾಗಿದೆ. ಆದ್ದರಿಂದ ಸಾಧ್ಯವಾದಷ್ಟು ಈ ಜನ್ಮದಲ್ಲಿ ಒಳ್ಳೆಯ ಕೆಲಸ, ಯೋಚನೆ, ಸತ್ಕಾರ್ಯಗಳನ್ನು ಮಾಡಿ, ಪವಿತ್ರಗೊಳಿಸಿ ಕೊಂಡು, ಉತ್ತಮ ಜೀವನಕ್ಕೆ ನಾಂದಿ ಹಾಡಬೇಕು.

ಮಾನವನು ಸ್ವಭಾವದಿಂದ ಹುಟ್ಟುವ ಕರ್ಮಕ್ಕೆ ಬಂಧಿತನಾಗು ವನು. ಆ ಸ್ವಭಾವ ನಮಗೆ ಜನ್ಮ, ಜನ್ಮಾಂತರದಿಂದ ಬೆನ್ನಟ್ಟಿ ಬಂದಿರು ತ್ತದೆ. ಈ ಜನ್ಮದಲ್ಲಿ ಅದು ಮುಂದುವರಿಯುವುದು. ಸಂಸ್ಕಾರ ವೆಂಬುದು ಜೀವನದಲ್ಲಿ ಬಹಳ ಮುಖ್ಯ ಪಾತ್ರ ವಹಿಸುವುದು. ಅದರ ಸದುಪಯೋಗದಿಂದ ನಮ್ಮನ್ನು ನಾವು ಪರಿವರ್ತನೆ ಮಾಡಿ ಕೊಳ್ಳಲು ಸಾಧ್ಯ.

ಪ್ರತಿಯೊಬ್ಬರಲ್ಲಿಯೂ ಅಧ್ಯಾತ್ಮ ಜ್ಞಾನವೆಂಬುದು ಅಡಗಿದೆ. ಆದರೆ, ನಮ್ಮ ಅಜ್ಞಾನವೆಂಬ ಕವಚ ಮುಚ್ಚಿದೆ. ಅದನ್ನು ಚೇತನ ಗೊಳಿಸುವವನೇ ವಿವೇಕಿ. ಮರುಜನ್ಮದಲ್ಲಿ ಶೀಘ್ರದಲ್ಲೇ ಸಂಸ್ಕಾರದ ಬೀಜ ಮೊಳೆಯುತ್ತದೆ.

ಇಲ್ಲಿ ಶಂಕರಾಚಾರ್ಯರ ಅಧ್ಯಾತ್ಮ ಜೀವನವನ್ನು ನೆನೆಯ ಬಹುದು. ಅವರು ಅತಿ ಚಿಕ್ಕವಯಸ್ಸಿನಿಂದಲೇ ಅಧ್ಯಾತ್ಮ ಜ್ಞಾನವನ್ನು ಪಡೆದಿದ್ದರು.

ಈಗಿನ ಕಾಲದಲ್ಲಿ ಬಾಲಪ್ರತಿಭೆಗಳು ಬೇಕಾದಷ್ಟಿದ್ದಾರೆ. ಅವರಿಗೆ ಆ ಚಿಕ್ಕ ವಯಸ್ಸಿನಲ್ಲೇ ಆ ಒಂದು ಪಾಂಡಿತ್ಯ ಬರಬೇಕಾದರೆ, ಪೂರ್ವಜನ್ಮದ ಸಂಸ್ಕಾರ ಇದ್ದೇ ಇರಬೇಕು. ಉದಾಹರಣೆ: ಮ್ಯಾಂಡೋಲಿನ್ ಶ್ರೀನಿವಾಸ್, ಎಂ.ಎಸ್. ಸುಬ್ಬಲಕ್ಷ್ಮಿ ಇತ್ಯಾದಿ. ಅವರು ಚಿಕ್ಕಂದಿನಿಂದಲೇ ಸಂಗೀತದಲ್ಲಿ ಪರಿಣತರಾಗಿದ್ದರು. ಅತಿ ಜಿಪುಣನಾಗಿದ್ದ ನವಕೋಟಿನಾರಾಯಣ, ಒಂದೇ ಕ್ಷಣದಲ್ಲಿ ಎಲ್ಲ ವನ್ನೂ ತ್ಯಾಗಮಾಡಿ, ಪುರಂದರದಾಸರಾಗಿದ್ದನ್ನೂ ಇಲ್ಲಿ ನೆನೆಯ ಬಹುದು.

'ಮಾನವನ ಜನ್ಮ ದೊಡ್ಡದು, ಅದನ್ನು ಹಾನಿಗೊಳಿಸಬೇಡಿ ಹುಚ್ಚಪ್ಪಗಳಿರಾ' ಎಂಬ ದಾಸರ ಹೇಳಿಕೆಯಂತೆ, ನಾವೆಲ್ಲರೂ ಪವಿತ್ರತೆಯನ್ನು ಹೊಂದಲು ಪ್ರಯತ್ನಿಸೋಣ. ಒಳ್ಳೆಯ ಸಂಸ್ಕಾರ ವನ್ನು ಉತ್ತಮಗೊಳಿಸಲು, ಈಗ ನಮಗೆ ಒದಗಿ ಬಂದಿರುವ ಸದವಕಾಶಗಳನ್ನು ಉಪಯೋಗಿಸಿಕೊಂಡು, ಮುಂದಿನ ಜನ್ಮಕ್ಕೆ ನಾಂದಿ ಹಾಡೋಣ. ✵

ಪರಿಶುದ್ಧತೆ ಹಾಗೂ ಗ್ರಹಣಶಕ್ತಿ

ನಮ್ಮ ಮನಸ್ಸು ಎಷ್ಟು ಪರಿಶುದ್ಧವಾಗಿರುವುದೋ ನಮ್ಮ ತಿಳುವಳಿಕೆಯೂ ಅಷ್ಟೇ ಸ್ಪಷ್ಟವಾಗಿರುವುದು. ಒಬ್ಬನ ಮುಖವೇ ಅವನ ಮನಸ್ಸು ಯಾವ ಅವಸ್ಥೆ ಯಲ್ಲಿದೆ ಎಂಬುದನ್ನು ಸೂಚಿಸುವುದು. ಮನಸ್ಸು ಸ್ವಚ್ಛ ವಾಗಿದ್ದಷ್ಟೂ ಅದಕ್ಕೆ ಇತರರ ಆಲೋಚನೆಗಳನ್ನು ಗ್ರಹಿ ಸುವ ಶಕ್ತಿ ಬರುವುದು. ಇದು ರೇಡಿಯೋ ತರಂಗಗಳನ್ನು ಗ್ರಹಿಸಿದಂತೆ. ಮನಸ್ಸಿನಲ್ಲಿ ಏಳುವ ಪ್ರತಿಯೊಂದು ಆಲೋಚನೆಯೂ ಒಂದೊಂದು ಕಂಪನವನ್ನು ಉಂಟು ಮಾಡುವುದು. ಉತ್ತಮ ಗ್ರಹಣಶಕ್ತಿ ಯಿರುವ ಮನಸ್ಸು ಆ ಕಂಪನವನ್ನು ಗ್ರಹಿಸುವುದು ಹಾಗೂ ಅದು ಏಳಲು ಕಾರಣವಾದ ಆಲೋಚನೆಯನ್ನು ಅರಿತುಕೊಳ್ಳುವುದು. ಇದಕ್ಕೆ ಅಗತ್ಯವಾಗಿ ಬೇಕಾಗಿರುವುದೆಂದರೆ ಮಾನಸಿಕ ಪರಿಶುದ್ಧತೆಯೊಂದೇ.

– ಸ್ವಾಮಿ ವಿಜ್ಞಾನಾನಂದ

ಪುಸ್ತಕ ಪರಿಚಯ

ಸ್ವಸ್ಥ ಬದುಕಿಗೆ ಭಗವದ್ಗೀತೆ ... ಮತ್ತು ಸಹಸ್ರ ಕಿರಣ

ವ್ಯಕ್ತಿಯೊಬ್ಬ ಸ್ವಸ್ಥನಾಗಿದ್ದಾನೆ ಎಂದು ಹೇಳಬೇಕಾದರೆ ಅವನ ಶರೀರ ಯಾವ ವಾತಪಿತ್ತ ಕಫಗಳಿಂದ, ರಕ್ತ ಮೇದಸ್ಸು ಮಜ್ಜಾ ಸ್ನಾಯು ಅಸ್ಥಿ ಮೊದಲಾದ ಧಾತುಗಳಿಂದ ನಿರ್ಮಾಣವಾಗಿದೆಯೋ, ಅವೆಲ್ಲವೂ ಏರುಪೇರುಗಳಿಲ್ಲದೆ ಸಮವಾಗಿರಬೇಕು, ಮತ್ತು ವ್ಯಕ್ತಿಯ ಆತ್ಮ (ಚೈತನ್ಯ), ಇಂದ್ರಿಯಗಳು, ಮನಸ್ಸು ಪ್ರಸನ್ನವಾಗಿರಬೇಕು –

ಸಮದೋಷಃ ಸಮಾಗ್ನಿಶ್ಚ
ಸಮಧಾತು-ಮಲಕ್ರಿಯಃ।
ಪ್ರಸನ್ನಾತ್ಮೇಂದ್ರಿಯಮನಃ
ಸ್ವಸ್ಥ ಇತ್ಯಭಿಧೀಯತೇ ॥

– ಎಂದು ಸುಶ್ರುತ ಸಂಹಿತೆ ತಿಳಿಸುತ್ತದೆ. **'ಸ್ವಸ್ಮಿನ್ ತಿಷ್ಠತೀತಿ ಸ್ವಸ್ಥಃ'** ಎಂದು ಪದದ ಅರ್ಥವಿದೆ. 'ತನ್ನಲ್ಲಿ ತಾನು ನಿಂತಿರುವವನು' –ಹೀಗೆಂದರೇನು? ತಾನು ಯಾರು? ಮೇಲೆ ಹೇಳಿದಂತೆ ಶರೀರವೆ? ಜ್ಞಾನೇಂದ್ರಿಯಗಳಾದ ಕಣ್ಣು ಕಿವಿ ಮೂಗು ಇತ್ಯಾದಿಗಳೆ? ಮನಸ್ಸು ಬುದ್ಧಿ ಚಿತ್ತ ಅಹಂಕಾರಗಳೆ? ಹೀಗೆ ಪ್ರಶ್ನೆ ಹಾಕಿಕೊಂಡು ಉತ್ತರ ಕಂಡುಕೊಳ್ಳುತ್ತಾ ಸಾಗಿದಾಗ ಈ ಎಲ್ಲವನ್ನೂ ಮೀರಿದ ವಿಶಿಷ್ಟವಾದ 'ಚೈತನ್ಯಶಕ್ತಿ ತನು' ಎಂದು ಅರಿವಾಗುವುದು, 'ಅದರೊಳಗೇ', – ಅದರಿಂದಲೇ ವಿಸ್ತಾರ ಪ್ರಪಂಚವಾಗಿ ಇದೆಲ್ಲಾ ಆಗಿ ವಿಕಾಸಗೊಂಡಿರುವ ಆ ಮೂಲ ದೊಳಗೇ – ನೆಲೆ ನಿಲ್ಲುವುದು 'ಸ್ವಸ್ಥ'ನಾದವನ ಲಕ್ಷಣವಾಗುತ್ತದೆ.



ಕೃತಿ
ಸ್ವಸ್ಥ ಬದುಕಿಗೆ ಭಗವದ್ಗೀತೆ ... ಮತ್ತು ಸಹಸ್ರ ಕಿರಣ
ಲೇಖಕರು
ಸಿ.ಎಸ್. ಮಂಗಳಮ್ಮ
ಪ್ರಕಾಶಕರು: **ಕಾರ್ತಿಕ್ ಎಂಟರ್ ಪ್ರೈಸಸ್, ನಂ. 285/5 ಪಶ್ಚಿಮಕ್ಕೆ 5ನೇ ಕ್ರಾಸ್, ಉತ್ತರಾದಿಮಠದ ರಸ್ತೆ, ಮೈಸೂರು**
ಪುಟಗಳು : **268,**
ಬೆಲೆ : **190/-**

ಈ ಹಿನ್ನೆಲೆಯಲ್ಲಿ 'ಭಗವದ್ಗೀತೆ'ಯಲ್ಲಿ ಪ್ರತಿಪಾದಿತವಾಗಿರುವ ವಿಚಾರಗಳು ಪ್ರಪಂಚದಲ್ಲಿ, ಮಾನವಜೀವನದಲ್ಲಿ ಹಾಸುಹೊಕ್ಕಾಗಿ ಅವಿಭಾಜ್ಯವಾಗಿ ಬೆರೆತುಹೋಗಿದೆ ಎಂಬ ಅಂಶವನ್ನು–ಲೇಖಕಿ ಪೂಜ್ಯ ಶ್ರೀಮತಿ ಸಿ.ಎಸ್.ಮಂಗಳಮ್ಮನವರು, ತಮ್ಮ ತುಂಬು ಜೀವನದ ಅನುಭವದ ಮೂಸೆಯಲ್ಲಿ ಚಿಂತಿಸಿ ಚರ್ಚಿಸಿ ವಿಮರ್ಶಿಸಿ ಸರಳವಾದ ಆಡುಭಾಷೆಯಲ್ಲಿ ಏನೂ ಅರಿಯದ ಮುಗ್ಧ ಜೀವಗಳೂ ಮನಗಾಣುವಂತೆ ಈ ಕೃತಿಯಲ್ಲಿ ವಿವರಿಸಿದ್ದಾರೆ.

ಎಲ್ಲ ವಿಧ ವೈದ್ಯಕೀಯ ಶಾಸ್ತ್ರಗಳ ಸಿದ್ಧಾಂತವೂ–ಪ್ರಪಂಚದಲ್ಲಿರುವ **ಎಲ್ಲ ವಿಧ ಕಾಯಿಲೆಗಳಿಗೆ** (ನೂರರಲ್ಲಿ ತೊಂಬತ್ತರಷ್ಟು) **ಮನಸ್ಸೇ ಕಾರಣ** ಎಂಬುದು. ಆದುದರಿಂದ ನಿರೋಗಿಯಾಗಿರಲು ಅಥವಾ ಸ್ವಸ್ಥನಾಗಿರಲು **ಮನಸ್ಸನ್ನು ಚೆನ್ನಾಗಿ** ಇಟ್ಟುಕೊಳ್ಳುವುದು ಮುಖ್ಯ. ಹೀಗೆ ಮನಸ್ಸನ್ನು ಶಾಂತವಾಗಿ ನೆಮ್ಮದಿಯಾಗಿ ಇಟ್ಟುಕೊಳ್ಳಲು ಗೀತೆ ನೀಡುವ ಪಾಠಗಳನ್ನು ಲೇಖಕಿ ಅತ್ಯಂತ ಸರಳವಾದ ಮಾತುಗಳ ಮೂಲಕ ತಿಳಿಸಿಕೊಟ್ಟಿದ್ದಾರೆ. ಅರ್ಜುನನ ವಿಷಾದದ ಮೂಲಕ ಸತ್ತ ಮನಸ್ಸನ್ನು ಜಾಗೃತಗೊಳಿಸುವ ಶಿಕ್ಷಣದ ಸ್ವರೂಪವನ್ನು ಲೇಖಕಿ ವಿವರಿಸಿದ್ದಾರೆ. (ಅ) ಮನಸ್ಸು ವ್ಯಗ್ರಗೊಂಡಾಗ ಮಧುರವಾದ ಮಾತು ಹಿತವನ್ನುಂಟು ಮಾಡುತ್ತದೆ. (ಆ) ಮನಸ್ಸಿಗೆ ಘಾಸಿಯಾದರೆ ಅದರ ಮೂಲಕ್ಕೆ ಹೋಗಿ, ಅದಕ್ಕೆ ತಕ್ಕಂತೆ ಪರಿಹಾರ ಹುಡುಕಬೇಕು. (ಇ) ಕುರು (ಕ್ಷೇತ್ರ) = ಯಾರೂ ನಿಷ್ಕ್ರಿಯರಾಗಿರಬಾರದು, ಈ ಭೂಮಿ ಕರ್ತವ್ಯ ನಿರ್ವಹಿಸುವ ನೆಲೆ. (ಈ) ಮಮತೆ (ಧೃತರಾಷ್ಟ್ರ) ಕುರುಡಾಗಿರಬಾರದು, ನ್ಯಾಯಕ್ಕೆ ಬೆಲೆ ಇದೆ ಎಂದರಿತರೆ, ಅವಹೇಳನದ ಮಾತು ಕೇಳುವುದು ತಪ್ಪುತ್ತದೆ. (ಉ) ನಿಃಸ್ವಾರ್ಥದಿಂದ ಮಾಡಿದ ಸಹಾಯದಿಂದುಂಟಾಗುವ ಪ್ರಯೋಜನಕ್ಕೆ ಸಾಕ್ಷಿ ಸಂಜಯ. ಹೀಗೆ ಪ್ರತಿದಿನ ಜೀವನಕ್ಕೆ ಉಪಯೋಗವಾಗುವಂತಹ ಪಾಠಗಳನ್ನು, ಗೀತಾ ಪ್ರತಿಪಾದಿತ ವಿಚಾರಗಳನ್ನು ಲೇಖಕಿ ತಿಳಿಸುತ್ತಾ, ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ವಚನಗಳನ್ನು ದೃಷ್ಟಾಂತ ಕಥೆಗಳನ್ನೂ ಉಚ್ಚರಿಸುತ್ತಾ ಮನದಟ್ಟು ಮಾಡಿಕೊಡಲು ಈ ಕೃತಿಯಲ್ಲಿ ಯತ್ನಿಸಿದ್ದಾರೆ.

ಜೀವನ ಭಗವದರ್ಪಿತವಾದರೆ ಆನಂದಮಯವಾಗುತ್ತದೆ. ಅಂತಹ ಭಗವದರ್ಪಿತ ಬದುಕಿನ ದಿನಚರಿ ಹೇಗಿರುತ್ತದೆ ಎಂಬುದನ್ನು ಲೇಖಕಿ ತಮ್ಮ ಹಿರಿಯರ ಜೀವನದ ದೃಷ್ಟಾಂತದೊಡನೆ ತಿಳಿಸಿದ್ದಾರೆ. 'ಬ್ರಹ್ಮಚರ್ಯ'ವನ್ನು ವಿವರಿಸುತ್ತಾ ವಸಿಷ್ಠರ ಜೀವನದ ಪ್ರಸಂಗವೊಂದನ್ನು ಉದ್ಧರಿಸಿ, ''ಪ್ರತಿ ಕೆಲಸದ ಹಿಂದೆ ಭಗವಂತನನ್ನು ನೆನೆಯುತ್ತಾ ಕಾಯಕ ಮಾಡುವುದನ್ನು 'ಬ್ರಹ್ಮಚರ್ಯ' ಎನ್ನಬಹುದಲ್ಲವೆ?!'' ಎಂದು ವಿಭಿನ್ನ ರೀತಿಯಲ್ಲಿ ವಿಶ್ಲೇಷಿಸಿದ್ದಾರೆ. ಗೀತೆಯ ರಚನೆಗೆ ವ್ಯಾಸಮಹರ್ಷಿಯು ರಣಾಂಗಣವನ್ನು ಆಯ್ಕೆ ಮಾಡಿಕೊಂಡಿರುವ ಉದ್ದೇಶ – ಜಗದ್ರಣಾಂಗಣದಲ್ಲಿ ಮುಕ್ತಿ ಪಡೆಯಲು ಜೀವಿ ಯಾವ ರೀತಿಯಲ್ಲಿ ಹೋರಾಟ ನಡೆಸಬೇಕೆಂಬುದನ್ನು ತಿಳಿಸುವುದೇ ಆಗಿದೆ – ಎಂದು ಲೇಖಕಿ ಮಾರ್ಮಿಕವಾಗಿ ಚಿಂತಿಸಿದ್ದಾರೆ.

ಲೇಖಕಿ ತಮ್ಮ ಅನುಭವದ ೧೫೩೦ ಕ್ಕೂ ಹೆಚ್ಚು ಸಂಖ್ಯೆಯ ಅಮೃತಬಿಂದುಗಳನ್ನು 'ಸ್ವಸ್ಥ'ಬದುಕಿಗೆ ಸಹಕಾರಿಯಾಗಿ ನೀಡಿದ್ದಾರೆ. ದೇಹದ ಮತ್ತು ಮನಸ್ಸಿನ ಅಸ್ವಸ್ಥತೆಗೆ ಮುಖ್ಯಕಾರಣಗಳಾದ ಕಾಮ, ಕ್ರೋಧ ಲೋಭ, ನಿಃಶ್ವಾಸ, ಭಯಗಳ ನಿವಾರಣೆಗೆ ಈ ಅಮೃತ

ಬಿಂದುಗಳು ಉಪಯುಕ್ತವಾಗುತ್ತವೆ. ಇಲ್ಲಿ ಮನಸ್ಸು, ದೇವರು, ರಾಜ-ಪ್ರಜೆ, ಪ್ರಕೃತಿ, ಶಿಕ್ಷಣ, ಧರ್ಮ, ಸಮಾಜ, ಮಾನವೀಯತೆ – ಹೀಗೆ ಹಲವಾರು ವಿಷಯಗಳಿವೆ. ಲೇಖಕಿ ತನ್ನ ಜೀವನದ ವಿವಿಧ ಹಂತಗಳಲ್ಲಿ, ವಿಭಿನ್ನ ಘಟನಾವಳಿಗಳ ಹಿನ್ನೆಲೆಯಲ್ಲಿ ತಾನು ಕಂಡಕೊಂಡಂತೆಯೇ ಇವುಗಳನ್ನು ದಾಖಲು ಮಾಡುತ್ತಾ ಹೋಗಿರಬೇಕು. ಆ ಕಾರಣ ವಿಷಯಗಳು ಎಲ್ಲೆಲ್ಲೂ ಹರಡಿಕೊಂಡುಬಿಟ್ಟಿವೆ. ಈ ಬಿಂದುಗಳನ್ನು ವಿಷಯಕ್ಕೆ ಸಂಬಂಧಿಸಿದಂತೆ ಒಂದೆಡೆ ಕ್ರೋಡೀಕರಿಸಿದ್ದರೆ ಇವು ಓದುಗರಿಗೆ ಇನ್ನೂ ಹೆಚ್ಚು ವಿಶೇಷ ಪರಿಣಾಮಕಾರಿಯಾಗಿರುತ್ತಿತ್ತು. ಲೋಕಕ್ಕೆ ತನ್ನಿಂದ ಒಂದು ಸ್ಥಾಯೀ ಕೊಡುಗೆ ದೊರೆಯಬೇಕೆಂಬ ಲೇಖಕಿಯ ಭಾವ, ಉತ್ಸಾಹ ಸಕಲರಿಗೆ ಆದರ್ಶ ಮತ್ತು ಆದರಣೀಯ; ಇದು ಸಕಲಜನಗ್ರಾಹ್ಯ.

– ಡಾ. ಕೆ.ಎಲ್.ಪ್ರಸನ್ನಾಕ್ಷೀ

ಮಹಾಭಾರತ ಕಥಾಸಂಗ್ರಹ



ಕೃತಿ
ಮಹಾಭಾರತ ಕಥಾಸಂಗ್ರಹ
ಲೇಖಕರು
ಸಿ.ಎಸ್. ಮಂಗಳಮ್ಮ
ಪ್ರಕಾಶಕರು: **ಶ್ರೀ ಕ್ರಿಯೇಷನ್, ಮಳಿಗೆ ನಂ. 1, ಅರಸು ಮಂಡಳಿ ಕಟ್ಟಡ, ತ್ಯಾಗರಾಜ ರಸ್ತೆ, ಕೆ.ಆರ್. ಮೊಹಲ್ಲಾ, ಮೈಸೂರು**
ಪುಟಗಳು : **556,**
ಬೆಲೆ : **130/-**

ಇತಿಹಾಸಗಳೆಂದು ಪ್ರಸಿದ್ಧವಾಗಿರುವ ರಾಮಾಯಣ ಮಹಾಭಾರತಗಳನ್ನು ಬಿಟ್ಟುಬಿಟ್ಟರೆ ಭಾರತೀಯ ಸಂಸ್ಕೃತಿಯೇ ಶೂನ್ಯವಾಗಿ ಹೋಗುವುದೇನೋ! ಸಾಹಿತ್ಯ ಸಂಗೀತ ನೃತ್ಯ, ವಿವಿಧ ಜಾನಪದ ಕಲೆಗಳು, ವಾಸ್ತುಶಿಲ್ಪಗಳು, ದೇವಾಲಯಗಳು – ಮುಂತಾದ ಸಂಸ್ಕೃತಿಯ ವಿವಿಧ ಪ್ರಕಾರಗಳಲ್ಲಿ ನೂರಕ್ಕೆ ತೊಂಬತ್ತರಷ್ಟಾದರೂ ಈ ಎರಡು ಕೃತಿಗಳ ಕಥಾವಸ್ತುವನ್ನು, ಪಾತ್ರಗಳನ್ನು ನೀತಿ ಧರ್ಮಗಳನ್ನು ಅವಲಂಬಿಸಿವೆ. ಈ ಕಾರಣದಿಂದಲೇ ಈ ಎರಡೂ ಕೃತಿಗಳು, ಇಲ್ಲಿಯವರೆಗೆ ವ್ಯಕ್ತಿಗತ ಜಾಣ್ಮೆ ಪ್ರತಿಭೆ ಬುದ್ಧಿಕೌಶಲ್ಯಗಳ ಆಧಾರದಲ್ಲಿ ನಾನಾ ಬಗೆಯಾಗಿ ವಿಕಾಸಗೊಳ್ಳುತ್ತಾ ವಿಜೃಂಭಿಸುತ್ತಿವೆ. ಅಂತಹ ಕೃತಿಗಳ ಸಾಲಿನಲ್ಲಿ ಪೂಜ್ಯ ಶ್ರೀಮತಿ ಮಂಗಳಮ್ಮನವರ 'ಮಹಾಭಾರತ ಕಥಾಸಂಗ್ರಹ' ಎಂಬ ಕೃತಿ ವಿಶಿಷ್ಟಸ್ಥಾನವನ್ನು ಪಡೆದುಕೊಳ್ಳುತ್ತದೆ.

(೧) ಈ ಕೃತಿಯ ಮುಖ್ಯ ಹಂದರ ಗದುಗಿನ ನಾರಣಪ್ಪನ **'ಕರ್ಣಾಟಕ ಭಾರತ ಕಥಾಮಂಜರಿ'**ಯನ್ನು ಅವಲಂಬಿಸಿದೆ. (೨) ಕಥಾಭಾಗ ವಿಶ್ಲೇಷಣೆ ಮಾಡುವ ಕಾಲದಲ್ಲಿ ಪ್ರಸ್ತುತ ರಾಜಕೀಯ ವಿದ್ಯಮಾನಗಳ ತುಲನಾತ್ಮಕ ಚಿಂತನೆ ಮಾಡಲಾಗಿದೆ .(೩) ಸಾಂದರ್ಭಿಕವಾಗಿ ಪ್ರಸ್ತುತ ಪ್ರಚಲಿತ ಇರುವ 'ತೋಳ-ಕುರಿಮರಿ' ಕಥೆಯಂತಹ ವಿಭಿನ್ನ ಕಥೆಗಳನ್ನು ಉದಾಹರಿಸಲಾಗಿದೆ. 'ಗಾಯದ ಮೇಲಿನ ಉಪ್ಪು', 'ತೋಟದ ಸುತ್ತ ಶೃಂಗಾರ, ಒಳಗೆ ಗೋಣಿಸೊಪ್ಪು', 'ಹೀನ ಸುಳಿ ಸುಟ್ಟರೂ ಹೋಗಲ್ಲ' ಮೊದಲಾದ ಜನಜನಿತವಾದ ಗಾದೆ ಮಾತುಗಳನ್ನು ತತ್ತ್ವ ವಿಶ್ಲೇಷಣೆಯ ಸಂದರ್ಭಗಳಲ್ಲಿ ಉದ್ಧರಿಸಲಾಗಿದೆ. (೪) ರಾಷ್ಟ್ರಕವಿ ಕುವೆಂಪು, ಅಕ್ಕಮಹಾದೇವಿ ಮೊದಲಾದವರ ವಿಚಾರಗಳೊಡನೆ ಭಾರತ ಕಥಾಸಂಗ್ರಹವನ್ನು ಹೋಲಿಸಿ ವಿಮರ್ಶಿಸಲಾಗಿದೆ. (೫) ಅರ್ಜುನನ ತೀರ್ಥಯಾತ್ರಾ ಪ್ರಸಂಗದಲ್ಲಿ ಅವನು ಸಾಗುವ ದೇಶಗಳಿಗೆ ಈಗ ಪ್ರಚಲಿತವಿರುವ ಹೆಸರುಗಳನ್ನು ಸೂಚಿಸಲಾಗಿದೆ. (೬) ಸಾವಿತ್ರಿ – ಸತ್ಯವಾನರ ಕಥೆಗೆ ತಮ್ಮದೇ ಆದ ವೈಶಿಷ್ಟ್ಯಪೂರ್ಣವಾದ ಪ್ರಸ್ತಾವನೆ, ಉಪಗ್ರಂಥಗಳನ್ನು ತತ್ಕಾಲೋಚಿತವಾದ ಚಿಂತನೆ ವಿಮರ್ಶೆಗಳೊಡನೆ ನೀಡಲಾಗಿದೆ. (೭) ಕೃಷ್ಣಸಂಧಾನ ಸಂದರ್ಭದಲ್ಲಿ ಲೇಖಕಿ ಪರಿಭಾವಿಸಿರುವ – ಯುದ್ಧದಿಂದಾಗುವ ಪರಿಣಾಮಗಳನ್ನು ತಡೆಯುವುದು ಎಲ್ಲರ ಕರ್ತವ್ಯ – ಎಂಬ ವಿಚಾರ ಸಾರ್ವಕಾಲಿಕವಾಗಿ ಅನುಷ್ಠಾನಯೋಗ್ಯವಾದ ವಿಚಾರ. (೮) ಭಗವದ್ಗೀತಾ ನಿರೂಪಣಾ ಸಂದರ್ಭದಲ್ಲಿ ಅರ್ಜುನನ ಮಾನಸಿಕ ಹೋರಾಟದ ವಿಶ್ಲೇಷಣೆಯನ್ನು ಮಾಡುತ್ತಾ ಲೇಖಕಿ ಮಾನಸಿಕ ರೋಗಗಳ ವೈವಿಧ್ಯ, ಅವುಗಳಿಗೆ ಇರುವ ವಿಭಿನ್ನ ಕಾರಣಗಳು, ಅದರ ಪರಿಹಾರ ಪ್ರಕ್ರಿಯೆಯ ನಾನಾ ಕ್ರಮಗಳನ್ನು ಮನಮುಟ್ಟುವಂತೆ ವಿವರಿಸಿದ್ದಾರೆ. (೯) ಅಭಿಮನ್ಯು ವಧೆಯ ಪ್ರಸಂಗದಲ್ಲಿ ಮೃತ್ಯುರಹಸ್ಯವನ್ನು ಕುರಿತ ವಿಚಾರಧಾರೆ ಗಮನಾರ್ಹವಾಗಿದೆ. (೧೦) ಭಾರತ ಕಥಾ ಸಂದರ್ಭದಲ್ಲಿ ಒಳಗೊಳ್ಳದ ಭಾಗವತದ ಹತ್ತನೆಯ ಸ್ಕಂಧದ ಸಾರವಾದ ಕೃಷ್ಣಕಥಾಭಾಗವನ್ನು ಸೇರಿಸಿರುವುದು ಗ್ರಂಥದ ಮಹಿಮೆಯನ್ನು, ರಸವನ್ನು ಹೆಚ್ಚಿಸಿದೆ.

ಹೀಗೆ ಮಹಾಭಾರತದ ಕಥೆ ಸಾಧಾರಣವಾಗಿ ಪರಿಚಿತವಾದುದಾದರೂ ಹತ್ತು ಹಲವಾರು ವೈಶಿಷ್ಟ್ಯಗಳಿಂದ ಈ ಕೃತಿ ಸಕಲರ ಮನೆ-ಮನಗಳಲ್ಲಿ ವಿರಾಜಿಸಲು ಯೋಗ್ಯವಾದ ಕೃತಿಯಾಗಿದೆ. ಲೇಖಕಿಯ ೯೦ರ ಪ್ರಾಯದ ಹುರುಪು, ತಾನು ಓದಿ ಕೇಳಿ ತಿಳಿದ ಅನೇಕ ಅಂಶಗಳನ್ನು ಲೋಕಕ್ಕೆ ಕೊಟ್ಟು, ತನ್ನಿಂದಾದ ಸಮಾಜಸೇವೆಯನ್ನು ಮಾಡಿ ತನ್ಮೂಲಕ ತನ್ನನ್ನು ಪಾಲಿಸಿ, ಪೋಷಿಸಿದ ಸಮಾಜದ ಋಣಸಂದಾಯ ಮಾಡಿಕೊಳ್ಳಬೇಕೆಂಬ ಉತ್ಕಟ ಅಭಿಲಾಷೆ ಮೇಲೆ ಹೇಳಿದ ಎಲ್ಲಾ ವೈಶಿಷ್ಟ್ಯಗಳಿಗೆ ಮುಕುಟಪ್ರಾಯವಾಗಿದೆ.

– ಡಾ. ಕೆ.ಎಲ್.ಪ್ರಸನ್ನಾಕ್ಷೀ

ದೀನ ಸಂತನ ಪವಿತ್ರ ಕಥೆ

ಸ್ವಾಮಿ ವೀರೇಶಾನಂದ

ಅವನ ಹೆಸರು ಕುಪರ್‌ಟಿನೋದ ಜೋಸೆಫ್. ಅವನು ಹುಟ್ಟಿದ್ದು ಇಟಲಿಯ ಕುಪರ್‌ಟಿನೋ ಎಂಬ ಒಂದು ಹಳ್ಳಿಯಲ್ಲಿ ; ೧೬೦೩ ರಲ್ಲಿ. ಜೋಸೆಫ್ ಒಬ್ಬ ನತದೃಷ್ಟ ಹುಡುಗ. ಅವನು ತನ್ನ ಜೀವನವನ್ನು ಆರಂಭಿಸಿದ್ದೇ ನಿರಾಶೆಯಿಂದ. ಅವನ ಬಾಳುವೆಯಲ್ಲಿ ಯಾವುದೂ ಅವನ ಪರವಾಗಿ ನಡೆಯುತ್ತಲೇ ಇರಲಿಲ್ಲ. ಎಲ್ಲವೂ ಅವನ ವಿರುದ್ಧವಾಗಿಯೇ ನಡೆಯುತ್ತಿತ್ತು. ತನ್ನ ಓರಗೆಯ ಹುಡುಗರಷ್ಟು ಅವನು ಜಾಣನಾಗಿರಲಿಲ್ಲ. ಬಹಳ ಮುಟ್ಠಾಳನಂತೆ ನಡೆದುಕೊಳ್ಳುತ್ತಿದ್ದನು. ಉಳಿದ ಹುಡುಗರು ಹುರುಪಿನಿಂದಿದ್ದರೆ, ಇವನಿಗೆ ಯಾವ ಉತ್ಸಾಹವೂ ಇರುತ್ತಿರಲಿಲ್ಲ. ಉಳಿದವರು ಅಂದವಾಗಿದ್ದರೆ, ಇವನೋ ಕುರೂಪಿ. ಉಳಿದವರಿಗೆ ಅವರ ಹೆತ್ತವರು ಒತ್ತಾಸೆ ನೀಡಿ, ಕೊಡುಗೆಗಳನ್ನು ಕೊಡುತ್ತಿದ್ದರು. ಇವನೋ ತನ್ನ ಹೆತ್ತವರಿಂದ ಪಡೆಯುತ್ತಿದ್ದುದು ಬೈಗುಳ, ಹೊಡೆತಗಳನ್ನು. ಉಳಿದ ಹುಡುಗರು ಆತ್ಮವಿಶ್ವಾಸದಿಂದ ನಳನಳಿಸುತ್ತಿದ್ದರೆ, ಇವನೋ ಮಾನಸಿಕ ಖಿನ್ನತೆಯಿಂದ ನರಳುತ್ತ ಕಂಗಾಲಾಗಿದ್ದನು. ಉಳಿದವರು ಧೈರ್ಯದಿಂದ ಎಲ್ಲ ಕೆಲಸಗಳನ್ನು ಮಾಡುತ್ತಿದ್ದರೆ, ಇವನು ಏನು ಮಾಡಲಿಕ್ಕೂ ಭಯದಿಂದ ತತ್ತರಿಸುತ್ತಿದ್ದನು. ಉಳಿದವರು ತಮ್ಮೆಲ್ಲ ಕೆಲಸಗಳನ್ನೂ ಸಲೀಸಾಗಿ ಮಾಡುತ್ತಿದ್ದರೆ, ಇವನು ಸಣ್ಣ ಸಣ್ಣ ಕೆಲಸಗಳನ್ನು ಮಾಡುವುದಕ್ಕೂ ಪರದಾಡುತ್ತಿದ್ದನು. ಅವನು ಮುಟ್ಟಿದ್ದೆಲ್ಲ ನಾಶವಾಗುತ್ತಿತ್ತು; ಮಾಡಿದ ಕೆಲಸವೆಲ್ಲ ಹಾಳಾಗುತ್ತಿತ್ತು.

ದುರದೃಷ್ಟವೆನ್ನುವುದು ಹುಟ್ಟುವುದಕ್ಕೆ ಮುಂಚೆಯೇ ಈ ಹುಡುಗನ ಬೆಂಬೆತ್ತಿದಂತಿತ್ತು. ಅವನ ತಂದೆ ಮರಗೆಲಸ ಮಾಡುತ್ತಿದ್ದನು. ಆದರೆ ಅವನಿಗೆ ತನ್ನ ಕುಟುಂಬವನ್ನು ಸಾಕುವಷ್ಟು ವರಮಾನವಿರಲಿಲ್ಲ. ಗಳಿಸಿದ್ದೆಲ್ಲ ಖರ್ಚಾಗಿಹೋಗುತ್ತಿತ್ತು. ಹಣಕಾಸು ವ್ಯವಹಾರದಲ್ಲಿ ಅವನಿಗೆ ಯಾವುದೇ ಕೌಶಲ್ಯವಿರಲಿಲ್ಲ. ಮಗ ಹುಟ್ಟುವ ಸಮಯಕ್ಕೆ ಅವನು ಕಡುಬಡತನದಲ್ಲಿದ್ದನು. ಅವನ ಎಲ್ಲ ಪ್ರಯತ್ನಗಳೂ ವಿಫಲವಾಗಿದ್ದವು. ಜೋಸೆಫ್ ಮನೆಯ ಹಿಂದಿನ ಒಂದು ಪಡಸಾಲೆಯಲ್ಲಿ ಹುಟ್ಟಿದನು. ಪ್ರಾರಂಭದಿಂದಲೂ ಅವನ ತಾಯಿಯೇ ಅವನ ಬಗ್ಗೆ ಅಸಹ್ಯ ಭಾವನೆಯನ್ನು ಇಟ್ಟುಕೊಂಡಿದ್ದಳು. ಇಂಥ ಬಾಲ್ಯವನ್ನು ಹೊಂದಿದ ಅವನ ಭವಿಷ್ಯ ಕರಾಳವಾಗಿತ್ತು. ಬಾಲ್ಯದಿಂದಲೇ ಅವನು ರೋಗಿಯಾಗಿ ಬೆಳೆದನು. ದಾರಿದ್ರ್ಯವೇ ಮೂರ್ತಿವೆತ್ತಂತೆ ಇದ್ದನು. ಜಗತ್ತಿನಲ್ಲಿದ್ದ ಎಲ್ಲ ಬಗೆಯ ಕಾಯಿಲೆಗಳಿಗೂ ಅವನು ತುತ್ತಾಗುವಂತೆ ಕಾಣುತ್ತಿತ್ತು. ಹಲವಾರು ಬಾರಿ ಅವನು ಯಮನ ಮನೆಯ ಬಾಗಿಲನ್ನು ತಟ್ಟಿ ಬದುಕಿ ಬಂದಿದ್ದನು. ನಿಜ ಹೇಳಬೇಕೆಂದರೆ, ಅವನು ಸತ್ತುಹೋಗುವುದೇ ಅವನ ಹೆತ್ತವರಿಗೂ ಬೇಕಾಗಿತ್ತು. ಏಕೆಂದರೆ ಅವನನ್ನು ಸಾಕುವುದು ಅವರಿಗೂ ಸಾಕುಸಾಕಾಗಿತ್ತು. ಜೋಸೆಫನ ತಾಯಿಯೇನೋ ಒಳ್ಳೆಯವಳೇ. ಆದರೆ ಕಡುಬಡತನ, ಕಠಿಣ ಪರಿಶ್ರಮ, ಮಗನ ಮೂರ್ಖತನ – ಇವು ಅವಳ ಹೃದಯವನ್ನು ಕಲ್ಲಾಗಿಸಿತ್ತು. ಇದಕ್ಕೆ ಸರಿಯಾಗಿ ಜೋಸೆಫ್ ಕೂಡ ತನಗೆ ಕೊಟ್ಟ ಎಲ್ಲ ಕೆಲಸದಲ್ಲಿಯೂ ಎಡುವುತ್ತಿದ್ದನು. ಹೀಗಾಗಿ ತಾಯಿಯು ಮಗನನ್ನು ಕ್ರೂರವಾಗಿ ದಂಡಿಸುತ್ತಿದ್ದಳು. ಜೋಸೆಫ್‌ಗೆ ಏಳು ವರ್ಷ ವಯಸ್ಸಾಗಿದ್ದಾಗ, ಅಲ್ಸರ್ ಕಾಯಿಲೆ ಬಂದಿತ್ತು. ಅದೊಂದು ಗುಣವಿಲ್ಲದ ಕಾಯಿಲೆ. ಇದರಿಂದಾಗಿ ಅವಳ ಮನಸ್ಸು ಇನ್ನೂ ಕಹಿಯಾಯಿತು. ಈ ಹುಡುಗ ಇಡೀ ಕುಟುಂಬಕ್ಕೊಂದು ದೊಡ್ಡ ಪೀಡೆ ಎಂದೇ ಅವಳು ಭಾವಿಸಿದ್ದಳು.

ಯಾರೂ ಜೋಸೆಫ್‌ನನ್ನು ಇಷ್ಟಪಡುತ್ತಿರಲಿಲ್ಲ. ಅವನ ತಾಯಿ ಕೂಡ ಅವನನ್ನು ಕಡೆಗಣಿಸಿದ್ದಳು. ಈ ವಾಸ್ತವ ಸಂಗತಿಯನ್ನು ಬಾಲ್ಯದಲ್ಲಿಯೇ ಜೋಸೆಫನು ಒಪ್ಪಿಕೊಂಡಿದ್ದನು. ಅವನು ತನ್ನನ್ನೇ ಇಷ್ಟಪಡುತ್ತಿರಲಿಲ್ಲ. ತಾನು ಇಷ್ಟಪಡುವುದು ಯಾವುದು, ತನಗೆ ಏನು ಬೇಕು ಎಂಬುದೂ ಅವನಿಗೆ ಗೊತ್ತಿರಲಿಲ್ಲ. ತಾನು ಏನು ಮಾಡಬೇಕು, ಈಗ ತಾನು ಮಾಡುತ್ತಿದ್ದೇನೆ ಎಂಬುದರ ಪರಿವೆಯೂ ಅವನಿಗೆ ಇರಲಿಲ್ಲ. ಏನನ್ನೋ ಯೋಚಿಸುತ್ತ, ಊಟವನ್ನು ಕೂಡ ಸರಿಯಾದ ಹೊತ್ತಿಗೆ ಮಾಡುತ್ತಿರಲಿಲ್ಲ. ನೆನಪಿಸಿದಾಗ, 'ಅಯ್ಯೋ ಮರೆತುಬಿಟ್ಟೆನೇ' ಎನ್ನುತ್ತಿದ್ದನು. ಪುಸ್ತಕವಿದ್ಯೆ ಅವನ ಮಸ್ತಕಕ್ಕೆ ಹತ್ತಲಿಲ್ಲ. ಹೀಗಾಗಿ ಬೂಟ್ಸ್ ಶೂ ಮುಂತಾದವುಗಳನ್ನು ಮಾಡಲಾದರೂ ಕಲಿಯಲಿ ಎಂದು ಆ ಅಂಗಡಿಯಲ್ಲಿ ಅವನನ್ನು ಬಿಟ್ಟರು. ಅದೂ ಕೂಡ ಉಪಯೋಗಕ್ಕೆ ಬರಲಿಲ್ಲ. ಜೋಸೆಫನ ಮನಸ್ಸು

ಎಲ್ಲೋ ಹೊಯ್ದಾಡುತ್ತಿತ್ತು. ಕೊಟ್ಟ ಕೆಲಸದ ಮೇಲೆ ಒಂದು ಸ್ವಲ್ಪವೂ ನಿಗಾ ಇರುತ್ತಿರಲಿಲ್ಲ. ಶೂ ಮಾಡುವುದನ್ನು ಅವನು ಕಲಿಯಲೇ ಇಲ್ಲ. ಅಂಗಡಿಯ ಯಜಮಾನ ಉದಾರಿ. ಪಾಪದ ಹುಡುಗ, ಏನೋ ಮಾಡಿಕೊಂಡಿರಲಿ ಎಂದು ಅವನನ್ನು ಬಿಟ್ಟುಬಿಟ್ಟನು.

ಹೀಗೆ ಉಂಡಾಡಿ ಗುಂಡನಾಗಿ ಬೆಳೆದ ಜೋಸೆಫ್‌ನಿಗೆ ಈಗ ಹದಿನೇಳು ವರ್ಷ. ಅವನ ಹಳ್ಳಿಗೆ ಬೇಡುತ್ತ ಬಂದ ಒಬ್ಬ ಕ್ರೈಸ್ತ ಸಾಧುವನ್ನು ಅವನು ನೋಡಿದನು. ಜೀವನದಲ್ಲಿ ಮೊದಲಬಾರಿಗೆ ಒಂದು ಹೊಸ ಭಾವನೆ ಅವನಿಗೆ ಬಂದಿತು. ಈ ಜಗತ್ತಿನಲ್ಲಿ ನನಗೆ ಯಾವ ಉದ್ಯೋಗವೂ ಸಾಧ್ಯವಿಲ್ಲ ಎನ್ನುವುದನ್ನು ಅವನು ಈಗಾಗಲೇ ಅರಿತುಬಿಟ್ಟಿದ್ದನು. ಏಕೆಂದರೆ ಅವನು ಏನನ್ನು ಕಲಿಯಲೂ ಅಸಮರ್ಥನಾಗಿದ್ದನು. ಕನಿಷ್ಠಪಕ್ಷ ನಾನು ಒಬ್ಬ ಭಿಕ್ಷುಕ ಸಾಧುವಾಗಬಹುದು; ಅದರಿಂದ ಹೊಟ್ಟೆ ತುಂಬಿಸಿಕೊಳ್ಳಬಹುದು ಎಂಬ ಭಾವನೆ ಅವನ ಮನಸ್ಸಿನಲ್ಲಿ ಬಂದಿತು. ಈ ಕೆಲಸಕ್ಕೇನೂ ಮೆದುಳಿನ ಬುದ್ಧಿ ಬೇಕಾಗಿರಲಿಲ್ಲವಷ್ಟೇ. ಇದೊಂದು ಆಕರ್ಷಣೀಯ ಆಕಾಂಕ್ಷೆಯಾಯಿತು ಅವನಿಗೆ. ಅಲ್ಲದೆ ಅವನ ಇಬ್ಬರು ಸೋದರ ಮಾವಂದಿರು ಕ್ರೈಸ್ತಮತದ ದೀಕ್ಷೆ ಪಡೆದುಕೊಂಡು ಸಂನ್ಯಾಸಿಗಳಾಗಿದ್ದರು. ಇದು ಅವನಿಗೆ ಹೊಸ ಆಸೆಯನ್ನು ಹುಟ್ಟಿಸಿತು; ಉತ್ತೇಜನವನ್ನು ಮೂಡಿಸಿತು.

ಮನೆಯವರಿಗೂ ಅದೇ ಬೇಕಾಗಿತ್ತು. ಧಾರಾಳವಾಗಿ ಹೋಗಿ ಬಾ ಎಂದು ಕಳುಹಿಸಿಕೊಟ್ಟರು. ಆದರೆ ಸಂನ್ಯಾಸಿ ಮಠದಲ್ಲಿ ಪ್ರವೇಶ ಪಡೆದುಕೊಳ್ಳುವುದು ಅಷ್ಟೇನೂ ಸುಲಭವಾಗಿರಲಿಲ್ಲ. ಅದಕ್ಕೆ ಬೇಕಾದ ಕನಿಷ್ಠ ಮಟ್ಟದ ಓದುಬರಹಗಳನ್ನೂ ಅವನು ಕಲಿತಿರಲಿಲ್ಲ. ಕೆಲವು ಮಠಗಳ ಬಾಗಿಲು ತಟ್ಟಿದನು. ಆದರೆ ಅವುಗಳ ಮುಖ್ಯಸ್ಥರಿಂದ ನಿರಾಕೃತನಾದನು. ಕಡೆಗೆ ಒಂದು ಮಠದವರು ಸಾಧಾರಣ ಸಹೋದರನೆಂದು (lay-brother) ಸೇರಿಸಿಕೊಂಡರು. ಅದೂ ಸೀಮಿತ ಅವಧಿಗೆ ಮಾತ್ರ. ಆದರೆ ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಜೋಸೆಫನ ಆಕಾಂಕ್ಷೆಗಳೇನೂ ಒಳ್ಳೆಯವೇ. ಆದರೆ ಅವನು ಅವುಗಳನ್ನು ಪೂರೈಸಿಕೊಳ್ಳಲು ಬೇಕಾದ ಯಾವ ಯೋಗ್ಯತೆಯನ್ನೂ ಪಡೆದಿರಲಿಲ್ಲ. ಮಠದ ಸಂನ್ಯಾಸಿಗಳು ಬಹಳ ತಾಳ್ಮೆಯಿಂದ ಅವನ ತಪ್ಪು ನಡವಳಿಕೆಗಳನ್ನು ಸಹಿಸಿಕೊಂಡರು. ಆದರೆ ಜೋಸೆಫ್ ಅವರಿಗೂ ಬಹಳ ತೊಂದರೆಯಾಗುವ ಹಾಗೆ ನಡೆದುಕೊಂಡನು. ಏನಾದರೂ ಕೆಲಸ ಮಾಡುತ್ತಿದ್ದರೆ, ಹಠಾತ್ತಾಗಿ ನಿಲ್ಲಿಸಿಬಿಡುವನು; ಸುಮ್ಮನೆ ನಿಂತುಬಿಡುವನು. ಮನ ಬಂದ ಕಡೆ, ಕೆಲಸದ ಮಧ್ಯದಲ್ಲಿ ಇರುವಾಗಲೇ ಮಂಡಿಯೂರಿ ಪ್ರಾರ್ಥಿಸಲು ಆರಂಭಿಸಿಬಿಡುವನು. ಆಗ ಸುತ್ತಲಿನ ಪರಿವೆಯೇ ಅವನಿಗೆ ಇರುತ್ತಿರಲಿಲ್ಲ. ಕಡೆಗೆ ಮಠದವರಿಗೂ ಸಾಕುಸಾಕಾಗಿ, ಅವನ ಸಂನ್ಯಾಸಿ ಉಡುಪನ್ನು ಕಿತ್ತುಕೊಂಡು ಜೋಸೆಫ್‌ನನ್ನು ಮನೆಗೆ ಕಳಿಸಿಬಿಟ್ಟರು.

ಮಠದಿಂದ ಹೊರಬಂದ ಆ ದಿನ ಜೋಸೆಫ್‌ನ ಬಾಳಿನಲ್ಲಿಯೇ ಅತ್ಯಂತ ದಾರುಣವಾದ ದಿನ. ಇಡೀ ಪ್ರಪಂಚವೇ ತನಗೆ ಎದುರಾಗಿ ನಿಂತಂತೆ ಅವನಿಗೆ ಅನ್ನಿಸಿತು. ಸಂನ್ಯಾಸಿಯ ಉಡುಪನ್ನು ತೆಗೆದು ಹಾಕಿದ ದಿನ ತನ್ನ ಚರ್ಮವನ್ನೇ ಕತ್ತರಿಸಿ ತೆಗೆದುಹಾಕಿದ ಹಾಗೆ ಆಯಿತು ಎಂದು ಅವನು ಮುಂದೊಂದು ದಿನ ಹೇಳಿಕೊಂಡನು. ಆ ದಿನವನ್ನು ಅವನು ತನ್ನ ಬಾಳಿನುದುದ್ದಕ್ಕೂ ನೆನಪಿನಲ್ಲಿ ಇಟ್ಟುಕೊಂಡಿದ್ದನು.

ಇಲ್ಲಿಗೇ ಅವನ ಸಮಸ್ಯೆಗಳು ಕೊನೆಗೊಳ್ಳಲಿಲ್ಲ. ಕಾಲೆಳೆದುಕೊಂಡು, ಅವನು ದಾರಿಗುಂಟ ನಡೆದುಕೊಂಡು ಹೋಗುತ್ತಿದ್ದನು. ಎಂದಿನಂತೆ, ದಾರಿಯ ಬದಿಯಲ್ಲಿ ಅನ್ಯಮನಸ್ಕನಾಗಿ ಬಿದ್ದುಕೊಂಡನು. ಎಚ್ಚರಗೊಂಡು ನೋಡಿದಾಗ, ಅವನು ಹೊದ್ದುಕೊಂಡಿದ್ದ ಕೆಲವು ಹರಕುಮುರುಕು ಬಟ್ಟೆಗಳೂ ಮಾಯವಾಗಿದ್ದವು. ಯಾರೋ ಅವುಗಳನ್ನು ಕದ್ದೊಯ್ದಿದ್ದರು. ಅವನ ಟೊಪ್ಪಿ ಕಾಣೆಯಾಗಿತ್ತು; ಪಾದರಕ್ಷೆಗಳು ಮರೆಯಾಗಿದ್ದವು. ಅವನು ಹಾಕಿಕೊಂಡಿದ್ದ ಕೋಟನ್ನು ಹುಳುಗಳು ತಿಂದುಹಾಕಿ, ಅದು ಹರಿದುಹೋಗಿತ್ತು. ನೋಡಲು ಅವನು ಪಿಶಾಚಿಯಂತೆ ಕಾಣುತ್ತಿದ್ದನು. ಇದಲ್ಲದೆ ಬೀದಿನಾಯಿಗಳು ಅವನ ಮೇಲೆ ಎಗರಿದವು. ಅವನ ಮೈಮೇಲೆ ಉಳಿದುಕೊಂಡಿದ್ದ ಅಷ್ಟಿಷ್ಟು ಬಟ್ಟೆಯನ್ನೂ ಅವು ಹರಿದು ಕಿತ್ತುಹಾಕಿದವು. ಬಡ ಜೋಸೆಫ್ ನಾಯಿಗಳಿಂದ ತಪ್ಪಿಸಿಕೊಳ್ಳಲು ಓಡುತ್ತ ಹೋದನು. 'ಇನ್ನು ಮುಂದೆ ಏನಪ್ಪಾ ಗತಿ?' ಎಂಬ ಭಯ ಅವನನ್ನು ಕಂಗಾಲಾಗಿಸಿತ್ತು. ದಾರಿಯಲ್ಲಿ ಕೆಲವು ಕುರಿಗಾಹಿಗಳು ಕುರಿಗಳನ್ನು ಹೊಡೆದುಕೊಂಡು ಬರುತ್ತಿದ್ದರು. ಜೋಸೆಫನ ವೇಷವನ್ನು ನೋಡಿ, ಇವನೊಬ್ಬ ಭಯಂಕರ ವ್ಯಕ್ತಿಯೆಂದು ಭಾವಿಸಿದರು. ವಿಚಾರಿಸಿದಾಗ ಜೋಸೆಫ್ ಮಾತನಾಡದಾಗದೆ, ತೊದಲಿದನು. ಇದನ್ನು ಕಂಡು ಅವರೆಲ್ಲ ಸೇರಿ ಹೊಡೆಯಲು ಹೋದರು. ಆದರೆ ಅವರಲ್ಲಿ ಒಬ್ಬ ದಯಾಳುವು ಅವರನ್ನು ತಡೆದು ಜೋಸೆಫ್‌ನನ್ನು ಹೋಗಲು ಬಿಟ್ಟನು.

ಕಡೆಗೆ ತನ್ನ ಸೋದರ ಮಾವನಿದ್ದ ಹಳ್ಳಿಗೆ ಬಂದನು ಜೋಸೆಫ್. ಅವನು ಅಷ್ಟರಲ್ಲಿ ನಿತ್ರಾಣನಾಗಿ ಹೋಗಿದ್ದನು ಹಾಗೂ ಹಸಿವೆಯಿಂದ ಬಳಲುತ್ತಿದ್ದನು. ಅವನ ಸೋದರಮಾವ ಆ ಗ್ರಾಮದ ಶ್ರೀಮಂತ ವರ್ತಕ. ದೊಡ್ಡ ಅಂಗಡಿಯನ್ನು ಇಟ್ಟುಕೊಂಡಿದ್ದ. ಅಲ್ಲಿ ಏನಾದರೂ ತನಗೆ ಸಹಾಯ ದೊರಕಬಹುದು ಎಂದು ಜೋಸೆಫ್ ಆಶಿಸಿದ್ದ. ಆದರೆ ಅವನಿಗೆ ಎದುರಾಗಿದ್ದು ನಿರಾಶೆ. ಜೋಸೆಫ್‌ನಂತಹ ಸಂಬಂಧಿಗಳು ಅವನ ಸೋದರಮಾವನಿಗೆ ಬೇಕಾಗಿರಲಿಲ್ಲ. ಆ ವರ್ತಕನು ಈ ಬಡಪಾಯಿಯ ಮೇಲೆ ರೇಗಾಡಿದ್ದು ಮಾತ್ರವಲ್ಲ, ಅವನನ್ನು ಅನ್ನ ನೀರು ಕೊಡದೆ ಅಟ್ಟಿಬಿಟ್ಟನು.

ಕಡೆಗೆ ತನ್ನ ಸ್ವಂತ ಗ್ರಾಮಕ್ಕೆ ಜೋಸೆಫ್ ವಾಪಸ್ಸು ಬಂದನು. ಜೋಸೆಫ್‌ನ ಪೋಷಕರು ಇನ್ನೂ ಬಡತನದಲ್ಲಿ ಬಳಲುತ್ತಿದ್ದರು. ಜೋಸೆಫ್ ಭಯದಿಂದ ನಡುಗುತ್ತ ಮನೆಯ ಬಾಗಿಲು ತಟ್ಟಿದನು. ಮನೆಯೊಳಗೆ ತಾಯಿ ಏನೋ ಕೆಲಸ ಮಾಡುತ್ತಿದ್ದಳು. ಜೋಸೆಫ್ ಹೋಗಿ ಅವಳ ಕಾಲಿಗೆ ಬಿದ್ದನು. ಇವನ ದಯನೀಯ ಸ್ಥಿತಿಯನ್ನು ನೋಡಿ ಕನಿಕರಗೊಳ್ಳುವ ಬದಲು, ತಾಯಿ ಬೈಗುಳದ ಸುರಿಮಳೆಯನ್ನು ಸುರಿಸಲಾರಂಭಿಸಿದಳು. ''ನಿನಗೆ ನಾಚಿಕೆ ಆಗಬೇಕು. ಮಠದವರು ಕೂಡ ನಿನ್ನನ್ನು ಹೊರಹಾಕಿದರು. ನೀನು ನಮಗೆಲ್ಲರಿಗೂ ಕೆಟ್ಟಹೆಸರು ತಂದಿದ್ದೀಯೆ'' ಎಂದು ಅವಳು ಕೂಗಾಡಿದಳು.

ಇದಲ್ಲದೆ, ''ನಿನಗೆ ಈ ಮನೆಯಲ್ಲಿ ಜಾಗವಿಲ್ಲ, ಹೊರಟುಹೋಗು. ಜೈಲಿಗೆ ಹೋಗು, ಎಲ್ಲಿಗಾದರೂ ಹೋಗು. ಇಲ್ಲಿ ಮಾತ್ರ ಇರಬೇಡ. ಇಲ್ಲಿ ನಿನಗೆ ಯಾವ ಕೂಳೂ ಸಿಕ್ಕದು'' ಎಂದು ಅರಚಿದಳು.

ಒಂದು ಫ್ರಾನ್ಸಿಸಿಯನ್ ಸಂನ್ಯಾಸಿ ಮಠದಲ್ಲಿ ಅವಳ ಸಹೋದರನೊಬ್ಬನು ಸಂನ್ಯಾಸಿಯಾಗಿದ್ದನು. ಜೋಸೆಫ್‌ನ ತಾಯಿ ಅವನನ್ನು ತನ್ನ ಸಹೋದರನ ಬಳಿಗೆ ಎಳೆದುಕೊಂಡು ಹೋದಳು. ತನ್ನ ಸಹೋದರನಿಗೆ ಬೈದು, ತನ್ನ ಮಗನನ್ನು ಮತ್ತೆ ಸೇರಿಸಿಕೊಳ್ಳುವಂತೆ ತಾಕೀತು ಮಾಡಿದಳು. ಅವನನ್ನು ಯಾವ ರೀತಿಯಲ್ಲಾದರೂ ಸರಿಯೆ, ಮಠದಲ್ಲೇ ಇರಿಸಿಕೊಳ್ಳುವಂತೆ ಬೇಡಿಕೊಂಡಳು. ಏನು ಬೇಕಾದರೂ ಕೆಲಸ ಕೊಟ್ಟು ದುಡಿಸಿಕೊಳ್ಳುವಂತೆ ಕೇಳಿಕೊಂಡಳು. ಅವನನ್ನು ಅಧಿಕೃತವಾಗಿ ಮಠಕ್ಕೆ ಸೇರಿಸಿಕೊಳ್ಳಲು ಅಲ್ಲಿನ ಅಧಿಕಾರಿಗಳು ಒಪ್ಪಲಿಲ್ಲ. ಆದರೆ, ಗೃಹಸ್ಥ ಭಕ್ತನ ರೂಪದಲ್ಲಿ ಮಠದಲ್ಲಿ ಇರಿಸಿಕೊಳ್ಳಲು ಒಪ್ಪಿ, ಅದಕ್ಕೆ ಬೇಕಾದ ನಿಲುವಂಗಿಯನ್ನು ಅವನಿಗೆ ದಯಪಾಲಿಸಿದರು. ಮಠದಲ್ಲಿ ಕತ್ತೆಗಳ ಲಾಯವನ್ನು ನೋಡಿಕೊಳ್ಳುವ ಕೆಲಸವನ್ನು ಕೊಟ್ಟರು. ಅವನು ಅಲ್ಲಿಯೇ ವಾಸಿಸಬೇಕಾಗಿತ್ತು. ರಾತ್ರಿ ಅಲ್ಲಿಯೇ ಒಂದು ಮೂಲೆಯಲ್ಲಿ ಹಲಗೆಯ ಮೇಲೆ ಮಲಗಬೇಕಾಯಿತು.

ಜೋಸೆಫ್‌ನ ಜೀವನದಲ್ಲಿ ಹೊಸ ಬೆಳಕು ಹೀಗೆ ಆರಂಭವಾಯಿತು. ಆ ಲಾಯದ ಕೆಲಸವನ್ನು ಅವನು ತುಂಬ ಇಷ್ಟಪಟ್ಟನು. ಪ್ರಾಣಿಗಳ ಜೊತೆಗೆ ಒಡನಾಟ ಬೆಳೆಸಿಕೊಂಡನು. ಮುಖದಲ್ಲಿ ಮಂದಹಾಸ ಮತ್ತೆ ಮರುಕಳಿಸಿತು. ಮನಸ್ಸಿನಲ್ಲಿ ಆಶಾಭಾವನೆ ಮೂಡಿತು. ಯಾರೂ ಬರದ ಆ ನಿರ್ಜನ ಸ್ಥಳದಲ್ಲಿ ಅವನೊಬ್ಬನೇ ನಕ್ಕು ನಲಿದು, ಕುಣಿದಾಡಿದನು. ಭಗವಂತನ ಆಶೀರ್ವಾದಕ್ಕಾಗಿ ಕೃತಜ್ಞತೆ ಅರ್ಪಿಸಿದನು. ಸಮಸ್ಯೆಗಳ ಮರುಭೂಮಿಯಲ್ಲಿ ಸುತ್ತಾಡಿ ಅವನು ಬವಣೆ ಪಟ್ಟದ್ದಾಯಿತು. ಈಗ ಸುಖದ ಓಯಸಿಸ್ಸಿನಲ್ಲಿ ಆನಂದ ಪಡತೊಡಗಿದ. ಕಳವಳದಿಂದ ಬೆಂದ ಜೋಸೆಫ್ ಈಗ ಸಾಂತ್ವನದ ಸುಧೆಯನ್ನು ಸವಿಯತೊಡಗಿದ.

ಜೊಸೆಫ್‌ನಲ್ಲಿ ಗಮನಾರ್ಹ ಬದಲಾವಣೆಗಳು ಕಂಡುಬರುತ್ತಿದ್ದವು. ಮಠದ ಸಂನ್ಯಾಸಿಗಳು ಅವನಿರುವ ಸ್ಥಳಕ್ಕೆ ಹೋದರೆ, ಅವನು ಅವರನ್ನೆಲ್ಲ ತುಂಬು ಹೃದಯದಿಂದ ಸ್ವಾಗತಿಸುವನು. ಒಬ್ಬ ರಾಜನಂತೆ ಅವನು ಸುಖದ ಸುಪ್ಪತ್ತಿಗೆಯಲ್ಲಿ ಇರುವುದನ್ನು ಕಂಡು ಅವರೆಲ್ಲ ಮೂಕವಿಸ್ಮಿತರಾದರು. ಅವನು ತನ್ನ ಬಗ್ಗೆ ಚಿಂತಿಸುತ್ತಲೇ ಇರಲಿಲ್ಲ. ಯಾವತ್ತೂ ಭಗವದಾನಂದದಲ್ಲಿ ಮಗ್ನನಾಗಿದ್ದನು. ಭಗವತ್ಸೇವೆಯನ್ನು ಮಾಡುವುದಕ್ಕೆ ಅವಕಾಶ ಸಿಕ್ಕಿರುವುದಕ್ಕಾಗಿ ಹರ್ಷಚಿತ್ತನಾಗಿದ್ದನು. ಅವನ ಸಂತೋಷವು ಸಾಂಕ್ರಾಮಿಕವಾಗಿತ್ತು. ಅವನ ಜೊತೆ ಬೆರೆತವರೆಲ್ಲರಿಗೂ ಅದು ತಗಲುತ್ತಿತ್ತು. ಆನಂದದ ಹೊಳೆಯೇ ಆ ದೀನ ಕತ್ತೆ ಲಾಯದಲ್ಲಿ ಹರಿಯುತ್ತಿತ್ತು.

ಬಡಜನರು ಅವನನ್ನು ತುಂಬ ಇಷ್ಟಪಡುತ್ತಿದ್ದರು. ಏಕೆಂದರೆ ಅವನಲ್ಲಿ ಅವರು ತಮ್ಮ ಪ್ರತಿಬಿಂಬವನ್ನೇ ಕಾಣುತ್ತಿದ್ದರು. ಕ್ರಮೇಣ ಸಂನ್ಯಾಸಿಗಳು ಮತ್ತು ಸಾಧಾರಣ ಜನರು – ಹೀಗೆ ಎಲ್ಲರ ಮಧ್ಯೆ ಜೋಸೆಫ್ ಜನಪ್ರಿಯನಾದನು. ಅವನನ್ನು ಮಠದ ಸಂನ್ಯಾಸಿಯನ್ನಾಗಿ ಸೇರಿಸಿಕೊಳ್ಳಲು ಪ್ರಯತ್ನಗಳು ಆರಂಭವಾದುವು. ಅವನಿಗೆ ಮತ್ತೊಂದು ಅವಕಾಶವನ್ನು ಕೊಡಬೇಕೆಂಬ ಒಮ್ಮತದ ಅಭಿಪ್ರಾಯ ಏರ್ಪಟ್ಟಿತು.

ಹೀಗೆ ಮತ್ತೊಮ್ಮೆ ಜೋಸೆಫ್ ಮಠದ ಸಂನ್ಯಾಸಿಯಾದನು. ಆದರೆ ಇನ್ನೊಂದು ದೊಡ್ಡ ಸಮಸ್ಯೆ ಎದುರಾಯಿತು. ಸಂನ್ಯಾಸಿಯಾಗಿ ಅವನು ಕ್ರೈಸ್ತ ಶಾಸ್ತ್ರಗ್ರಂಥಗಳ ಅಧ್ಯಯನ ಮಾಡಬೇಕಾಗಿತ್ತು. ಜೋಸೆಫನು ಇದರಲ್ಲಿ ಸಂಪೂರ್ಣ ವಿಫಲನಾದನು. ಓದುವುದಾಗಲಿ, ಬರೆಯುವುದಾಗಲಿ ಅವನಿಗೆ ಬಹಳ ಕಷ್ಟವಾಗುತ್ತಿತ್ತು. ಇಷ್ಟರ ಮಧ್ಯೆ, ಒಂದು ಆಶಾಕಿರಣ ಹೊಳೆಯುತ್ತಿತ್ತು. ಬೈಬಲ್ಲಿನ ಒಂದು ವಾಕ್ಯವನ್ನು ಅವನು ನೆನಪಿನಲ್ಲಿ ಇಟ್ಟುಕೊಂಡಿದ್ದನು. ಅದರ ಬಗ್ಗೆ ಅವನು ಭಾವನಾತ್ಮಕವಾಗಿ ಮಾತನಾಡುತ್ತಿದ್ದನು. ಆ ವಾಕ್ಯ ಹೀಗಿತ್ತು: Blessed is the womb that bore you ('ನಿನ್ನನ್ನು ಧರಿಸಿದ ತಾಯಿಯ ಗರ್ಭ ಪುಣ್ಯತಮವಾದುದು') – St. Luke (xi, 27)

ಭಾನುವಾರ ಮತ್ತಿತರ ವಿಶೇಷ ದಿನಗಳಲ್ಲಿ ಪ್ರಾರ್ಥನಾಸಭೆಯನ್ನು ನಡೆಸುವ ಪುರೋಹಿತ (priest) ಹುದ್ದೆಗಾಗಿ ಅವನು ಪರೀಕ್ಷೆಗೆ ಕುಳಿತುಕೊಂಡನು. ಅದೂ ಚರ್ಚಿನ ಒಬ್ಬ ಉನ್ನತಾಧಿಕಾರಿಯ ಆಜ್ಞೆಯ ಮೇರೆಗೆ. ಪ್ರಾಥಮಿಕ ಪರೀಕ್ಷೆಯಲ್ಲಿ ತಾನು ಉತ್ತೀರ್ಣನಾಗುತ್ತೇನೆಂದು ಅವನಿಗೇ ನಂಬಿಕೆ ಇರಲಿಲ್ಲ. ಬೇರೆಯವರಿಗಂತೂ ಇದು ನಿಶ್ಚಯವಾಗಿ ಹೋಗಿತ್ತು. ಆದರೆ ಪರೀಕ್ಷೆಯಲ್ಲಿ ಅವನು ನೆನಪಿನಲ್ಲಿ ಇಟ್ಟುಕೊಂಡಿದ್ದ ಭಾಗವನ್ನೇ ಕೇಳಿಬಿಟ್ಟರು. ಜೋಸೆಫ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿಬಿಟ್ಟ. ಇನ್ನೊಂದು ವರ್ಷ ಅವನು ಕಠಿಣವಾಗಿ ಅಧ್ಯಯನ ಮಾಡಬೇಕಾಗಿತ್ತು. ಅವನಿಗಾಗಿ ಒಬ್ಬ ಶಿಕ್ಷಕನನ್ನೂ ಗೊತ್ತುಮಾಡಲಾಯಿತು. ಆದರೆ ಸಣ್ಣ ಸಣ್ಣ ವಿಷಯವನ್ನೂ ಅವನು ಮರೆತುಬಿಡುತ್ತಿದ್ದನು. ಶಿಕ್ಷಕನಿಗೆ ಸಾಕುಸಾಕಾಯಿತು. ಒಂದು ವರ್ಷದ ನಂತರ ಹೇಗೋ ಪರೀಕ್ಷೆಗೆ ಹೋದನು. ಪರೀಕ್ಷೆಯನ್ನು ಮಾಡಿದ ಬಿಷಪ್ಪನು ಒಳ್ಳೆಯ ಭಾವದಲ್ಲಿದ್ದನು. ಒಬ್ಬನನ್ನು ಪರೀಕ್ಷೆ ಮಾಡಿ, ಸಂತುಷ್ಟನಾಗಿ ಉಳಿದವರು ಕೂಡ ಉತ್ತೀರ್ಣರು ಎಂದು ಘೋಷಿಸಿಬಿಟ್ಟನು. ಹೀಗೆ ಜೋಸೆಫ್ ಕ್ರೈಸ್ತ ಸಂಪ್ರದಾಯದ ಗೌರವಾನ್ವಿತ ಹುದ್ದೆಯಾದ ಪುರೋಹಿತನೂ ಆಗಿಬಿಟ್ಟನು. ಇದನ್ನು ಕೇಳಿ ಎಲ್ಲರೂ ದಂಗಾದರು. ಜೋಸೆಫ್‌ಗೂ ದುಃಖ. ಏಕೆಂದರೆ ಅವನಿಗೆ ಕತ್ತೆ ಲಾಯದ ಜೀವನವೇ ಇಷ್ಟವಾಗಿತ್ತು. ಪುರೋಹಿತನಾಗಿ ಮೆರೆಯುವ ಜೀವನ ಅವನಿಗೆ ಬೇಕಾಗಿರಲಿಲ್ಲ. ಆದರೆ ಭಗವಂತನ ಸಂಕಲ್ಪ ಅತ್ಯಂತ ವಿಚಿತ್ರವಾದುದು, ಅಲ್ಲವೆ? ಪರಮಾತ್ಮನು ತನ್ನವರನ್ನು ತಾನೇ ಆಯ್ಕೆ ಮಾಡಿಕೊಳ್ಳುತ್ತಾನೆ. ಜೋಸೆಫ್ ಅಂಥ ಆಯ್ಕೆ ಮಾಡಿಕೊಂಡವರಲ್ಲಿ ಒಬ್ಬನು. ಆಗ ಅವನಿಗೆ ಕೇವಲ ೨೫ ವರ್ಷ.

ಪುರೋಹಿತನಾದರೂ ಜೋಸೆಫ್ ತನ್ನ ಸರಳ ನಡವಳಿಕೆಯನ್ನು ಬಿಡಲಿಲ್ಲ. ಒಮ್ಮೆ ಕಾಣಿಕೆಗಳನ್ನು ಸ್ವೀಕರಿಸಲು ಊರಿಗೆ ಹೋಗಿದ್ದನು. ಕಾಲಿಗೆ ಚಪ್ಪಲಿಯಿಲ್ಲದೆ, ಬಟ್ಟೆಯಿಲ್ಲದೆ ವಾಪಸ್ಸು ಬಂದನು. ಯಾರೋ ಬಡಜನರು ಅವನ ಚಪ್ಪಲಿಯನ್ನೂ ಕದ್ದಿದ್ದರು. ಅವನಿಗೆ ಅದರ ಪರಿವೆಯೇ ಇರಲಿಲ್ಲ. ಅವನು ಸಂಗ್ರಹಿಸಿದ್ದ ಕಾಣಿಕೆಯ

ಪದಾರ್ಥಗಳೂ ಮಂಗಮಾಯ. ದಾರಿಯಲ್ಲಿ ಅವನನ್ನು ಹೊಡೆದು ಬಡಿದು ಯಾರೋ ತೆಗೆದುಕೊಂಡು ಹೋಗಿದ್ದರು. ಸರಳ ಭಾವ ದಿಂದ ಚರ್ಚಿನ ಮುಖ್ಯಸ್ಥರಿಗೆ ಅವನು, ''ಫಾದರ್, ದಯವಿಟ್ಟು ನನ್ನನ್ನು ಈ ಕೆಲಸಕ್ಕೆ ಕಳಿಸಬೇಡಿ. ದಯವಿಟ್ಟು ನನ್ನನ್ನು ಹೊರಗೆ ಕಳಿಸಲೇಬೇಡಿ'' ಎಂದು ಹೇಳಿದನು.

ತಾನು ಪಡೆದ ವಿದ್ಯಾಭ್ಯಾಸ ಜೋಸೆಫನ ಚಿಂತನೆಯಲ್ಲಿ ಯಾವ ಮಾರ್ಪಾಡನ್ನೂ ತರಲಿಲ್ಲ. ತಾನೊಬ್ಬ ದೊಡ್ಡ ವ್ಯಕ್ತಿಯೆಂಬ ಯಾವ ಭ್ರಮೆಯೂ ಅವನಲ್ಲಿ ಇರಲಿಲ್ಲ. ಜೀವನದಲ್ಲಿ ನೂರಾರು ಆಘಾತ ಗಳನ್ನು ಅವನು ಎದುರಿಸಿದನು. ಅವೆಲ್ಲಕ್ಕೂ ತಾನು ನಿಜವಾಗಿಯೂ ಅರ್ಹನು ಎಂದು ದೀನಭಾವದಿಂದ ಒಪ್ಪಿಕೊಂಡನು. ಪುರೋಹಿತ ಗಿರಿಗೆ ಏರಿದ್ದರೂ, ಮಣ್ಣುಕಲ್ಲುಗಳನ್ನು ಹೊರುವಂಥ ಶ್ರಮದ ಕೆಲಸಗಳನ್ನು ಅವನು ಮಾಡುತ್ತಿದ್ದನು. ಯಾರಾದರೂ ಬೇಡವೆಂದು ಹೇಳಿದರೆ, ''ಈ ಸಹೋದರ ಕತ್ತೆಯು ಇನ್ನೇನು ತಾನೇ ಮಾಡಿ ಯಾನು?'' ಎನ್ನುವನು. ತನ್ನನ್ನೇ ಅವನು ''ಸಹೋದರ ಕತ್ತೆ'' ಎಂದುಕೊಳ್ಳುತ್ತಿದ್ದನು. ಕೊಠಡಿಯನ್ನು ಸೇರಿದ ಮೇಲೆ, 'ಸಹೋದರ ಕತ್ತೆ'ಯನ್ನು ಹೊಡೆದು ಬಡಿದು ದಂಡಿಸಿಕೊಳ್ಳುವನು. ಇನ್ನೂ ಕಷ್ಟ ಪಟ್ಟು ಕೆಲಸಮಾಡಬೇಕೆಂದು ಬೈದುಕೊಳ್ಳುವನು.

ಜೋಸೆಫ್‌ನ ಬಾಳುವೆಯ ಈ ಘಟ್ಟದಲ್ಲಿ ಅದ್ಭುತ ಘಟನೆಗಳು ನಡೆಯಲಾರಂಭಿಸಿದವು. ಮೊದಲನೆಯದು ಅವನ ಪ್ರಾರ್ಥನೆ. ಚಿಕ್ಕ ವಯಸ್ಸಿನಿಂದಲೂ ಜಗತ್ತಿನ ಪರಿವೆಯೇ ಇಲ್ಲದೆ, ಅನನ್ಯ ಮನಸ್ಕನಾಗಿ ಏಕಾಗ್ರಚಿತ್ತದಿಂದ ಪ್ರಾರ್ಥಿಸುತ್ತಿದ್ದನು. ಇದು ಭಗ ವಂತನು ಅವನಿಗೆ ಕೊಟ್ಟ ದೊಡ್ಡ ಬಳುವಳಿಯಾಗಿತ್ತು. ಈ ಅದ್ಭುತ ಶಕ್ತಿಯು ಅವನಲ್ಲಿ ಈಗ ಪೂರ್ಣ ಬೆಳೆದುನಿಂತಿತು. ಸೃಷ್ಟಿಕರ್ತನಾದ ಭಗವಂತನನ್ನು ಇಡೀ ಸೃಷ್ಟಿಯಲ್ಲಿ ಕಾಣಬಲ್ಲ ಅದ್ಭುತ ಅತೀಂದ್ರಿಯ ಶಕ್ತಿಯನ್ನು ಅವನು ಪಡೆದುಕೊಂಡನು. ಇದು ಎರಡನೆಯ ಅದ್ಭುತ. ಈ ಅಪೂರ್ವ ಅನುಭವವು ಅವನ ಹೃದಯ ಮನಸ್ಸು ಗಳನ್ನು ಸೂರೆಗೊಳ್ಳುತ್ತಿತ್ತು. ಹಲವು ದಿನಗಳ ಕಾಲ ಅವನ ಮನಸ್ಸನ್ನು ಭಾವಲಹರಿಯಲ್ಲಿ ತೇಲಾಡುವಂತೆ ಮಾಡುತ್ತಿತ್ತು. ಮೂರನೆಯ ಅದ್ಭುತವಂತೂ ಅಸಾಧಾರಣವಾದುದು. ಪ್ರಾರ್ಥನಾ ಸಭೆಯಲ್ಲಿ ಮಂಡಿಯೂರಿ ಬಗ್ಗಿ ಪ್ರಾರ್ಥಿಸುತ್ತಿದ್ದಾಗ, ಅವನ ಶರೀರವು ಯಾವುದೇ ಪ್ರಯತ್ನವಿಲ್ಲದೆ ಮೇಲೇರಿಹೋಗುತ್ತಿತ್ತು. ಈ ಅಲೌಕಿಕ ಪವಾಡವನ್ನು ಕ್ರೈಸ್ತಮತದ ಪರಿಭಾಷೆಯಲ್ಲಿ Levitation ಎಂದು ಕರೆಯುತ್ತಾರೆ.

ಜೋಸೆಫನ ಪವಾಡಶಕ್ತಿಯ ಸುದ್ದಿ ಎಲ್ಲೆಡೆ ಹರಡಿತು. ಇದು ಚರ್ಚಿನ ಉನ್ನತ ಅಧಿಕಾರಿಗಳ ಕಿವಿಯನ್ನೂ ತಟ್ಟಿತು. ಹಲವಾರು ವಿಚಾರಣೆಗಳು ನಡೆದವು. ಸಾಕ್ಷಿ ಸಾಬೀತುಗಳನ್ನು ಸಂಗ್ರಹಿಸ ಲಾಯಿತು. ಜೋಸೆಫ್ ಮಾತ್ರ ಸುತ್ತಲಿನ ಜಗತ್ತಿನ ಪರಿವೆಯೇ ಇಲ್ಲದೆ ತನ್ನ ಭಾವದಲ್ಲಿಯೇ ಮುಳುಗಿರುತ್ತಿದ್ದನು. ಕಡೆಗೆ ಈ ಪವಾಡಗಳು ಸತ್ಯವಾದರೂ, ಜೋಸೆಫ್‌ನನ್ನು ಜನರಿಂದ ದೂರ ವಿರುವ ಏಕಾಂತ ಸ್ಥಳಕ್ಕೆ ಕಳಿಸಬೇಕು ಎನ್ನುವ ಅಭಿಪ್ರಾಯ ಹೊರ ಹೊಮ್ಮಿತು. ಅದರಂತೆಯೇ ಜೋಸೆಫ್‌ನನ್ನು ಪರ್ವತಶ್ರೇಣಿಗಳ ಮಧ್ಯೆ ಇದ್ದ Capuchin convent ಎಂಬಲ್ಲಿಗೆ ಕಳುಹಿಸ ಲಾಯಿತು.

ಈ ಸಂನ್ಯಾಸಿ ಮಠದಲ್ಲಿ ಜೋಸೆಫ್‌ನನ್ನು ಗೃಹಬಂಧನದಲ್ಲಿ ಇರಿಸಲಾಯಿತು. ಅವನು ಅಲ್ಲಿ ಹೊರಗಿನ ಯಾರೊಡನೆಯೂ ಮಾತನಾಡುವಂತಿರಲಿಲ್ಲ. ಯಾವ ಪತ್ರವನ್ನೂ ಬರೆಯುವಂತಿರ ಲಿಲ್ಲ. ಅವನಿಗೆ ಬಂದ ಯಾವ ಪತ್ರವನ್ನು ಅವನಿಗೆ ಕೊಡುತ್ತಲೂ ಇರಲಿಲ್ಲ. ಅವನು ಆ ಮಠದ ಹೊರಗಡೆ ಹೋಗಲು ಅನುಮತಿ ಇರಲಿಲ್ಲ. ಹೊರಜಗತ್ತಿನ ಜೊತೆಗೆ ಎಲ್ಲ ಬಗೆಯ ಸಂಬಂಧವೂ ಅವ ನಿಗೆ ಕಡಿದುಹೋಗಿತ್ತು. ಹೀಗೆ ಏಕೆ ತನ್ನನ್ನು ಹಿಂಸಿಸುತ್ತಿದ್ದಾರೆ ಎಂದು ಜೋಸೆಫ್ ಆಶ್ಚರ್ಯಪಡುತ್ತಿದ್ದನು. ಆದರೆ ಅವನಿಗೆ ಇದ್ದುದು ಒಂದೇ ದುಃಖ – ತನ್ನ ಪ್ರಿಯವಾದ ಮೂಲಮಠವನ್ನು ಬಿಟ್ಟು ಈ ಅಜ್ಞಾತ ಸ್ಥಳಕ್ಕೆ ಬಂದುಬಿಟ್ಟೆನಲ್ಲಾ ಎನ್ನುವುದು.

ಇಷ್ಟೆಲ್ಲ ಆದರೂ, ಅವನಿರುವ ಜಾಗವನ್ನು ಜನರು ಹೇಗೋ ಪತ್ತೆಮಾಡಿದರು. ಅವನ ಆಶೀರ್ವಾದವನ್ನು ಪಡೆಯಲು ಜನರು ಅಧಿಕ ಸಂಖ್ಯೆಯಲ್ಲಿ ಬರಲಾರಂಭಿಸಿದರು. ಅಧಿಕಾರಿಗಳು ಜೋಸೆಫ್ ನನ್ನು ಇನ್ನೊಂದು ರಹಸ್ಯವಾದ ಜಾಗಕ್ಕೆ ಕಳಿಸಿದರು. ಅಲ್ಲೂ ಇದೇ ಪರಿಸ್ಥಿತಿ ಬಂದೊದಗಿತು. ಅವನು ಮರಣಹೊಂದುವ ತನಕವೂ ಅವನನ್ನು ಒಂದು ಮಠದಿಂದ ಇನ್ನೊಂದು ಮಠಕ್ಕೆ ಸ್ಥಳಾಂತರ ಗೊಳಿಸುತ್ತಿದ್ದರು. ಅವನ ಜೀವನದ ಕಡೆಯ ಹತ್ತು ವರ್ಷಗಳ ಕಾಲವಂತೂ ಅವನು ಅಕ್ಷರಶಃ ಸೆರೆವಾಸವನ್ನು ಅನುಭವಿಸುತ್ತಿದ್ದಂತೆ ಬಾಳುತ್ತಿದ್ದನು. ಭಕ್ತ ಜನರು ಅವನನ್ನು ಸಂತನೆಂದೇ ಪರಿಭಾವಿಸು ತ್ತಿದ್ದರು. ಆದರೆ ಅವನು ಸಾಯುವವರೆಗೂ ಏಕಾಂತವಾಸವನ್ನೇ ಅನುಭವಿಸಿದನು. ಇದೇ ಪ್ರಭು ಏಸುಕ್ರಿಸ್ತನ ಇಚ್ಛೆಯಾಗಿತ್ತು. ಅದಕ್ಕೆ ತಲೆಬಾಗಿ ಜೋಸೆಫ್ ಬಾಳಿದನು.

ಇಂಥ ದಾರುಣ ಪರಿಸ್ಥಿತಿಯಲ್ಲಿಯೂ ಅವನ ದಿವ್ಯಶಕ್ತಿಗಳ ಪ್ರದರ್ಶನ ನಡೆದೇ ಇತ್ತು. ಒಂದು ಮುಂಜಾನೆ, ಪ್ರಾರ್ಥನೆ ಮಾಡಲು ಪ್ರಾರ್ಥನಾಮಂದಿರಕ್ಕೆ ಬಂದಿದ್ದನು. ಆಗ ತನ್ನ ಜೊತೆ ಯಲ್ಲಿ ಇದ್ದವರಿಗೆ, ಪೋಪ್ ಹಿಂದಿನ ರಾತ್ರಿ ಮರಣಹೊಂದಿದ ನೆಂದು ಹೇಳಿದನು. ನಂತರವಷ್ಟೇ ಪೋಪ್ ಸತ್ತ ಸುದ್ದಿ ತಿಳಿದುಬಂತು. ಇದೇ ರೀತಿ ಇನ್ನೊಬ್ಬ ಪೋಪನ ವಿಷಯದಲ್ಲಿಯೂ ಅವನ ಮರಣದ ಸುದ್ದಿಯನ್ನು ಮೊದಲೇ ಜೋಸೆಫ್ ಕೊಟ್ಟನು.

ಜೋಸೆಫನ ಜೀವನದ ಕಡೆಯ ಆರು ವರ್ಷಗಳಲ್ಲಿ ಅವನಿಗೆ ಕೆಲವು ಸವಲತ್ತುಗಳನ್ನು ನೀಡಲಾಯಿತು. ಆದರೆ ಅಷ್ಟರಲ್ಲಿ ಇನ್ನೊಂದು ಏಕಾಂತ ಸ್ಥಳಕ್ಕೆ ಕಳಿಸಲಾಯಿತು. ಚರ್ಚಿನ ಸದಸ್ಯರಿಂದ ಅವನನ್ನು ದೂರ ಇರಿಸಲಾಯಿತು. ತನ್ನ ಏಕಾಂತ ಕೊಠಡಿಯ ಪಕ್ಕದಲ್ಲಿ , ಅವನಿಗೆ ಮಾತ್ರವೇ ಪ್ರತ್ಯೇಕವಾದ ಒಂದು ಚಿಕ್ಕ ಪ್ರಾರ್ಥನಾ ಮಂದಿರವಿತ್ತು. ಅದರಲ್ಲಿ ಅವನಿಗೆ ಮಾತ್ರ ಪ್ರಾರ್ಥನೆ ಮಾಡುವ ಅವಕಾಶವಿತ್ತು. ತನ್ನ ಊಟವನ್ನೂ ಅವನು ಪ್ರತ್ಯೇಕ ವಾಗಿಯೇ ಮಾಡಬೇಕಾಗಿತ್ತು. ಹೀಗೆ ಅವನು ಹಲವಾರು ವರ್ಷಗಳ ಕಾಲ ಸಂಪೂರ್ಣ ಏಕಾಂತದ ಜೀವನವನ್ನು ನಡೆಸಿದನು. ತನ್ನ ಈ ಅಂತಿಮ ಧಾಮದಲ್ಲಿ, ಯಾರೂ ಕೇಳುವವರಲ್ಲದೆ, ಯಾರೂ ವಿಚಾ

ರಿಸುವವರಿಲ್ಲದೆ, ಯಾರನ್ನೂ ನೋಡಲೂ ಆಗದ ಸ್ಥಿತಿಯಲ್ಲಿ ಅವನು ತನ್ನ ಬಾಳನ್ನು ನಡೆಸಿದನು. ಈ ಕಾಲದಲ್ಲಿ ಅವನ ಭಗವದ್ದರ್ಶನದ ಅನುಭವಗಳು ಇನ್ನೂ ಹೆಚ್ಚಾಗುತ್ತ ಹೋದವು. ಭಗವದುನ್ಮಾದದ ಅವಸ್ಥೆಯು ಇನ್ನೂ ತೀವ್ರವಾಗುತ್ತ ಹೋಯಿತು. ದಡ್ಡನೆಂದು ಪರಿಗಣಿಸಿದ್ದ ಈ ಸಂತನು ಪ್ರತಿಕ್ಷಣವೂ ಭಗವದಾನಂದವನ್ನು ಅನುಭವಿಸುತ್ತಿದ್ದನು.

ಅವನ ಕೊನೆಗಾಲ ಸಮೀಪಿಸಿತು. ೧೬೬೩ರ ಆಗಸ್ಟ್ ೧೦ರಂದು ಅವನು ವಿಪರೀತ ಜ್ವರಕ್ಕೆ ತುತ್ತಾದನು. ಆದರೂ ಪ್ರತಿನಿತ್ಯ ಮುಂಜಾನೆ ಪ್ರಾರ್ಥನೆಯನ್ನು ಆಲಿಸಲು ಏಳುತ್ತಿದ್ದನು. ೧೬೬೩ರ ಸೆಪ್ಟೆಂಬರ್ ೧೮ ಕ್ರೈಸ್ತರ ಒಂದು ಪವಿತ್ರ ದಿನ. ಅಂದು ಜೋಸೆಫ್ ಎಂದಿಗಿಂತಲೂ ಹೆಚ್ಚಾಗಿ ಭಗವೋನ್ಮಾದವನ್ನು ಅನುಭವಿಸಿದನು. ಎಂದು ತಾನು ಬೆಳಗಿನ ಸಮಯದ ಪ್ರಾರ್ಥನಾ ಸಭೆಯಲ್ಲಿ ಪಾಲ್ಗೊಳ್ಳಲು ಆಗುವುದಿಲ್ಲವೋ ಅಂದು ಜೀವ ಬಿಡುವೆ ಎಂದು ಮೊದಲೇ ಭವಿಷ್ಯ ನುಡಿದಿದ್ದನು. ಅಂದಿನ ದಿನ ಎಷ್ಟೇ ಪ್ರಯತ್ನಿಸಿದರೂ, ಅವನಿಗೆ ಎದ್ದೇಳಲು ಸಾಧ್ಯವಾಗಲಿಲ್ಲ. ಅಲ್ಲಿ ನೆರೆದಿದ್ದವರಿಗೆ ಅವನು ಒಂದು ಮನವಿಯನ್ನು ಮಾಡಿದನು. ತನ್ನ ದೇಹವನ್ನು ಯಾವುದಾದರೂ ರಸ್ತೆಬದಿಯಲ್ಲಿ, ಯಾರಿಗೂ ತಿಳಿಯಬರದಂತೆ ಹೂತುಬಿಡಿ ಎನ್ನುವುದೇ ಆ ಮನವಿ. ತಾನು ನಿಧನಹೊಂದಿದ ನಂತರ, ಎಲ್ಲರೂ ತನ್ನನ್ನು ಮರೆತುಬಿಡಬೇಕು ಎನ್ನುವುದೇ ಅವನ ಇಚ್ಛೆಯಾಗಿತ್ತು.

ಕಡೆಯ ಕ್ಷಣದಲ್ಲಿ ಅವನ ಭಗವದುನ್ಮಾದ ಇನ್ನೂ ಉತ್ಕಟವಾಯಿತು. ಅವನು ಕ್ರಿಸ್ತನ ಪ್ರಾರ್ಥನೆಯನ್ನು ಸತತವಾಗಿ ಉಚ್ಚರಿಸುತ್ತಿದ್ದನು. ಸಂತ ಪಾಲನ ಉಕ್ತಿಯನ್ನು ಮತ್ತೆ ಮತ್ತೆ ಹೇಳುತ್ತಿದ್ದನು. 'ನಾನು ಕ್ರಿಸ್ತನಲ್ಲಿ ಐಕ್ಯವಾಗಲು ಇಚ್ಛಿಸುತ್ತೇನೆ' ಎನ್ನುವುದೇ ಆ ಉಕ್ತಿ. ಪಕ್ಕದಲ್ಲಿ ಕುಳಿತಿದ್ದವರು ಭಗವತ್ಪ್ರೇಮದ ವಿಷಯವನ್ನು ಎತ್ತಿದರು. ''ಹೌದು, ಹೌದು, ಇದನ್ನು ಮತ್ತೂ ಹೇಳು, ಮತ್ತೂ ಹೇಳು'' ಎಂದು ಜೋಸೆಫನು ಕೂಗಿಕೊಂಡನು. ಅವನು ಏಸುಕ್ರಿಸ್ತನ ಪವಿತ್ರ ನಾಮವನ್ನು ಮತ್ತೆ ಮತ್ತೆ ಉಚ್ಚರಿಸಿದನು. ''ಭಗವಂತನಿಗೆ ಜಯವಾಗಲಿ, ಭಗವಂತನಿಗೆ ಶುಭವಾಗಲಿ, ಭಗವಂತನ ಪವಿತ್ರ ಇಚ್ಛೆಯು ಪೂರ್ತಿಯಾಗಲಿ'' ಎಂದು ಉದ್ಘೋಷಿಸಿದನು. ಅವನ ಹಳೆಯ ಮುಗ್ಧ ನಗು ಮರುಕಳಿಸಿ ಬಂತು. ಅವನ ನಗು ಸುತ್ತ ನೆರೆದಿರುವವರನ್ನು ಹಸನ್ಮುಖರನ್ನಾಗಿ ಮಾಡಿತು. ಹೀಗೆ ನಗುನಗುತ್ತ ಈ ದೀನ ಸಂತನು ಕ್ರಿಸ್ತನ ಪಾದವನ್ನು ಮುಟ್ಟಿದನು. ಆಗ ಅವನಿಗೆ ಕೇವಲ ೬೦ ವರ್ಷ ವಯಸ್ಸಾಗಿತ್ತು. ಇದಾಗಿ ಸರಿಯಾಗಿ ನೂರು ವರ್ಷಗಳ ನಂತರ, ೧೭೬೭ರಲ್ಲಿ ಕ್ಯಾಥೊಲಿಕ್ ಚರ್ಚ್ ಜೋಸೆಫ್‌ನನ್ನು 'ಸಂತ' ನೆಂದು ಗೌರವಿಸಿತು. ಹೀಗೆ ದೀನ ಜೋಸೆಫ್ ಕ್ಯುಪರ್ಟಿನೋ 'ಸಂತ ಜೋಸೆಫ'ನಾದನು; ಪ್ರಭು ಏಸುವಿನ ಹೆಸರಿನಲ್ಲಿ 'ಧನ್ಯ'ನಾದನು.

ಜಪಾನಿನ ಕಥೆಗಳು

ಚಂದ್ರಕುಮಾರಿ

ಬಂಗಾಳಿ ಮೂಲ : **ರಾಜಕೃಷ್ಣ ಭಟ್ಟಾಚಾರ್ಯ** | ಚಿತ್ರ : **ಜುಂಕೋ ಭಟ್ಟಾಚಾರ್ಯ** | ಕನ್ನಡಾನುವಾದ : **ಗಿರಿಜಾದೇವಿ**

ಇದೊಂದು ಪುರಾತನ ಕಾಲದ ಕತೆ. ಹಸಿರು ಎಲೆಗಳಿಂದ ಕೂಡಿ ದಟ್ಟವಾಗಿ ಬೆಳೆದ ಬಿದಿರು ಮೆಳೆಗಳಿಂದ ತುಂಬಿದ ಕಾಡಿನ ಅಂಚಿನಲ್ಲಿ ಒಬ್ಬ ಮುದುಕಿ ಮತ್ತು ಮುದುಕ ವಾಸವಾಗಿದ್ದರು. ಮುದುಕ ಬಿದಿರು ಕಡಿಯಲು ಪ್ರತಿದಿನವೂ ಕಾಡಿಗೆ ಹೋಗುತ್ತಿದ್ದ. ಬಿದಿರು ಮಾರಿ ಅವರ ಜೀವನ ಸಾಗಿತ್ತು. ಒಂದು ದಿನ ಬಿದಿರು ಕಡಿಯಲು ಹೋದ ಮುದುಕ ಒಂದು ಬಿದಿರಿನ ಮಧ್ಯೆ ಆಕರ್ಷಕವಾದ ಬೆಳಕಿನ ಪ್ರಭೆಯನ್ನು ಕಂಡನು. ಆಗ ಇಳಿಹೊತ್ತು. ಆ ರೀತಿಯ ಬೆಳಕನ್ನು ಅವನು ಹಿಂದೆಂದೂ ಕಂಡಿರಲಿಲ್ಲ. ಮುದುಕ ಬಹು ಎಚ್ಚರಿಕೆಯಿಂದ ಆ ಬಿದಿರನ್ನು ಕಡಿದ. ಆಶ್ಚರ್ಯ! ಬಿದಿರಿನೊಳಗೆ ಅತ್ಯಂತ ಸುಂದರವಾದ ಚಿಕ್ಕ ಹೆಣ್ಣುಮಗುವೊಂದು ಇತ್ತು. ಇವನಿಗೆ ಮಕ್ಕಳಿರಲಿಲ್ಲ. ಈ ಮಗುವನ್ನು ಕಂಡು ಅವನಿಗೆ ಬಹಳ ಸಂತೋಷವಾಯಿತು. ಮಗುವನ್ನು ಅತ್ಯಂತ ಪ್ರೀತಿಯಿಂದ ಎತ್ತಿಕೊಂಡು ಮನೆಗೆ ಬಂದ. ಮುದುಕಿ ಮಗುವನ್ನು ಆದರದಿಂದ ಸ್ವಾಗತಿಸಿದಳು. ಮುದುಕ ಮತ್ತು ಮುದುಕಿ ಮಗುವನ್ನು ಬಹು ಎಚ್ಚರಿಕೆಯಿಂದ, ಪ್ರೀತಿ

ಯಿಂದ, ಲಾಲನೆ ಪಾಲನೆ ಮಾಡಿ ಬೆಳೆಸ ತೊಡಗಿದರು. ಮತ್ತೂ ಒಂದು ವಿಚಿತ್ರವೆಂದರೆ, ಮುದುಕ ಬಿದಿರು ಕಡಿಯಲು ಕಾಡಿಗೆ ಹೋದಾಗಲೆಲ್ಲ ಬಿದಿರಿನ ಮಧ್ಯೆ ಒಂದಲ್ಲ ಒಂದು ಬೆಲೆಬಾಳುವ ಉಡುಗೊರೆ ಅವನಿಗೆ ಸಿಗುತ್ತಿತ್ತು. ಚಿನ್ನ ಬೆಳ್ಳಿಯ ರೂಪಾಯಿಗಳಿಂದ ಪ್ರಾರಂಭವಾಗಿ ಎಷ್ಟೋ ವಿಧದ ಲೆಕ್ಕಕ್ಕೆ ಸಿಗದಷ್ಟು ಪದಾರ್ಥಗಳನ್ನು ಮುದುಕ ಪಡೆದಿದ್ದ. ಹೀಗೆ ಇವರು ನಿರ್ಯೋಚನೆಯಿಂದ, ಆನಂದದಿಂದ ದಿನ ಕಳೆಯುತ್ತಿದ್ದರು. ಇದೆಲ್ಲವೂ ತಮಗೆ ದೊರೆತ ಅಪೂರ್ವ ಶಿಶುವಿನ ಮಹಿಮೆಯಿಂದಲೇ ಎಂದು ಅವರಿಗೆ ತಿಳಿದಿತ್ತು. ಮುದುಕ ಮುದುಕಿ ಸುಂದರವಾದ ಈ ಮಗುವಿಗೆ 'ಚಂದ್ರಕುಮಾರಿ' ಎಂದು ನಾಮಕರಣ ಮಾಡಿದ್ದರು. ಚಂದ್ರನ ಬೆಳಕಿನಂತೆ ಬೆಳಕು ಚಿಮ್ಮುತ್ತಾ ಬಂದ ಕಾರಣ ಅವಳಿಗೆ ಈ ಹೆಸರನ್ನು ಇಡಲಾಗಿತ್ತು. ಚಂದ್ರಕುಮಾರಿ ಅಪರೂಪದ ಸುಂದರಿ ಎಂದು ಎಲ್ಲರೂ ಮಾತನಾಡಿಕೊಳ್ಳುತ್ತಿದ್ದರು. ಅವಳ ರೂಪಕ್ಕೆ ಮರುಳಾದ ಅನೇಕ ಯುವಕರು ಅವಳನ್ನು ವಿವಾಹವಾಗಲು ಆಶಿಸಿದರು. ಆದರೆ ಅವಳಿಗೆ ಮದುವೆಯಾಗಲು ಇಷ್ಟವಿರಲಿಲ್ಲ. ಆದ್ದರಿಂದ, ಮದುವೆಯಾಗಲು ಬಯಸಿ ಬಂದ ಯುವಕರಿಗೆ ಬಹು ಕಠಿಣತರವಾದ ಕೆಲಸಗಳನ್ನೂ, ಯಾರಿಂದಲೂ ಮಾಡಲಾಗದ ಕೆಲಸಗಳನ್ನೂ ಮಾಡಲು ಹೇಳುತ್ತಿದ್ದಳು. ಆ ಕೆಲಸ ಮಾಡಲಾರದೆ ಸೋತವರನ್ನು ಅವಳು ಮದುವೆಯಾಗಲು ನಿರಾಕರಿಸುತ್ತಿದ್ದಳು. ಈ ರೀತಿ ಕೆಲವು ದಿನಗಳು ಕಳೆದ ಮೇಲೆ ಎಲ್ಲರಿಗೂ ಅರ್ಥವಾಯಿತು, ಅವಳಿಗೆ ಮದುವೆಯಾಗಲು ಇಚ್ಛೆಯಿಲ್ಲ - ಎಂದು. ಮುದುಕ, ಮುದುಕಿ ಈ ವಿಷಯದಲ್ಲಿ ಮತ್ತೆ ಚಂದ್ರಕುಮಾರಿಗೆ ಬೇಸರ ಉಂಟು ಮಾಡಲಿಲ್ಲ. ಅವಳ ಮದುವೆ ವಿಷಯವನ್ನು ಕೈಬಿಟ್ಟರು. ಆದರೆ ಚಂದ್ರಕುಮಾರಿ ಕೆಲವು ದಿನಗಳಿಂದ ಆಗಾಗ ಅಳುತ್ತಿದ್ದಳು. ಅವಳ ಕಣ್ಣುಗಳಲ್ಲಿ ನೀರು ಕಂಡ ಮುದುಕ ದುಃಖದಿಂದ ಒಂದು ದಿನ ವಿಚಾರಿಸಿದ, ''ಚಂದ್ರಕುಮಾರಿ, ನೀನು ಅಳುವುದೇಕೆ ಮಗು?'' ಅದಕ್ಕೆ ಅವಳು ಹೇಳಿದಳು, ''ಹುಣ್ಣಿಮೆ ಹತ್ತಿರ ಬರುತ್ತಿದೆ. ನಾನು ಹೊರಟು ಹೋಗಬೇಕಾಗಿದೆ. ನಿಮ್ಮ ಮೇಲೆ ನನಗೆ ಬಹಳ ಪ್ರೀತಿಯುಂಟಾಗಿದೆ, ನಿಮ್ಮನ್ನು ಬಿಟ್ಟು ಹೋಗುವುದು ನನಗೆ ಕಷ್ಟವೂ ಸಂಕಟಮಯವೂ ಆಗಿದೆ.'' ಇವಳ ಮಾತುಗಳನ್ನು ಕೇಳಿ ಮುದುಕಿ ಅವಾಕ್ಕಾದಳು. ಒತ್ತಿಕೊಂಡು ಬಂದ ದುಃಖವನ್ನು ತಡೆದುಕೊಳ್ಳುತ್ತಾ ಪ್ರಶ್ನಿಸಿದಳು, ''ಮಗೂ, ನಮ್ಮನ್ನು ಬಿಟ್ಟು ನೀನು ಎಲ್ಲಿಗೆ ಹೋಗುತ್ತೀಯೆ?'' ಚಂದ್ರಕುಮಾರಿ ಉತ್ತರ ಕೊಟ್ಟಳು, ''ನಾನು ನಿಜಕ್ಕೂ ಚಂದ್ರನ ಮಗಳೇ ಹೌದು. ಚಂದ್ರಲೋಕದಿಂದ ನಿಮಗೆ ಆನಂದವನ್ನುಂಟುಮಾಡಲೆಂದೇ ಇಲ್ಲಿಗೆ ಬಂದೆ. ಭೂಲೋಕದಲ್ಲಿ ನನ್ನ ವಾಸದ ದಿನಗಳು ಮುಗಿಯುತ್ತಾ ಬಂದವು. ನಾನು ಮತ್ತೆ ಚಂದ್ರಲೋಕಕ್ಕೇ ವಾಪಸ್ಸು ಹೋಗಬೇಕಾಗಿದೆ. ಬರುವ ಹುಣ್ಣಿಮೆಯ ದಿನ ಚಂದ್ರಲೋಕದಿಂದ ದೂತರು ಬರುತ್ತಾರೆ, ನನ್ನನ್ನು ಕರೆದುಕೊಂಡು ಹೋಗಲು.'' ಮುದುಕ ಮುದುಕಿಯರು ಇವಳ ಮಾತು ಕೇಳಿ ದುಃಖಭರಿತರಾದರು. ಇವರು ಎಲ್ಲಾ ಸಮಯದಲ್ಲಯೂ ಅವಳೊಂದಿಗೇ ಇರುತ್ತಿದ್ದರು ಮತ್ತು ಅವಳನ್ನು ಬಹಳವಾಗಿ ಆದರಿಸಿ ಪ್ರೀತಿಸುತ್ತಿದ್ದರು. ಹುಣ್ಣಿಮೆಯ ದಿನ ಬಂದೇ ಬಿಟ್ಟಿತು. ಬೆಳಗಿನಿಂದಲೇ ವಿಧವಿಧವಾದ ತಿಂಡಿ ಪದಾರ್ಥಗಳನ್ನು ತಯಾರಿಸಿ, ಅವಳಿಗೆ ತಿನ್ನಿಸಿ, ದಿನವನ್ನು ಆನಂದದಿಂದ ಕಳೆದರು. ತಮ್ಮ ಮಗಳು ಮಾವನ ಮನೆಗೆ ಹೊರಟುಬಿಡುತ್ತಾಳೆನ್ನುವ ಭಾವನೆ ಅವರದು. ಆದ್ದರಿಂದ ಮನಸ್ಸಿನ ದುಃಖವನ್ನು ಮನಸ್ಸಿನಲ್ಲೇ ಅಡಗಿಸಿ ಇಟ್ಟುಕೊಂಡರು. ಹುಣ್ಣಿಮೆಯ ಚಂದ್ರ ಆಕಾಶದಲ್ಲಿ ಮೂಡುತ್ತಿದಂತೆಯೇ ಚಂದ್ರಲೋಕದಿಂದ ದೂತರು ಬಂದರು. ಈಗ ಬೀಳ್ಕೊಳ್ಳುವ ಸಮಯ. ಚಂದ್ರಕುಮಾರಿಯನ್ನು ಅಕ್ಕರೆಯಿಂದ ಅಪ್ಪಿಕೊಂಡು ಮುತ್ತಿಟ್ಟು ವಿದಾಯ ಹೇಳಿದರು. ಮುದುಕ ಮುದುಕಿ ಕಣ್ಣೀರು ಸುರಿಸುತ್ತಾ ನಿಂತರು. ಚಂದ್ರಕುಮಾರಿ ದೂತರೊಂದಿಗೆ ಚಂದ್ರಲೋಕಕ್ಕೆ ಹೊರಟುಹೋದಳು. ಮುದುಕ, ಮುದುಕಿ ಚಂದ್ರನತ್ತ ನೋಡುತ್ತಲೇ ಇದ್ದುಬಿಟ್ಟರು.

ಸೋದರಿ ನಿವೇದಿತಾ ಭಾಗ ೩

ಕಥೆ: ದೇವಪ್ರಸಾದ ಭಟ್ಟಾಚಾರ್ಯ ಅನುವಾದ: ಉಷಾ ಎಸ್. ಮೂರ್ತಿ ಚಿತ್ರ: ಸುನಿತಾ ವಾಸು




ಸ್ವಾಮೀಜಿಯವರ ಈ ಕಾರ್ಯಯೋಜನೆಯ ವಿವರಗಳನ್ನು ತಿಳಿಯಲು ಅವಳು ಅವರಿಗೆ ಪತ್ರವನ್ನು ಬರೆದಳು.
ಸ್ವಾಮೀಜಿ ಅದಕ್ಕೆ ತಕ್ಷಣ ಉತ್ತರಿಸಿದರು.
ಅವರು ತಮ್ಮ ಜೀವನದ ಧ್ಯೇಯವನ್ನು ವಿವರಿಸಿದರು ಮತ್ತು ನೊಂದವರ, ಬಡವರ ಸೇವೆ ಮಾಡುವ ಮನಸ್ಸುಳ್ಳ ನಿಃಸ್ವಾರ್ಥ ಯುವಕ ಯುವತಿಯರನ್ನು ಈ ಕಾರ್ಯಕ್ಕೆ ಆಹ್ವಾನಿಸಿದರು.
ನನಗೆಷ್ಟು ಆನಂದವಾಗುತ್ತಿದೆ! ಸ್ವಾಮೀಜಿ ನನ್ನ ಮಾತುಗಳನ್ನು ಪರಿಗಣಿಸಿದ್ದಾರೆ.
ಭಾರತಕ್ಕೆ ಬರಬೇಕೆಂಬ ಅವಳ ತವಕ ದಿನೇ ದಿನೇ ಹೆಚ್ಚುತ್ತಿತ್ತು. ಸ್ವಾಮೀಜಿಯವರ ಆದೇಶವನ್ನು ಅವಳು ಎದುರುನೋಡುತ್ತಿದ್ದಳು.
ಕೊನೆಗೂ ಅವರು ಅವಳನ್ನು ಸ್ವಾಗತಿಸಿದರು. ಅವರು ಎದುರಿಸಬೇಕಾಗಿ ಬರಬಹುದಾದ ಕಠಿಣ ಸವಾಲುಗಳನ್ನು ಕುರಿತು ತಿಳಿಸಿದರು.

ಹಲವಾರು ಅಡೆತಡೆಗಳು ಬರಬಹುದು.
ಅಲ್ಲಿ ವರ್ಷದ ಅನೇಕ ದಿನಗಳಲ್ಲಿ ಉಷ್ಣ ವಾತಾವರಣ ಇರುವುದು. ಇಂಗ್ಲೆಂಡಿನಲ್ಲಿರುವ ಯಾವ ಅನುಕೂಲತೆಗಳೂ ಇರುವುದಿಲ್ಲ. ಕಷ್ಟಕಾರ್ಪಣ್ಯಗಳಿಂದ ಬದುಕುತ್ತಿರುವ ಬಡಜನರ ಮಧ್ಯೆ ಬದುಕಬೇಕಾಗಿ ಬರಬಹುದು.
ಮಾರ್ಗರೆಟ್ 1898ರ ಜನವರಿ 28ರಂದು ಕೊಲ್ಕತ್ತೆಗೆ ಬಂದಿಳಿದಳು. ಸ್ವಾಮೀಜಿ ಅವಳನ್ನು ಹಡಗಿನ ಡೆಕ್ಕಿನಲ್ಲಿ ಸ್ವಾಗತಿಸಿದರು.
ಅವಳನ್ನು ಪಾರ್ಕ್‌ಸ್ಟ್ರೀಟ್‌ನಲ್ಲಿನ ಒಂದು ಬಂಗಲೆಗೆ ಕರೆದೊಯ್ದರು.
ಆಕೆ ಮೊದಲ ಕೆಲವು ದಿನಗಳನ್ನು ಈಡನ್ ಗಾರ್ಡನ್, ಬೊಟಾನಿಕಲ್ ಗಾರ್ಡನ್, ಮ್ಯೂಸಿಯಂ, ಕೋಟೆ ಇವುಗಳನ್ನು ನೋಡುವುದರಲ್ಲೇ ಕಳೆದಳು.
ಭಾನುವಾರಗಳಂದು ಚರ್ಚ್‌ನಲ್ಲಿನ ಪ್ರಾರ್ಥನೆಗಳಲ್ಲಿ ಭಾಗವಹಿಸಿದಳು.


ಸ್ವಾಮೀಜಿ ಅವಳಿಗೆ ಬಂಗಾಳೀ ಭಾಷೆಯನ್ನು ಕಲಿಸಲು ಶಿಕ್ಷಕರನ್ನು ನೇಮಿಸಿದರು.
ಮಾರ್ಗರೆಟ್ ಸ್ವಾಮೀಜಿಯವರ ವಿಚಾರಗಳನ್ನು ಸರಿಯಾಗಿ ಅರ್ಥಮಾಡಿಕೊಂಡಳು.
ಮಾರ್ಗರೆಟ್ ಉತ್ತಮ ಭಾಷಣಕಾರಳು. ಸ್ಟಾರ್ ಥಿಯೇಟರ್‌ನಲ್ಲಿ ನಡೆದ 'ರಾಮಕೃಷ್ಣ ಮಿಷನ್'ನ ಪ್ರಾರಂಭೋತ್ಸವದ ಸಭೆಯಲ್ಲಿ ಅವಳು ತನ್ನ ಮೊದಲನೆಯ ಭಾಷಣ ಮಾಡಿದಳು.
ಒಂದು ದಿನ ಮಾರ್ಗರೆಟ್ ಇತರ ಪಾಶ್ಚಾತ್ಯ ಮಹಿಳೆಯರೊಡನೆ ಶ್ರೀಮಾತೆ ಶ್ರೀಶಾರದಾದೇವಿಯವರನ್ನು ಭೇಟಿ ಮಾಡಲು ಹೋದಳು.
ಶ್ರೀಮಾತೆಯವರು ಅವರೆಲ್ಲರನ್ನೂ ತಮ್ಮ ಮಕ್ಕಳೇ ಎಂಬಂತೆ ಪ್ರೀತಿಯಿಂದ ಸ್ವಾಗತಿಸಿದರು.
ಒಬ್ಬರಿಗೊಬ್ಬರ ಭಾಷೆ ಅರ್ಥವಾಗದಿದ್ದರೂ, ಅದರಿಂದ ಸಮಸ್ಯೆಯೇನೂ ಆಗಲಿಲ್ಲ.
ಶ್ರೀಮಾತೆಯವರು ಅವರೊಡನೆ ಊಟ ಮಾಡಿದರು.
ಮುಂದಿನ ಸಂಚಿಕೆಗೆ..

‘ಸ್ವಚ್ಛ ಮಂಗಳೂರು ಅಭಿಯಾನ’ ೩ನೇ ಹಂತದ ಉದ್ಘಾಟನೆ

ಮಂಗಳೂರು ಶ್ರೀರಾಮಕೃಷ್ಣ ಮಿಷನ್ನಿನ ನೇತೃತ್ವದಲ್ಲಿ ನಡೆಸಲಾಗುವ **‘ಸ್ವಚ್ಛ ಮಂಗಳೂರು ಅಭಿಯಾನ’**ದ ೩ನೇ ಹಂತದ ಉದ್ಘಾಟನೆಯು ೨೦೧೬ರ ಅಕ್ಟೋಬರ್ ೨ ರಂದು ಆಶ್ರಮದಲ್ಲಿ ನೆರವೇರಿತು. ೪೦ ವಾರಗಳಲ್ಲಿ ೪೦ ತಂಡಗಳು ಸುಮಾರು ೪೦೦೦ ಮಂದಿ ಸ್ವಯಂಸೇವಕರ ಸಹಾಯದೊಂದಿಗೆ ಮಂಗಳೂರು ನಗರದ ವಿವಿಧ ಪ್ರದೇಶಗಳಲ್ಲಿ ‘ಸ್ವಚ್ಛ ಮಂಗಳೂರು’ ಅಭಿಯಾನವನ್ನು ನಡೆಸಲಿದೆ. ‘ಸ್ವಚ್ಛ ಭಾರತ ಅಭಿಯಾನ’ ದ ಅಂಗವಾಗಿ ನಡೆಯುವ ಈ ಕಾರ್ಯಕ್ರಮದಲ್ಲಿ ೫೦೦೦ಕ್ಕೂ ಹೆಚ್ಚು ಸಲಕರಣೆಗಳನ್ನು ಬಳಸಲಾಗುವುದು.

ಕಾರ್ಯಕ್ರದಲ್ಲಿ ‘ಸ್ವಚ್ಛ ಮಂಗಳೂರು’ ಯೋಜನೆಯ ಸಂಯೋಜಕರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರು ಸ್ವಾಗತ ಭಾಷಣ ಮಾಡಿದರು. ಮಂಗಳೂರು ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾದ ಸ್ವಾಮಿ ಜಿತಕಾಮಾನಂದಜಿ ಅಭಿಯಾನವನ್ನು ಕುರಿತು ಹೆಚ್ಚಿನ ಮಾಹಿತಿಗಳನ್ನು ನೀಡಿದರು. ರಾಮಕೃಷ್ಣ ಮಿಷನ್ನಿನ ಸಹ ಕಾರ್ಯದರ್ಶಿಗಳಾದ ಸ್ವಾಮಿ ಬೋಧಸಾರಾನಂದಜಿ ಮಹಾರಾಜ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತ, ‘‘ಎರಡು ವರ್ಷಗಳಿಂದ ಯಶಸ್ವಿಯಾಗಿ ನಡೆಯುತ್ತ ಬಂದಿರುವ ‘ಸ್ವಚ್ಛ ಮಂಗಳೂರು ಅಭಿಯಾನ’ ಈಗ ೩ನೇ ಹಂತವನ್ನು ಪ್ರವೇಶಿಸುತ್ತಿದೆ. ಸ್ವಾಮಿ ವಿವೇಕಾನಂದರು ಹೇಳಿದಂತೆ ಈ ಕಾರ್ಯದಲ್ಲಿ ಪ್ರಧಾನವಾಗಿ ಬೇಕಾಗಿರುವುದು ಹಣವಲ್ಲ, ಜನ. ಜನಸಾಮಾನ್ಯರ ಕಾರ್ಯ ಇದಾಗಬೇಕು’’ ಎಂದರು. ಸಭೆಯಲ್ಲಿ ಭಾಗವಹಿಸಿದ ನಿಟ್ಟೆ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎನ್. ವಿನಯ್ ಹೆಗ್ಡೆ, ಶ್ರೀ ಜೆ.ಆರ್.ಲೋಬೋ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಎಂ.ಆರ್.ಪಿ.ಎಲ್. ನ ನಿರ್ವಾಹಕರಾದ ಶ್ರೀ ವಿ. ಪ್ರಸಾದ್ ಮೊದಲಾದವರು ಭಾಷಣ ಮಾಡಿದರು.

ಈ ಸಂದರ್ಭದಲ್ಲಿ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಹಲವು ದಶಕಗಳಿಂದ ಸೇವೆ ಸಲ್ಲಿಸಿದ ೩೫ ಮಂದಿ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು. ಸಭಾಕಾರ್ಯಕ್ರಮದ ನಂತರ ಸ್ವಯಂಸೇವಕರಿಗಾಗಿ **‘ಸ್ವಚ್ಛ ಭಾರತಕ್ಕಾಗಿ ಸ್ವಚ್ಛ ಮನಸ್ಸು’** ಎಂಬ ವಿಚಾರ ಸಂಕಿರಣ ನಡೆಯಿತು. ಸ್ವಾಮಿ ಬೋಧಸಾರಾನಂದಜಿ ಈ ಸಂಕಿರಣವನ್ನು ಉದ್ಘಾಟಿಸಿದರು. ಪದ್ಮಭೂಷಣ ಡಾ. ಬಿ.ಎಂ. ಹೆಗ್ಡೆ ಹಾಗೂ ವಾಯುದಳದ ಉಪ ಅಧಿಕಾರಿ ರಮೇಶ್ ಕಾರ್ಣಿಕ್ ಉಪನ್ಯಾಸ ನೀಡಿದರು. ‘ಸ್ವಚ್ಛ ಮಂಗಳೂರು ಅಭಿಯಾನ’ದ ಸಹ ಸಂಯೋಜಕರಾದ ಸ್ವಾಮಿ ಏಕಗಮ್ಯಾನಂದಜಿ ಸ್ವಯಂಸೇವಕರನ್ನು ಉದ್ದೇಶಿಸಿ ಮಾತನಾಡಿದರು. ಬೆಸೆಂಟ್ ಮಹಿಳಾ ಕಾಲೇಜಿನ ಪ್ರಾಧ್ಯಾಪಕರಾದ ಸ್ಮಿತಾ ಶೆಣೈ ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆ ಮಾಡಿದರು.

೩ ದಿನಗಳ ‘ಮೌಲ್ಯಶಿಕ್ಷಣ ವಿಚಾರ ಸಂಕಿರಣ’

ಮಂಗಳೂರು ರಾಮಕೃಷ್ಣ ಮಠವು ಮೂರು ದಿನಗಳ **ಮೌಲ್ಯಶಿಕ್ಷಣ ವಿಚಾರ ಸಂಕಿರಣ** ವನ್ನು ಸೆಪ್ಟೆಂಬರ್ ೧, ೨ ಹಾಗೂ ೩ರಂದು ನಡೆಸಿತು. ಮೊದಲ ದಿನ ನಡೆದ ಇಡೀದಿನದ ಕಾರ್ಯಕ್ರಮದಲ್ಲಿ ಸುಮಾರು ೫೦೦ ಮಂದಿ ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಿದರು. ಎರಡನೇ ದಿನ ಸುಮಾರು ೨೫೦ ಮಂದಿ ಕಾಲೇಜು ಉಪನ್ಯಾಸಕರು ‘ಪುನಶ್ಚೇತನ ಶಿಬಿರ’ದಲ್ಲಿ ಪಾಲ್ಗೊಂಡರು. ಮೂರನೇ ದಿನ ನಡೆದ ವಿಚಾರ ಸಂಕಿರಣದಲ್ಲಿ ಸುಮಾರು ೫೦೦ ಮಂದಿ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಹಾಜರಿದ್ದರು. ಈ ಸಂದರ್ಭದಲ್ಲಿ ಉನ್ನತ ವಿದ್ಯಾಭ್ಯಾಸಕ್ಕಾಗಿ ೧೨೦ ಮಂದಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಯಿತು. ಮೂರು ದಿನ ಶಿಬಿರಾರ್ಥಿಗಳಿಗೆ ಊಟೋಪಚಾರ, ಪುಸ್ತಕ ರೂಪದ ಉಡುಗೊರೆ ಹಾಗೂ ಪ್ರಶಸ್ತಿಪತ್ರ ನೀಡಲಾಗಿತ್ತು . ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರಾದ ಶ್ರೀ ಬಸವರಾಜ ರಾಯರೆಡ್ಡಿಯವರು ಸೆಪ್ಟೆಂಬರ್ ೨ ರಂದು ಆಶ್ರಮವನ್ನು ಸಂದರ್ಶಿಸಿ, ಅಂದಿನ ಕಾರ್ಯಕ್ರಮವನ್ನು ಉದ್ಘಾಟಿಸಿದರು.

Managing Editor : Swami Atmajnananda Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

Make Your Dream Destination Come True

Senior Special Travel America 2017

Group Travel Bangalore - Bangalore*
Special Offer price valid till 30 November 2016
***All inclusive package**
Hurry!!! Limited seats only!!!

East coast & West coast

Places Covered:

New York
Washington DC
Niagara Falls
Las Vegas
Los Angeles
San Francisco

Whitehouse

Golden Gate

Las Vegas


Niagara Falls

For booking & more details, please contact:

Basavanagudi
98, 1st Floor, D.V.G Road,
Basavanagudi,
Bangalore - 560004.
Office: 080-26617178
Mob: **+91 9900080796**

Malleshwaram
198, 1st Floor,Yathrirajmath
Building, Malleshwaram,
Bangalore - 560003.
Office: 080 - 41204155/23445559
Mob: **+91 9900080793**

Langford Town
4,1st Floor, O Shaughnessy
Road, Langford Town,
Bangalore - 560025.
Office : 080 – 22221645
Mob: **+91 9900080799**

*All inclusive: Visa / Accommodation / All Transfers / Entrance Fee / All Taxes / Services of Tour Manager.

VIVEKA PRABHA (KANNADA MONTHLY)
November 2016, Vol.17, No.11 , No.of pages : 44

Registered With Registrar of News Papers Of India under 72356/2000.postal Regn.No.KA/SK/MYS/480/ 2015-17. LICENCED TO POST W.P.P.AT YADAVAGIRI MYSORE 570 020,VIDE LICENCE NO.SK/WPP/MYS/155/2015-17

With Best Compliments from

Crystal Blue
Water Structuring Unit

CRYSTAL BLUE

Transforming Borewell Water into Life-Enhancing Energized Water benefitting Soil, Plants, Animals & People

Structured Water

Benefits - Human Beings

- Increases the oxygen content in the blood.
- Helps alleviate the effects of altitude sickness.
- Assists the immune system response in only 7 days.
- Increases hydration on an intra-and extra-cellular level.
- Aids in reducing swollen joints due to arthritis.
- Turns tap water into the properties of natural spring water.
- Erases the negative water memory before you ingest it.

Benefits - Dairy

- Increased Milk Production
- Improved cow and calf health
- Increased immunity to diseases
- Anaerobic bacteria (& smell) eradicated

Benefits - Agriculture

- Dramatically reduces your water consumption
- Reduces the need for fertilizers and pesticides
- Increases crop yield by 10% - 30%
- Enhances the quality of crop and increases nutrient density

Benefits - Poultry

- Mortality Rate Reduction
- Immunity Enhancement
- Increased Weight
- Improved FCR

KEEPS YOUR PLUMBING & MACHINERY LIKE NEW

Minimal Maintenance required
No filters or parts to replace
Reduces or eliminates hard-water deposits
Appliances & plumbing parts last longer
Dissolves calcium & iron deposits in plumbing lines.

VIJAY
Vijay Precision Dies Pvt. Ltd.,

Collaborators of
Crystal Blue Enterprises, Idaho, USA
to bring Crystal Blue water structuring device to India
Vijay Precision Dies Private Limited
#429, Hebbal Industrial Area, Mysore - 570 016.
Tel: 0821-2412284; e-mail: grk@vwfindustries.com
www.crystalblueindia.com / www.crystalblueent.com

Printed at mayur graphics,Bangalore